*ನವೀನ್ ರಾಜ್ ಸಿಂಗ್, ಭಾ.ಆ.ಸೇ.*
ಸರ್ಕಾರದ ಕಾರ್ಯದರ್ಶಿಗಳು & ವ್ಯವಸ್ಥಾಪಕ ನಿರ್ದೇಶಕರು
ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)

---

ಸಂಖ್ಯೆ. ಕೆಎಸ್ಎಂಸಿಎಲ್:ಆಪ್ತ ಶಾಖೆ:2019–20/1499 ದಿನಾಂಕ 19.09.2019

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಆಡಳಿತ ಸುಧಾರಣೆ)
ಬಹುಮಹಡಿ ಕಟ್ಟಡ
ಬೆಂಗಳೂರು.

ಮಾನ್ಯರೇ,

ವಿಷಯ: ಹಾಸನ ಜಿಲ್ಲೆ ಪ್ರವಾಹ/ಅತಿವೃಷ್ಟಿ ಹಾಗೂ ಇತರೆ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿರುವ ಬಗ್ಗೆ.

******

ಹಾಸನ ಜಿಲ್ಲೆಯ ಪ್ರವಾಹ/ಅತಿವೃಷ್ಟಿ ಹಾಗೂ ಇತರೆ ಇಲಾಖೆಗಳ ಪ್ರಗತಿ ಕುರಿತು ದಿನಾಂಕ 23.03.2019 ರಂದು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯ ನಡವಳಿಯನ್ನು ತಮ್ಮ ಮಾಹಿತಿಗಾಗಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಹಾಸನ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿಗಳು
ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಎಂಸಿಎಲ್

20/9/19

**ಶ್ರೀ ನವೀನ್ ರಾಜ್ ಸಿಂಗ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೋರೇಷನ್ ಲಿ. ಬೆಂಗಳೂರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 13-08-2019 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಪ್ರವಾಹ/ಅತಿವೃಷ್ಟಿ ಹಾಗೂ ಇತರೆ ಇಲಾಖೆಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

*****

**ಹಾಜರಾತಿ: ಹಾಜರಾತಿ ವಹಿಯಲ್ಲಿರುವಂತೆ**

ಮಾನ್ಯ ಜಿಲ್ಲಾಧಿಕಾರಿಗಳು ಸಭೆಗೆ ಆಗಮಿಸಿದ್ದ ಸಭಾಧ್ಯಕ್ಷರನ್ನು, ಗಣ್ಯರನ್ನು, ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಿದರು.

- ಮಾನ್ಯ ಜಿಲ್ಲಾಧಿಕಾರಿಗಳು ಮಾನ್ಯ ಸಭಾಧ್ಯಕ್ಷರು ಹಾಗೂ ಸಭೆಗೆ ಜಿಲ್ಲೆಯಲ್ಲಿ ಉಂಟಾಗಿರುವ ಪ್ರವಾಹ/ಅತಿವೃಷ್ಟಿ ಪರಿಸ್ಥಿತಿ ಹಾಗೂ ಮಳೆ ವಿವರ ಮಳೆ ಹಾನಿಗಳು ಪರಿಹಾರ ಕಾರ್ಯಾಚರಣೆಗಳ ಬಗ್ಗೆ ಅವಲೋಕಿಸಲು ಕೋರುತ್ತಾ ಪ್ರಾತ್ಯಕ್ಷತೆ ಮೂಲಕ ವಿವರಿಸಿದರು.

- ಮಾನ್ಯ ಸಭಾಧ್ಯಕ್ಷರು ಮಳೆ ವಿವರ ಪ್ರಸ್ತಾಪಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಮಳೆ ವಿವರಗಳನ್ನು ವಿವರಿಸುತ್ತಾ, ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ ಮೇ, ಜೂನ್, ಜುಲೈ ಮಾಹೆಗಳಲ್ಲಿ ಕಡಿಮೆ ಪ್ರಮಾಣದ ಮಳೆಯಾಗಿರುತ್ತದೆಂದು ಕಳೆದ 05 ದಿನಗಳಲ್ಲಿ ಶೇ.728 ರಷ್ಟು ಅಧಿಕ ಮಳೆಯಾಗಿರುತ್ತದೆ ಎಂದು ಮಾಹಿತಿ ನೀಡಿದರು.

- ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ತುರ್ತು ಪರಿಹಾರ ಕಾರ್ಯಾಚರಣೆಗಳ ತಂಡಗಳನ್ನು ರಚಿಸಿರುವುದಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿರುವುದಾಗಿ ತಿಳಿಸಿದರು. ಜಿಲ್ಲಾ ಪಂಚಾಯತ್, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಅಗ್ನಿಶಾಮಕ ಇಲಾಖೆಗಳ ಸಹಭಾಗಿತ್ವದಲ್ಲಿ ತುರ್ತು ಪರಿಹಾರ ಕಾರ್ಯಾಚರಣೆಗಳ ತಂಡಗಳನ್ನು ರಚಿಸಿ ಗ್ರೂಪ್ ಟೀಮ್ ಮಾಡಿರುವುದಾಗಿಯೂ, ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು, ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ತಂಡ ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಂದಾಯ ನಿರೀಕ್ಷಕರು, ಗ್ರಾಮಲೆಕ್ಕಿಗರು, ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳ ಟೀಮ್ ಮಾಡಿ Whatsapp group ಮಾಡಿರುವುದಾಗಿಯೂ ಯಾವುದೇ ಅಹಿತಕರ ಘಟನೆ ಸಂಭವಿಸಿದ ತಕ್ಷಣದಲ್ಲಿ ಮಾಹಿತಿಗಳನ್ನು Whatsapp group, gmail ಗೆ ರವಾನಿಸಲಾಗುತ್ತಿದೆಯೆಂದು ಸಂಬಂಧಿಸಿದ ತಂಡವು ತಕ್ಷಣದಲ್ಲಿ ಪರಿಹಾರ ಕಾರ್ಯಾಚರಣೆಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು. ಈ ರೀತಿಯಾಗಿ ಕಳೆದ ಒಂದು ವಾರದಿಂದ ಮುಂಜಾಗೃತಾ ಕ್ರಮಗಳನ್ನು ಜಿಲ್ಲಾಡಳಿತ ವತಿಯಿಂದ ಕೈಗೊಳ್ಳಲಾಗಿದೆಯೆಂದು ಜಿಲ್ಲೆಯ ಸಂಬಂಧಿಸಿದ ತಹಶೀಲ್ದಾರರುಗಳು ಉಪವಿಭಾಗಾಧಿಕಾರಿಗಳು ಹಾಸನ/ಸಕಲೇಶಪುರ ರವರ ಉಸ್ತುವಾರಿಯಲ್ಲಿ 24 ಗಂಟೆಗಳು ಸತತವಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆಂದು ಸಭೆಗೆ ಮಾಹಿತಿ ನೀಡಿದರು.

- ಸರ್ಕಾರಿ ಕಚೇರಿಗಳಲ್ಲಿ ಬಿಎಸ್‌ಎನ್‌ಎಲ್ ಸಂಸ್ಥೆಯಿಂದ ದೂರವಾಣಿಗಳನ್ನು ಅಳವಡಿಸಿದ್ದು ನೆಟ್ ವರ್ಕ್ ಸಮಸ್ಯೆ ಉಂಟಾಗುವುದರಿಂದ ದೂರವಾಣಿ ಸಂಪರ್ಕಕ್ಕೆ ಅಡಚಣೆ ಉಂಟಾಗುವ ಸಾಧ್ಯತೆ ಇರುವುದರಿಂದ ಬಿಎಸ್‌ಎನ್‌ಎಲ್ ಸಂಸ್ಥೆಯವರಿಗೆ ಎಸ್.ಡಿ.ಆರ್.ಆಫ್/

ಎನ್.ಡಿ.ಆರ್.ಎಫ್. ಅನುದಾನದಲ್ಲಿ ಸದರಯವರಿಗೆ ಅಗತ್ಯವಿರುವ ಡೀಸೆಲ್ ನೀಡಲಾಗುತ್ತಿದ್ದು ಎಲ್ಲಾ ಪ್ರದೇಶಗಳಲ್ಲೂ ಸಂಪರ್ಕಕ್ಕೆ ತೊಂದರೆಯಾಗದಂತೆ ಗಮನಹರಿಸಲು ಸೂಚಿಸಿರುವುದಾಗಿಯು, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಕಂಟ್ರೋಲ್ ರೂಮ್‌ಗಳು 24 ಗಂಟೆಯು ಕಾರ್ಯ ನಿರ್ವಹಿಸುತ್ತಿರುವುದಾಗಿಯೂ ಬಿ.ಎಸ್.ಎನ್.ಎಲ್ ನೆಟ್‌ವರ್ಕ್ ಸಂಪರ್ಕ ಸಮಸ್ಯೆ ಉಂಟಾಗುವ ಸಾಧ್ಯತೆ ಇರುವುದರಿಂದ ಸದರಿ ಕಂಟ್ರೋಲ್ ರೂಂ ಮತ್ತು ತಹಶೀಲ್ದಾರರು, ಉಪವಿಭಾಗಾಧಿಕಾರಿಗಳ ವಾಹನಗಳಿಗೆ ಪೊಲೀಸ್ ವೈರ್‌ಲೆಸ್‌ಗಳನ್ನು ಅಳವಡಿಸಲಾಗಿರುವುದರಿಂದ ಹಾಗೂ ಕಂಟ್ರೋಲ್ ರೂಮ್ ದೂರವಾಣಿ ಮತ್ತು ಅಧಿಕಾರಿಗಳ ಮೊಬೈಲ್ ನಂಬರ್‌ಗಳನ್ನು ಸಾರ್ವಜನಿಕರಿಗೆ ಪ್ರಚಾರ ಮಾಡಲಾಗಿದೆಯೆಂದು ಇದರಿಂದ ತುರ್ತಾಗಿ ಸ್ಪಂದಿಸಲು ಹಾಗೂ ಸಂಬಂಧಿಸಿದ ಅಧಿಕಾರಿಗಳು ಸಿಬ್ಬಂದಿಗಳು ತುರ್ತು ಕಾರ್ಯಾಚರಣೆ ಕೈಗೊಳ್ಳುತ್ತಿರುವರೆಂದು ಮಾಹಿತಿ ನೀಡಿದರು. ಜಿಲ್ಲಾಡಳಿತವತಿಯಿಂದ ಕೈಗೊಂಡಿರುವ ಮುಂಜಾಗೃತಾ ಕ್ರಮಗಳಿಂದಾಗಿ ಜಿಲ್ಲೆಯಲ್ಲಿ ಕಡಿಮೆ ಪ್ರಮಾಣದ ಜೀವಹಾನಿ, ಜಾನುವಾರು ಹಾನಿ ಸಂಭವಿಸಿರುವುದಾಗಿ ತಿಳಿಸಿದರು.

- ಜಿಲ್ಲೆಯಲ್ಲಿ ಕ್ರಮವಾಗಿ ಆಲೂರು ತಾ.-1, ಹಾಸನ ತಾ.-1, ಸಕಲೇಶಪುರ ತಾ.-2 ಒಟ್ಟು 4 ಮಾನವ ಜೀವಹಾನಿ ಹಾಗೂ ಜಾನುವಾರು ಹಾನಿ ಆಲೂರು ತಾ-2, ಹಾಸನ ತಾ.-2, ಸಕಲೇಶಪುರ-1 ಒಟ್ಟು 5 ಜಾನುವಾರುಗಳ ಹಾನಿ ಸಂಭವಿಸಿರುತ್ತದೆಂದು ಮಾಹಿತಿ ನೀಡಿದರು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ತಕ್ಷಣವೇ ಪರಿಹಾರ ವಿತರಿಸಲು ಕ್ರಮಕೈಗೊಳ್ಳಲು ಸೂಚಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಈಗಾಗಲೇ ವೈದ್ಯಕೀಯ ವರದಿಯನ್ವಯ ಪರಿಹಾರ ವಿತರಣೆ ಕ್ರಮಕೈಗೊಳ್ಳಲಾಗುತ್ತಿದೆಂದು ತಿಳಿಸಿದರು.

- ಜಿಲ್ಲೆಯಲ್ಲಿ 9 ಸಹಾಯ/ಕಾಳಜಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಅರಕಲಗೂಡು ತಾ.-154, ಹೊಳೆನರಸೀಪುರ ತಾ-500, ಸಕಲೇಶಪುರ ತಾ.-134 ಒಟ್ಟು 848 ಸಂತ್ರಸ್ಥ ಕುಟುಂಬಗಳನ್ನು ಸಹಾಯ ಕೇಂದ್ರಗಳಿಗೆ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿರುತ್ತದೆಂದು ವಿವರಿಸಿದರು. ಜಿಲ್ಲೆಯ 9 ಸಹಾಯ ಕೇಂದ್ರಗಳಲ್ಲಿ ಒಟ್ಟು 1466 ಸಂತ್ರಸ್ಥರು ಆಶ್ರಯ ಪಡೆದುಕೊಂಡಿರುವುದಾಗಿ ಮಾಹಿತಿ ನೀಡಿದರು.

- ಪ್ರವಾಹ/ ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಆಲೂಗಡ್ಡೆ, ತೆಂಗು, ಅಡಿಕೆ, ಬಾಳೆ, ಶುಂಠಿ, ಬೀನ್ಸ್, ಟೊಮ್ಯಾಟೊ ಇತ್ಯಾದಿ ಬೆಳೆಗಳು ಹಾನಿಗೊಳಗಾಗಿದ್ದು ಆಲೂರು ತಾ.ನಲ್ಲಿ 25.54 ಹೆ. ಪ್ರದೇಶದಲ್ಲಿ ರೂ.1.76 ಲಕ್ಷ, ಅರಕಲಗೂಡು ತಾ. 68 ಹೆ. ಗಳಲ್ಲಿ ರೂ.5.4 ಲಕ್ಷ, ಅರಸೀಕೆರೆ ತಾ. 9.3 ಹೆ.ಗಳಲ್ಲಿ ರೂ.0.90 ಲಕ್ಷ, ಬೇಲೂರು ತಾ. 483.4 ಹೆ.ಗಳಲ್ಲಿ ರೂ.17.33 ಲಕ್ಷ, ಚನ್ನರಾಯಪಟ್ಟಣ ತಾ. 388 ಹೆ.ಗಳಲ್ಲಿ ರೂ.26.78 ಲಕ್ಷ, ಹಾಸನ ತಾ. 1164 ಹೆ.ಗಳಲ್ಲಿ ರೂ.79.46 ಲಕ್ಷ, ಹೊಳೆನರಸೀಪುರ ತಾ.154.8 ಹೆ.ಗಳಲ್ಲಿ ರೂ.9.45 ಲಕ್ಷ ಮತ್ತು ಸಕಲೇಶಪುರ ತಾ. 500 ಹೆ.ಗಳಲ್ಲಿ ರೂ.9.75 ಲಕ್ಷ ಒಟ್ಟು ಜಿಲ್ಲೆಯಲ್ಲಿ 2793.045 ಹೆಕ್ಟೇರ್ ಪ್ರದೇಶಗಳಲ್ಲಿ ರೂ.150.93 ಲಕ್ಷಗಳು ಹಾನಿಗೊಳಗಾಗಿರುತ್ತದೆ.

- ಪ್ರವಾಹ/ ಅತಿವೃಷ್ಟಿಯಿಂದ ಶಿಥಿಲಗೊಂಡ ಮನೆಗಳು ಭಾಗಶ:/ಪೂರ್ಣವಾಗಿ ಬಿದ್ದ ಮನೆಗಳು ಕ್ರವಮಾಗಿ ಆಲೂರು ತಾ.-7, ಅರಕಲಗೂಡು ತಾ-39, ಬೇಲೂರು ತಾ.-43, ಹಾಸನ ತಾ-49, ಹೊಳೆನರಸೀಪುರ ತಾ-91, ಸಕಲೇಶಪುರ ತಾ-4, ನಗರಸಭೆ ಹಾಸನ ವ್ಯಾಪ್ತಿ-187, ಪುರಸಭೆ

ಚನ್ನರಾಯಪಟ್ಟಣ ವ್ಯಾಪ್ತಿ -3, ಪುರಸಭೆ ಹೊಳೆನರಸೀಪುರ-102, ಪುರಸಭೆ ಸಕಲೇಶಪುರ 39, ಪುರಸಭೆ ಬೇಲೂರು -25, ತಾಲ್ಲೂಕು ಪಂಚಾಯತಿ ಅರಕಲಗೂಡು-8, ತಾಲ್ಲೂಕು ಪಂಚಾಯತಿ ಆಲೂರು-3 ಒಟ್ಟು 600 ಮನೆಗಳಿಗೆ ಪರಿಹಾರ ವಿತರಿಸಬೇಕಾಗಿದೆಂದು ಹಾಗೂ 184 ಗ್ರಾಮಗಳು ಅತಿವೃಷ್ಟಿಯಿಂದ ಹಾನಿಗೊಳಗಾಗಿವೆಯೆಂದು ಮಾಹಿತಿ ನೀಡಿದರು. ಸಂತ್ರಸ್ತರಿಗೆ ಅನುಕೂಲವಾಗುವಂತೆ ಮನೆ ಪರಿಹಾರವನ್ನು ಗರಿಷ್ಟ ಪ್ರಮಾಣದಲ್ಲಿ ವಿತರಿಸಲು ಮತ್ತು ಗ್ರಾಮಗಳಲ್ಲಿ ಪುನರ್ವಸತಿಗೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.

- ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರವರು ತಮ್ಮ ವ್ಯಾಪ್ತಿಗೊಳಪಡುವ ರಸ್ತೆ, ಸೇತುವೆ ಕೆರೆ ಕಟ್ಟಡಗಳು ತೀವ್ರ ಹಾನಿಯಾಗಿದ್ದು ದುರಸ್ತಿ ಕಾಮಗಾರಿಗಳ ಬಗ್ಗೆ ಈ ಕೆಳಕಂಡಂತೆ ವಿವರಿಸಿದರು.

| ತಾಲ್ಲೂಕು | ರಸ್ತೆಗಳು ಮತ್ತು ಸೇತುವೆಗಳು | ಕೆರೆಗಳು | ಅಂಗನವಾಡಿ ಕೇಂದ್ರ | ಶಾಲಾ ಕಟ್ಟಡ | ಇತರೆ ಕಟ್ಟಡ | ಒಟ್ಟು ಕಾಮಗಾರಿಗಳ ಸಂ. | ಒಟ್ಟು ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|---|---|---|---|---|
| ಆಲೂರು | 162 | 69 | - | - | 21 | 252 | 1305.00 |
| ಅರಕಲಗೂಡು | 188 | 26 | 42 | 121 | 45 | 422 | 436.50 |
| ಬೇಲೂರು | 120 | 25 | 30 | 40 | 10 | 225 | 704.00 |
| ಹಾಸನ | 322 | 17 | 64 | 187 | 8 | 598 | 1366.80 |
| ಸಕಲೇಶಪುರ | 246 | 45 | 75 | 68 | 41 | 475 | 4938.00 |
| ಹಾಸನ ವಿಭಾಗ ಒಟ್ಟು | 1038 | 182 | 211 | 416 | 125 | 1972 | 10125.80 |

- ತುರ್ತು ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಶಾಶ್ವತ ಕಾಮಗಾರಿಗಳನ್ನು ಕೈಗೊಳ್ಳಲು ರೂ.101 ಕೋಟಿಗಳು ಅಗತ್ಯವಿದೆ ಎಂದು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರವರು ಕೋರಲಾಗಿ, ನರೇಗಾ ಮತ್ತು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮತ್ತು ಜಲಾಮೃತ ಯೋಜನೆಗಳಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದ್ದಲ್ಲಿ ತಕ್ಷಣ ಪ್ರಸ್ತಾವನೆ ತಯಾರಿಸಿ ಅರೆ ಸರ್ಕಾರಿ ಪತ್ರದ ಮುಖೇನ ಸಲ್ಲಿಸಲು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರವರಿಗೆ ಸೂಚಿಸಲಾಯಿತು.

- ಪ್ರವಾಹ/ ಅತಿವೃಷ್ಟಿಯಿಂದ ಲೋಕೋಪಯೋಗಿ ಇಲಾಖಾ ವ್ಯಾಪ್ತಿಗೊಳಪಡುವ ರಸ್ತೆಗಳು ಕಟ್ಟಡಗಳು ಸೇತುವೆಗಳು ಕೆರೆಗಳು ಸಕಲೇಶಪುರ/ ಆಲೂರು ವಿಭಾಗದಲ್ಲಿ ರೂ.1635.74, ಅರಕಲಗೂಡು ತಾಲ್ಲೂಕಿನಲ್ಲಿ ರೂ.688.00, ಬೇಲೂರು ತಾಲ್ಲೂಕಿನಲ್ಲಿ ರೂ.777.75, ಹೊಳೆನರಸೀಪುರ ತಾಲ್ಲೂಕಿನಲ್ಲಿ ರೂ.625.30, ಹಾಸನ ತಾಲ್ಲೂಕಿನಲ್ಲಿ ರೂ.51.65 ಗಳಂತೆ ಒಟ್ಟು ರೂ.3778.44 ಲಕ್ಷಗಳ ಅಂದಾಜು ಹಾನಿಯಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ರವರು ಸಭೆಯ ಗಮನಕ್ಕೆ ತಂದರು.

- ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೊಳಪಟ್ಟ ಮಳೆಯಿಂದಾಗಿ ಹಾನಿಗೊಳಗಾದ ರಸ್ತೆ, ಪಿಕಪ್, ನಾಲೆ, ಕೆರೆ ಮತ್ತಿತರ ಮೂಲಭೂತ ಸೌಕರ್ಯಗಳ ಹಾನಿಗಳು ಒಟ್ಟು ರೂ.570.00 ರೂ.ಲಕ್ಷಗಳು ಆಗಿರುತ್ತದೆಂದು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ರವರು ಸಭೆಗೆ ಮಾಹಿತಿ ನೀಡಿದರು.

- ಅತಿವೃಷ್ಟಿ/ಪ್ರವಾಹದಿಂದ ಜಿಲ್ಲೆಯಲ್ಲಿ ಉಂಟಾಗಿರುವ ಹಾನಿಗಳ ಸಂಬಂಧ ತುರ್ತು ಮೂಲಭೂತ ಸೌಕರ್ಯಗಳ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ- ರೂ.1.00 ಕೋಟಿ, ಲೋಕೋಪಯೋಗಿ ಇಲಾಖೆ- ರೂ.1.00 ಕೋಟಿ, ಸಣ್ಣ ನೀರಾವರಿ ಇಲಾಖೆ- ರೂ.40.00 ಲಕ್ಷ, ನಗರಾಭಿವೃದ್ದಿ ಇಲಾಖೆ- ರೂ.1.00 ಕೋಟಿ ಹಾಗೂ ಆಹಾರ ಇಲಾಖೆ- 50.00 ಲಕ್ಷಗಳಂತೆ ಒಟ್ಟು ರೂ.390.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳ ಪ್ರಕೃತಿ ವಿಕೋಪ ಪಿ.ಡಿ. ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಬಿಡುಗಡೆ ಮಾಡಲು ಸೂಚಿಸಲಾಯಿತು.

- ತುರ್ತು ಪರಿಹಾರ ಕಾರ್ಯಗಳಿಗೆ ಪರಿಹಾರ ಪಾವತಿಸಲು ಜಿಲ್ಲೆಯ ಅರಕಲಗೂಡು, ಆಲೂರು, ಬೇಲೂರು, ಹಾಸನ, ಹೊಳೆನರಸೀಪುರ ಮತ್ತು ಸಕಲೇಶಪುರ ತಾಲ್ಲೂಕುಗಳಿಗೆ ತಲಾ ರೂ.50.00 ಲಕ್ಷಗಳಂತೆ ಹಾಗೂ ಚನ್ನರಾಯಪಟ್ಟಣ, ಅರಸೀಕೆರೆ ತಾಲ್ಲೂಕುಗಳಿಗೆ ತಲಾ ರೂ.20.00 ಲಕ್ಷಗಳಂತೆ ಒಟ್ಟು ರೂ.340.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳ ಪ್ರಕೃತಿ ವಿಕೋಪ ಪಿ.ಡಿ. ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಆಯಾ ತಾಲ್ಲೂಕು ತಹಸೀಲ್ದಾರರಿಗೆ ಬಿಡುಗಡೆ ಮಾಡಲು ಸೂಚಿಸಲಾಯಿತು.

- ಜಿಲ್ಲೆಯಲ್ಲಿ ಉಂಟಾದ ಅತಿಯಾದ ಮಳೆ ಉಂಟಾಗಿ ಮೋಟಾರ್, ಟ್ರಾನ್ಸ್‌ಫಾರ್ಮರ್‌ಗಳು ದುರಸ್ಥಿಯಲ್ಲಿರುವ ಕಾರಣ ಬಹುಗ್ರಾಮ ಯೋಜನೆಯಡಿ ಜಿಲ್ಲೆಯ ಅರಸೀಕೆರೆ ತಾಲ್ಲೂಕು 530 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದ ಕಾರ್ಯವು ಸ್ಥಗಿತಗೊಂಡಿದ್ದು, ಅವಶ್ಯಕ ಸಾಮಾಗ್ರಿಗಳು ಸರಿಪಡಿಸುವವರೆಗೆ ಕುಡಿಯುವ ನೀರು ಅಭಾವವಿರುವ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ ಹಾಗೂ ಜಿಲ್ಲೆಯ ಯಾವುದೇ ಪ್ರದೇಶಗಳಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರು ಅಭಾವ ಉಂಟಾಗದಂತೆ ಎಚ್ಚರವಹಿಸಿ ಅಗತ್ಯ ಕ್ರಮವಹಿಸಲು ನಿರ್ದೇಶನ ನೀಡಲಾಯಿತು.

ಜಿಲ್ಲೆಯಲ್ಲಿ ಪ್ರವಾಹ/ಅತಿವೃಷ್ಟಿಯಿಂದ ಉಂಟಾಗುವ ಹಾನಿಗಳಿಗೆ ತಕ್ಷಣವೇ ಪರಿಹಾರ ಒದಗಿಸುವ ಬಗ್ಗೆ, ಬರ ಪರಿಸ್ಥಿತಿಯಿಂದ ಕುಡಿಯುವ ನೀರು, ಮೇವು ಪೂರೈಕೆ ಹಾಗೂ ಇತರೆ ಯಾವುದೇ ಸಮಸ್ಯೆಗಳು ಉಂಟಾಗದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಭೆ ಕರೆದು ಸೂಕ್ತ ಕ್ರಮವಹಿಸಲು ಹಾಗೂ ಯಾವುದೇ ತೊಂದರೆ ಉಂಟಾದಲ್ಲಿ, ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರತಕ್ಕದ್ದು ಎಂದು ನಿರ್ದೇಶನ ನೀಡಲಾಯಿತು.

**ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

(ನವೀನ್‌ರಾಜ್ ಸಿಂಗ್, ಭಾ.ಆ.ಸೇ.)
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೋರೇಷನ್ ಲಿ. ಬೆಂಗಳೂರು
ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಡಾ: ಜಿ. ಕಲ್ಪನ, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ದೂರವಾಣಿ : ಕಛೇರಿ: 22255827
22032589
ಫ್ಯಾಕ್ಸ್ : 080–22252499
ಇಮೇಲ್: prs-yesd@karnataka.gov.in
ysdsec@gmail.com
2ನೇ ಮಹಡಿ, 2ನೇ ಹಂತ
ಬಹುಮಹಡಿಗಳ ಕಟ್ಟಡ, ಬೆಂಗಳೂರು–560001

ಸಂಖ್ಯೆ: ಯುಸಕ್ರೀ 60 ಅಮುಕಾ 2019 ದಿನಾಂಕ:26–09–2019

## ಟಿಪ್ಪಣಿ

ವಿಷಯ: ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಮೈಸೂರು ಜಿಲ್ಲೆಗೆ ಪ್ರವಾಸ ಕೈಗೊಂಡಿರುವ ಬಗ್ಗೆ ವಿವರ.

*****

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಮೈಸೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಜಿ.ಕಲ್ಪನ |
| 3 | ಭೇಟಿಯಾದ/ ಪ್ರವಾಸದ ದಿನಾಂಕ: | 29–08–2019, 06–09–2019, 07–09–2019, 12–09–2019, 13–09–2019 ಮತ್ತು 20–09–2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. |

ಜಿಲ್ಲೆಯ ಅಭಿವೃದ್ಧಿ ಹಾಗೂ ಯೋಜನಾ ಕಾರ್ಯಕ್ರಮಗಳ ಪರಿಶೀಲನೆಗಾಗಿ ದಿನಾಂಕ: 29–08–2019ರಂದು ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ತಾಲ್ಲೂಕು, ಜಿಲ್ಲೆ, ವಿಭಾಗ ಮತ್ತು ರಾಜ್ಯ ಮಟ್ಟದ ದೇಸರಾ ಕ್ರೀಡಾಕೂಟದ ಸಂಘಟನೆ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು.

ದಿನಾಂಕ:06–09–2019ರಂದು ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ದಸರಾ ಸಿ.ಎಂ.ಕಪ್ ಕ್ರೀಡಾಕೂಟ ಆಯೋಜನೆ ಹಾಗೂ ಮಾನ್ಯತೆ ನೀಡುವ ಕುರಿತು ಚರ್ಚಿಸಲಾಯಿತು.

ದಿನಾಂಕ:07–09–2019 ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು.

...2

ದಿನಾಂಕ:12-09-2019ರಂದು ಮಾನ್ಯ ವಸತಿ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಆಯೋಜಿಸಲಾದ ದಸರಾ-2019 ಸಿದ್ಧತೆ ಕುರಿತಂತೆ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮೈಸೂರು ನಗರ ಪೊಲೀಸ್ ವರಿಷ್ಠಾಧಿಕಾರಿಗಳು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮಹಾನಗರ ಪಾಲಿಕೆ ಆಯುಕ್ತರು, ಮುಡಾ ಆಯುಕ್ತರು ಹಾಗೂ ಇತರೇ ಪ್ರಮುಖ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಭಾಗವಹಿಸಲಾಯಿತು.

ತದನಂತರ 2019ನೇ ಸಾಲಿನ ದಸರಾ ಕ್ರೀಡಾಕೂಟಕ್ಕೆ ಮಾನ್ಯತೆ ನೀಡುವ ಕುರಿತು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಂಟಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅಬಕಾರಿ ಉಪ ಆಯುಕ್ತರು, ಮೈಸೂರು ಜಿಲ್ಲೆ, ಕ್ರೆಡಿಟ್-ಐ ಸಂಸ್ಥೆಯ ಮುಖ್ಯಸ್ಥರು, ಮೈಸೂರು, ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಜಿಲ್ಲೆ, ಹಾಗೂ ಸಲಹೆಗಾರರು, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಇವರುಗಳೊಂದಿಗೆ ದಿನಾಂಕ: 12-09-2019 ಅಪರಾಹ್ನದಂದು ಸುದೀರ್ಘ ಸಭೆ ನಡೆಸಲಾಯಿತು.

ದಿನಾಂಕ:13-09-2019ರಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಮೈಸೂರು ಜಿಲ್ಲೆಯಲ್ಲಿ ದಸರಾ ಕ್ರೀಡಾ ಉಪಸಮಿತಿ ಸದಸ್ಯರಾದ ಅಬಕಾರಿ ಉಪ ಆಯುಕ್ತರು, ಮೈಸೂರು, ಉಪ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು, ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಜಿಲ್ಲೆ ಮತ್ತು ಸಂಬಂಧಿಸಿದ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಮೈಸೂರಿನಲ್ಲಿರುವ 1) ಚಾಮುಂಡಿ ವಿಹಾರ ಕ್ರೀಡಾಂಗಣದ - ಹಾಕಿ ಅಂಕಣ, ಒಳಾಂಗಣ ಕ್ರೀಡಾಂಗಣ ಮತ್ತು ಅಥ್ಲೆಟಿಕ್ ಸಿಂಥೆಟಿಕ್ ಅಂಕಣ 2) ಸೇಂಟ್ ಫಿಲೋಮಿನ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿನ ಫೆನ್ಸಿಂಗ್ ಅಂಕಣ ಮತ್ತು ಫುಟ್‌ಬಾಲ್ ಕ್ರೀಡಾಂಗಣ 3) ಕುಪ್ಪಣ್ಣ ಪಾರ್ಕ್ ಮತ್ತು ಡಾ: ವಿಷ್ಣುವರ್ಧನ್ ಉದ್ಯಾನವನದಲ್ಲಿ ಸಾಹಸ ಕ್ರೀಡೆಗಳ ಪ್ರದರ್ಶನ ಕುರಿತು ಹೆಚ್ಚಿನ ಆದ್ಯತೆ ನೀಡಿ ಪ್ರವಾಸಿಗರನ್ನು ಮತ್ತಷ್ಟು ಉತ್ತಮ ಸೌಲಭ್ಯಗಳೊಂದಿಗೆ ಆಕರ್ಷಿಸುವಂತೆ ಸಲಹೆ ನೀಡಲಾಯಿತು. 4) ಮೈಸೂರು ವಿಶ್ವವಿದ್ಯಾನಿಲಯದ ಸ್ಪೋಟ್ಸ್ ಪೆವಿಲಿಯನಲ್ಲಿ ಫೆನ್ಸಿಂಗ್ ಕ್ರೀಡೆ ಆಯೋಜನೆ ಕುರಿತು ಡಾ:ಪಿ.ಕೃಷ್ಣಯ್ಯ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರೊಂದಿಗೆ ಚರ್ಚಿಸಲಾಯಿತು ಹಾಗೂ ವಾಲಿಬಾಲ್ ಮೈದಾನದ ಪರಿಶೀಲನೆ ಮಾಡಲಾಯಿತು ಮತ್ತು ಸದರಿ ಸ್ಥಳ ಹಾಗೂ ಕ್ರೀಡೆಗಳ ಉತ್ತಮ ಪಡಿಸುವ ನಿಟ್ಟಿನಲ್ಲಿ ಸಲಹೆಗಳನ್ನು ನೀಡಲಾಯಿತು. 5) ನ್ಯಾಷನಲ್ ಇನ್‌ಸ್ಟಿಟೂಟ್ ಆಫ್ ಇಂಜಿನಿಯರಿಂಗ್ ಡೈಮೆಂಡ್ ಜುಬ್ಲಿ ಸ್ಪೋರ್ಟ್ಸ್ ಇಲ್ಲಿನ ಬಾಸ್ಕೆಟ್‌ಬಾಲ್ ಒಳಾಂಗಣ ಕ್ರೀಡಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣದ ಸೌಲಭ್ಯಗಳ ಪರಿವೀಕ್ಷಣೆ ನಡೆಸಲಾಯಿತು ಹಾಗೂ ಸದರಿ ಇನ್‌ಸ್ಟಿಟೂಟ್‌ನಲ್ಲಿರುವ ಸೌಲಭ್ಯಗಳನ್ನು ದಸರಾ ಕ್ರೀಡಾಕೂಟದ ಸ್ಪರ್ಧೆಗಳಿಗೆ ಉಪಯೋಗಿಸಿಕೊಳ್ಳುವಂತೆ ಇಲಾಖಾ ಅಧಿಕಾರಿಗಳಿಗೆ ತಿಳಿಸಲಾಯಿತು. 6) ಮೈಸೂರಿನ ಜೆ.ಪಿ.ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಈಜುಕೊಳ ಮತ್ತು ಬಾಸ್ಕೆಟ್‌ಬಾಲ್ ಅಂಕಣ ಮತ್ತು ಹ್ಯಾಂಡ್‌ಬಾಲ್ ಅಂಕಣಗಳನ್ನು ಪರಿವೀಕ್ಷಿಸಲಾಯಿತು.

ದಿನಾಂಕ:20-09-2019ರಂದು ಮಾನ್ಯ ವಸತಿ ಸಚಿವರು ಮತ್ತು ಮೈಸೂರು ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ಸಂಸದರು, ಮೈಸೂರು ಕ್ಷೇತ್ರ, ಮಾನ್ಯ ಶಾಸಕರು, ಚಾಮರಾಜ ಮತಕ್ಷೇತ್ರ, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಮತ್ತು ಕಾರ್ಯದರ್ಶಿ, ಕುಸ್ತಿ ಉಪ ಸಮಿತಿ, ಇವರೊಂದಿಗೆ 'ರಾಜ್ಯ ದಸರಾ ಕ್ರೀಡಾಕೂಟ ಮತ್ತು ಸಾಹಸ ಕ್ರೀಡೋತ್ಸವಕ್ಕೆ ಸಂಬಂಧಿಸಿದಂತೆ ವೆಬ್‌ಸೈಟ್ ಅನಾವರಣ ಮತ್ತು ಪೋಸ್ಟರ್‌ಗಳ ಬಿಡುಗಡೆ ಸಂಬಂಧದ ಪತ್ರಿಕಾಗೋಷ್ಠಿಯಲ್ಲಿ' ಭಾಗವಹಿಸಲಾಯಿತು.

...3

ತದನಂತರ, ದಿನಾಂಕ:20-09-2019ರಂದು ಅಪರಾಹ್ನ ಮಾನ್ಯ ವಸತಿ ಸಚಿವರು ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ಸಂಸದರು, ಮೈಸೂರು, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ಮತ್ತು ಜಂಟಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. ಇವರುಗಳೊಂದಿಗೆ ಮೈಸೂರು ಅರಮನೆ ಮಂಡಳಿಯಲ್ಲಿ ದಸರಾ ಸಿದ್ದತೆ ಕುರಿತು ನಡೆದ ಸಭೆಯಲ್ಲಿ ಭಾಗವಹಿಸಲಾಯಿತು.

ಅವಗಾಹನೆಗಾಗಿ ಸಲ್ಲಿಸಿದೆ.

Kalpana G

(ಡಾ. ಜಿ. ಕಲ್ಪನ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಮುಖ್ಯ ಕಾರ್ಯದರ್ಶಿ,
ವಿಧಾನಸೌಧ,
ಬೆಂಗಳೂರು.
ಪ್ರತಿ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಆಡಳಿತ ಸುಧಾರಣೆ), ಸಿ.ಆ.ಸು.ಇಲಾಖೆ, ಬೆಂಗಳೂರು.

e-office No: 645590/2019

ಕರ್ನಾಟಕ ಸರ್ಕಾರ

ಸಂಖ್ಯೆ: ಹಿಂವಕ 203 ಸಕಾ 2019

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ, ಬೆಂಗಳೂರು
ದಿನಾಂಕ: 14.08.2019

ಟಿಪ್ಪಣಿ

ವಿಷಯ: ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಪ್ರವಾಸ ವರದಿ.
ಉಲ್ಲೇಖ: ಸುತ್ತೋಲೆ ಸಂಖ್ಯೆ: ಸಿಆಸುಇ.19.ಇಸಪ.2018, ದಿನಾಂಕ: 11.07.2018

***

| ಕ್ರ.ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ವಿಜಯಪುರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಮೊಹಮ್ಮದ್ ಮೊಹಸಿನ್, ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |
| 3 | ಬೇಟಿಯಾದ/ಪ್ರವಾಸದ ದಿನಾಂಕ | ದಿನಾಂಕ:08.08.2019 ರಿಂದ 10.08.2019 |

4. ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು:

ದಿನಾಂಕ: 08.08.2019ರ ಗುರುವಾರದಂದು ಜಿಲ್ಲೆಯ ಬಸವನಬಾಗೇವಾಡಿಯ ತಾಲೂಕಿನ ಅರಳದಿನ್ನಿ ಹಾಗೂ ಮಸೂತಿ ಗ್ರಾಮಗಳಿಗೆ ಭೇಟಿ ನೀಡಿ ಪ್ರವಾಹ ಪರಿಸ್ಥಿತಿ ಕುರಿತು ಪರಿಶೀಲನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಗ್ರಾಮಸ್ಥರೊಂದಿಗೆ ಮಾತನಾಡಿ, ಜನರ ಕುಂದು-ಕೊರತೆಗಳನ್ನು ಆಲಿಸಲಾಯಿತು.

ಅದರಂತೆ ಮುದ್ದೇಬಿಹಾಳ ತಾಲೂಕಿನ ಮದೂರ ಗ್ರಾಮಕ್ಕೂ ಸಹ ಭೇಟಿ ನೀಡಿ ಪ್ರವಾಹ ಪರಿಸ್ಥಿತಿ ಕುರಿತಂತೆ ಪರಿಶೀಲನೆ ನಡೆಸಲಾಯಿತು. ಆಲಮಟ್ಟಿ ಡ್ಯಾಂಸೈಟ್‌ಗೆ ಭೇಟಿ ನೀಡಿ ಜಲಾಶಯದ ಒಳಹರಿವು-ಹೊರ ಹರಿವು ಕುರಿತಂತೆ ಪರಿಶೀಲನೆ ನಡೆಸಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಪ್ರವಾಹ ಪರಿಸ್ಥಿತಿ ಸಂದರ್ಭದಲ್ಲಿ ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು. ಜನರಿಗೆ ಯಾವುದೇ ಅನಾನೂಕೂಲವಾಗದಂತೆ ನೋಡಿಕೊಳ್ಳಬೇಕು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಜನರ ಆರೋಗ್ಯ ತಪಾಸಣೆ ನಡೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಯಾವುದೇ ಸಮಸ್ಯೆಗಳು ಉದ್ಭವವಾಗದಂತೆ ಮುನ್ನೆಚ್ಚರಿಕೆಯಾಗಿ ಎಲ್ಲ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ವೈ.ಎಸ್.ಪಾಟೀಲ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಕಾಸ ಕಿಶೋರ ಸುರಳಕರ, ಸೇರಿದಂತೆ ಸಂಬಂಧಪಟ್ಟ ತಾಲೂಕಿನ ತಹಶೀಲ್ದಾರರು, ಅಧಿಕಾರಿಗಳು ಉಪಸ್ಥಿತರಿದ್ದರು.

ದಿನಾಂಕ: 09.08.2019 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಭೆಯಲ್ಲಿ ಮಹಾರಾಷ್ಟ್ರ ರಾಜ್ಯದ ಕೊಯ್ನಾ ಜಲಾಶಯದಿಂದ ಅಪಾರ ಪ್ರಮಾಣದ ನೀರನ್ನು ಕೃಷ್ಣಾ ನದಿಗೆ ಹರಿಬಿಡುತ್ತಿರುವುದರಿಂದ ಅದರಂತೆ ಭೀಮಾ ನದಿ ತೀರದಲ್ಲಿಯೂ ಕೂಡ ಪ್ರವಾಹ ಪರಿಸ್ಥಿತಿ ಎದುರಾಗಿರುವುದರಿಂದ ಪ್ರವಾಹದಿಂದ ಪ್ರಭಾವಿತವಾಗಿರುವ ಗ್ರಾಮಗಳ ಮೇಲೆ ಹೆಚ್ಚಿನ ಗಮನ ನೀಡಬೇಕು. ಗ್ರಾಮಸ್ಥರಿಗೆ ಕುಡಿಯುವ ನೀರು, ಆಹಾರದ ಮಿನಿ ಕಿಟ್, ಆಹಾರಧಾನ್ಯ, ಔಷಧಿಗಳ ವ್ಯವಸ್ಥೆ, ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಸೇರಿದಂತೆ ಇನ್ನಿತರ ಅವಶ್ಯಕ ಸೌಲಭ್ಯಗಳನ್ನು ಸಮರ್ಪಕವಾಗಿ ಪೂರೈಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು.

19/8/19

ಉಪವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರು ಪ್ರವಾಹದಿಂದ ಪ್ರಭಾವಿತವಾಗಿರುವ ಗ್ರಾಮಗಳಿಗೆ ಆದ್ಯತೆ ಮೇಲೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಬೇಕು. ಅವಶ್ಯಕತೆ ಇರುವ ಕಡೆ ಟ್ಯಾಂಕರ್ ಮೂಲಕ ಶುದ್ಧ ಕುಡಿಯುವ ನೀರು ಪೂರೈಸಬೇಕು. ಶುದ್ಧ ಕುಡಿಯುವ ನೀರಿನ ಘಟಕಗಳು ಹಾಗೂ ಕುಡಿಯುವ ನೀರಿನ ಜಲಸಂಪನ್ಮೂಲಗಳು ಪ್ರವಾಹದಿಂದ ಪ್ರಭಾವಿತವಾಗಿರುವುದರಿಂದ ಅಂತಹ ಕಡೆ ಆದ್ಯತೆ ಮೇಲೆ ನೀರನ್ನು ಪೂರೈಸಬೇಕು. ಅವಶ್ಯಕ ಗ್ರಾಮಗಳಿಗೆ ತುರ್ತು ಚಿಕಿತ್ಸಾ ಆಂಬ್ಯೂಲೆನ್ಸ್ ಜೊತೆಗೆ ನುರಿತ ವೈದ್ಯರನ್ನು ನಿಯೋಜಿಸಬೇಕು. ಆರೋಗ್ಯ ತಪಾಸಣಾ ಶಿಬಿರ ಆಯೋಜಿಸುವ ಮೂಲಕ ಅವರ ಆರೋಗ್ಯಕ್ಕೆ ವಿಶೇಷ ಗಮನ ನೀಡಬೇಕು. ಸೂಕ್ತ ಔಷಧಿಗಳನ್ನು ಪೂರೈಸುವ ಜೊತೆಗೆ ಸಮರ್ಪಕ ಔಷಧಿ, ಹಾವು ಕಡಿತಕ್ಕೆ ಸಂಬಂಧಿಸಿದ ಔಷಧಿಗಳನ್ನು ಸಮರ್ಪಕವಾಗಿ ಸಂಗ್ರಹಿಸಿಟ್ಟುಕೊಳ್ಳುವ ಜೊತೆಗೆ ಕ್ಷೇತ್ರ ಮಟ್ಟದಲ್ಲಿ ಗ್ರಾಮಗಳಲ್ಲಿ ಭೇಟಿ ನೀಡಿ ಸಮಸ್ಯೆಗಳಿಗೆ ಸ್ಪಂದಿಸಬೇಕು. ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ಸೂಚನೆ ನೀಡಲಾಯಿತು.

ಕೃಷ್ಣಾ ನದಿ ಹಾಗೂ ಭೀಮಾ ನದಿಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ನದಿ ಪಾತ್ರದ ಜನರಲ್ಲಿ ಸೂಕ್ತ ಎಚ್ಚರಿಕೆ ನೀಡುವ ಕಾರ್ಯವನ್ನು ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಆಯಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮಾಡುವ ಜೊತೆಗೆ ಡಂಗುರದ ಮೂಲಕ ಸೂಕ್ತ ಮುನ್ನೆಚ್ಚರಿಕೆ ನೀಡಬೇಕು. ಉಪವಿಭಾಗಾಧಿಕಾರಿಗಳು, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕರು, ಅಧೀನ ಅಧಿಕಾರಿ ಮತ್ತು ಸಿಬ್ಬಂದಿಗಳು, ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕ್ಷೇತ್ರ ಮಟ್ಟದಲ್ಲಿ ಭೇಟಿ ನೀಡಿ ವಸ್ತುಸ್ಥಿತಿಯನ್ನು ಸಂಪೂರ್ಣವಾಗಿ ಅರಿತು ಗ್ರಾಮಸ್ಥರಿಗೆ ನೆರವಾಗಬೇಕು. ರೋಗ-ರುಜಿನಗಳು ಹರಡದಂತೆ ಮುನ್ನೆಚ್ಚರಿಕೆ ವಹಿಸಲು ಫಾಗಿಂಗ್ ಕಾರ್ಯವನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಬೇಕು. ನದಿಯಲ್ಲಿ ಮೀನುಗಾರಿಕೆಗೆ ತೆರಳದಂತೆ ಮುನ್ನೆಚ್ಚರಿಕೆ ಸಹ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕೃಷ್ಣಾ-ಭೀಮಾ ನದಿಪಾತ್ರಗಳಲ್ಲಿ ಬರುವಂತಹ ಹೊಳೆ ಮಸೂತಿ, ಅರಳದಿನ್ನಿ, ಇಂಡಿ ತಾಲೂಕಿನ ಚಿಕ್ಕಮಣ್ಣೂರ, ಟಕ್ಕಳಕಿ, ಕಮ್ಮಲದಿನ್ನಿ, ಗಂಗೂರ, ಸಿಂದಗಿ ತಾಲೂಕಿನ ತಾರಾಪುರ ಸೇರಿದಂತೆ ಇಂಡಿ ತಾಲೂಕಿನ ಪ್ರವಾಹ ಪೀಡಿತ ಗ್ರಾಮಗಳು, ಚಡಚಣ ಸೇರಿದಂತೆ ಇನ್ನಿತರ ಪ್ರವಾಹ ಪೀಡಿತ ಗ್ರಾಮಗಳಲ್ಲಿ ಹೆಚ್ಚು ಜವಾಬ್ದಾರಿಯಿಂದ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಕೇಂದ್ರ ಸ್ಥಾನದಲ್ಲಿದ್ದುಕೊಂಡು ಗ್ರಾಮಸ್ಥರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು.

ತುರ್ತು ಸಂದರ್ಭದಲ್ಲಿ ಗ್ರಾಮಸ್ಥರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಸಹ ಮೀಸಲಿಡುವಂತೆ ಸೂಚಿಸಲಾಯಿತು, ಈಗಾಗಲೇ ಪ್ರತಿ ತಾಲೂಕಿಗೆ ಎರಡರಂತೆ ಹಾಗೂ ಜಿಲ್ಲೆಗೆ ಒಂದರಂತೆ ಬಸ್‌ಗಳನ್ನು ಕಾಯ್ದಿರಿಸಿರುವ ಬಗ್ಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳಿಂದ ಮಾಹಿತಿ ಪಡೆಯಲಾಯಿತು, ತುರ್ತು ಸಂದರ್ಭದಲ್ಲಿ ಆಯಾ ಡಿಪೋ ಮ್ಯಾನೇಜರ್ ಮತ್ತು ಆಯಾ ತಾಲೂಕಾ ಘಟಕದ ವ್ಯವಸ್ಥಾಪಕರನ್ನು ಸಂಪರ್ಕಿಸುವ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಮೂಡಿಸಲು ಸಲಹೆ ನೀಡಲಾಯಿತು.

ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿ ಇರುವ ಹಿನ್ನಲೆಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಯಾವುದೇ ಪರಿಸ್ಥಿತಿಯಲ್ಲಿ ಕೇಂದ್ರ ಸ್ಥಾನವನ್ನು ಬಿಟ್ಟು ಹೋಗದಿರಲು ಸೂಚಿಸಲಾಯಿತು, ವಿಜಯಪುರ ನಗರದಲ್ಲಿ ಒಂದು ದೋಣಿಯನ್ನು ಸಿಂದಗಿ ತಾಲೂಕಿನ ತಾರಾಪುರ ಗ್ರಾಮಕ್ಕೆ ಸ್ಥಳಾಂತರಿಸಬೇಕು ಹಾಗೂ ಇಂಡಿ ಭಾಗದಲ್ಲಿ ಒಂದು ದೋಣಿಯನ್ನು ವ್ಯವಸ್ಥೆ ಮಾಡಲಾಗಿದ್ದು, ಹೆಚ್ಚುವರಿ ಹತ್ತು ಕರ್ಯಾಕ್ ಬೋಟ್ ವ್ಯವಸ್ಥೆ ಸಹ ಮಾಡಲಾಗುತ್ತಿದ್ದು, ನುರಿತ ಈಜುಗಾರರನ್ನು ಸಹ ಗುರುತಿಸಿಟ್ಟುಕೊಳ್ಳುವಂತೆ ಸಲಹೆ ನೀಡಲಾಯಿತು.

ಜಲಾವೃತ ಗ್ರಾಮಗಳಲ್ಲಿನ ಜಾನುವಾರುಗಳಿಗೆ ಕುಡಿಯುವ ನೀರು, ಕಾಯಿಲೆ ಬಗ್ಗೆ ಸೂಕ್ತ ಚಿಕಿತ್ಸೆ ಹಾಗೂ ಮೇವಿನ ಕೊರತೆಯಾಗದಂತೆ ನಿಗಾವಹಿಸಬೇಕು. ಪಶು ಸಂಗೋಪನಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕಾ ಹಾಗೂ ಗ್ರಾಮ ಮಟ್ಟದ ಅಧೀನ ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ಕ್ಷೇತ್ರ ಮಟ್ಟದಲ್ಲಿ ಭೇಟಿ ನೀಡುವ ಜೊತೆಗೆ ಗ್ರಾಮವಾರು ಪಟ್ಟಿಮಾಡಿ ಭೇಟಿ ನೀಡಿ ಕೈಗೊಂಡ ಕ್ರಮಗಳ ಬಗ್ಗೆ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಪ್ರವಾಹ ಪೀಡಿತ ಗ್ರಾಮಗಳ ವ್ಯಾಪ್ತಿಯಲ್ಲಿ ಕಳ್ಳತನ ಮತ್ತು ಇನ್ನಿತರ ಅಕ್ರಮ ಚಟುವಟಿಕೆಗಳ ಮೇಲೆ ನಿಗಾ ಇಡುವಂತೆ ಪೋಲಿಸ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ನದಿ ಪಾತ್ರದ ಪ್ರದೇಶಗಳಲ್ಲಿ ವಿದ್ಯುತ್ ಅವಘಡ, ಸಾರ್ವಜನಿಕರ ಮತ್ತು ಜಾನುವಾರುಗಳ ಪ್ರಾಣ ಹಾನಿಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಹೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು, ನೀರು ಸರಬರಾಜು ಸೇರಿದಂತೆ ಇನ್ನಿತರ ವಿದ್ಯುತ್ ಸರಬರಾಜು ಮೇಲೆ ತೀವ್ರ ನಿಗಾ ಇಡಬೇಕು. ವಿದ್ಯುತ್ ತಂತಿ ಕಡಿತದಿಂದಾಗುವ, ವಿದ್ಯುತ್ ಪ್ರವಹಿಸಿ ಆಗುವಂತಹ ಹಾನಿಯನ್ನು ತಪ್ಪಿಸಲು ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಪ್ರವಾಹದಿಂದ ವಿವಿಧ ಗ್ರಾಮಗಳಲ್ಲಿ ರಸ್ತೆ ಸಂಪರ್ಕ ಕಡಿತದ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ತೀವ್ರ ನಿಗಾ ವಹಿಸಬೇಕು. ಸಾರ್ವಜನಿಕರ ಸಮಸ್ಯೆಗಳಿಗೆ ಸೂಕ್ತ ಸಮಯದಲ್ಲಿ ಸ್ಪಂದಿಸಬೇಕು. ಪೂರ್ವಭಾವಿಯಾಗಿ ಮುನ್ನೆಚ್ಚರಿಕೆ ವಹಿಸುವ ಜೊತೆಗೆ ಸಾರ್ವಜನಿಕರಿಗೆ ರಸ್ತೆ ಕಡಿತ, ವಿಷಯಗಳ ಬಗ್ಗೆ ತಿಳಿ-ಹೇಳುವಂತೆ ಸಲಹೆ ನೀಡಲಾಯಿತು.

ಜಿಲ್ಲೆಯಲ್ಲಿ ಪ್ರವಾಹದಂತಹ ತುರ್ತು ಪರಿಸ್ಥಿತಿ ಇರುವ ಹಿನ್ನಲೆಯಲ್ಲಿ ಸಂಬಂಧಪಟ್ಟ ಅಧಿಕಾರಿ ಹಾಗೂ ಸಿಬ್ಬಂದಿಗಳೆಲ್ಲರೂ ನಿರ್ಲಕ್ಷ್ಯ ವಹಿಸದೇ ಕಾರ್ಯನಿರ್ವಹಿಸಬೇಕು. ಬಡವರಿಗೆ, ಕಾರ್ಮಿಕರಿಗೆ ಪ್ರವಾಹದಿಂದ ಪ್ರಭಾವಿತರಾಗಿರುವ ಗ್ರಾಮಸ್ಥರಿಗೆ ಎಲ್ಲ ರೀತಿಯಲ್ಲಿ ನೆರವಾಗಬೇಕು. ಪ್ರಾಣಹಾನಿ, ಆಸ್ತಿಹಾನಿ ಆಗದಂತೆ ಎಚ್ಚರಿಕೆ ವಹಿಸಬೇಕು. ಜಿಲ್ಲಾ, ತಾಲೂಕಾ ಹಾಗೂ ಗ್ರಾಮ ಮಟ್ಟದ ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ನಿರಂತರವಾಗಿ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳಿಗೆ ಕಾಲಕಾಲಕ್ಕೆ ವರದಿ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳ ಆದೇಶಕ್ಕೂ ಕಾಯದೇ ಪ್ರವಾಹ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಗೆ ಅನುಗುಣವಾಗಿ ತಮ್ಮ ಕರ್ತವ್ಯಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುವಂತೆ ಸೂಚನೆ ನೀಡಲಾಯಿತು, ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಕಾರ್ಯನಿರ್ವಹಿಸಲು ಸೂಚಿಸಲಾಯಿತು.

ಸಭೆಯಲ್ಲಿ ಜಿಲ್ಲಾಧಿಕಾರಿ ವೈ.ಎಸ್.ಪಾಟೀಲ ಅವರು, ಜಿಲ್ಲೆಯಲ್ಲಿ ಮಹಾರಾಷ್ಟ್ರ ರಾಜ್ಯದ ಕೊಯ್ನಾ ಜಲಾಶಯದಿಂದ ಅಪಾರ ಪ್ರಮಾಣದಲ್ಲಿ ನೀರು ಹರಿ ಬಿಡುತ್ತಿರುವುದರಿಂದ ಪ್ರವಾಹ ಪರಿಸ್ಥಿತಿ ಎದುರಾಗಿದ್ದು, ಭೀಮಾ ನದಿ ಕೂಡ ಉಕ್ಕಿ-ಹರಿಯುತ್ತಿದೆ. ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ಕೆಲವು ಗ್ರಾಮಗಳು ಬಾಧಿತವಾಗುತ್ತಿದ್ದು, ಹೆಚ್ಚುವರಿ ಪ್ರಮಾಣದ ಹೊರ ಹರಿವು ಹೆಚ್ಚಿಸುವಂತೆ ಸಂಬಂಧಪಟ್ಟ ವ್ಯವಸ್ಥಾಪಕ ನಿರ್ದೇಶಕರಿಗೆ ಕೋರಲಾಗಿದೆ ಎಂದು ಸಭೆಗೆ ತಿಳಿಸಿದರು.

ಅದರಂತೆ ಆಲಮಟ್ಟಿ ಜಲಾಶಯದಿಂದ ಆ.8ರಂದು 3.55 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬಿಡುತ್ತಿರುವುದರಿಂದ ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ಮುದ್ದೇಬಿಹಾಳ ತಾಲೂಕಿನ 22 ಗ್ರಾಮಗಳ ಕೃಷಿ ಭೂಮಿಗೆ ಮತ್ತು ನಿಡಗುಂದಿ ತಾಲೂಕಿನ 5 ಗ್ರಾಮಗಳ ಕೃಷಿ ಭೂಮಿಗೆ ಹಾನಿಯಾಗುತ್ತಿದೆ. ಗ್ರಾಮವಾರು ತಂಡಗಳನ್ನು ರಚಿಸಿ ಜಿಲ್ಲಾಡಳಿತ ತೀವ್ರ ನಿಗಾಹಿವಹಿಸಲಾಗಿದೆ ಎಂದು ಹೇಳಿದರು.

ಭೀಮಾ ನದಿಯಲ್ಲಿ ಸಹ ಆ.8ರಂದು 2.39 ಲಕ್ಷ ಕ್ಯೂಸೆಕ್ಸ್ ನೀರು ಹರಿಯುತ್ತಿದ್ದು, ನದಿ ದಂಡೆಯಲ್ಲಿರುವ ಚಡಚಣ ತಾಲೂಕಿನ 21 ಗ್ರಾಮಗಳ ಮತ್ತು ಇಂಡಿ ತಾಲೂಕಿನ 12 ಗ್ರಾಮಗಳು ಹಾಗೂ ಸಿಂದಗಿ ತಾಲೂಕಿನ 7 ಗ್ರಾಮಗಳ ಕೃಷಿ ಭೂಮಿಗೆ ನೀರು ಹರಿದು ಬಂದಿದೆ. ಸಿಂದಗಿ ತಾಲೂಕಿನ ತಾರಾಪುರ ಗ್ರಾಮದ ಸಂಪರ್ಕ ರಸ್ತೆ ಕಡಿವಾಗಿದ್ದು, ನದಿ ಪಾತ್ರ ಎಲ್ಲ ಗ್ರಾಮಗಳಲ್ಲಿ ಪರಿಹಾರ ಕಾರ್ಯಕ್ಕೆ ಸಿಬ್ಬಂದಿಗಳನ್ನು ನಿಯೋಜಿಸಿ ಜಿಲ್ಲಾಡಳಿತದಿಂದ ಎಲ್ಲ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಭೀಮಾ ಕೃಷ್ಣಾ ನದಿ ಪಾತ್ರ ಜನರು ಧೈರ್ಯದಿಂದ ಹಾಗೂ ಜಾಗರೂಕತೆಯಿಂದಿರಲು ಕೋರಿದ ಅವರು, ಪರಿಹಾರ ಕಾರ್ಯಕ್ಕಾಗಿ ಜಿಲ್ಲಾಧಿಕಾರಿಗಳ ಕಚೇರಿಯ 24/7 ಕಂಟ್ರೋಲ್ ರೂಂ ದೂ: 08352-221261 ಮತ್ತು ಟೋಲ್ ಫ್ರಿ ನಂ. 1077ಗೆ ಕರೆ ಮಾಡಬಹುದಾಗಿದೆ ಎಂದು ಅವರು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಕಾಶ ಕಿಶೋರ ಸುರಳಕರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪ್ರಕಾಶ ನಿಕ್ಕಂ ಅಪರ ಜಿಲ್ಲಾಧಿಕಾರಿ ಎಚ್.ಪ್ರಸನ್ನ, ಉಪವಿಭಾಗಾಧಿಕಾರಿ ಸೋಮಲಿಂಗ ಗೆಣ್ಣೂರ, ಇಂಡಿ ಉಪವಿಭಾಗಾಧಿಕಾರಿ ಡಾ.ಕೆ.ಆನಂದ,ಉಪಸ್ಥಿತರಿದ್ದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕೆಎಸ್ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಪಶು ಸಂಗೋಪನೆ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಜಿಲ್ಲೆಯ ತಹಶೀಲ್ದಾರರು ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರವಾಹದಿಂದ ಬಾಧಿತವಾಗಿರುವ ಜಿಲ್ಲೆಯ ಯಲಗೂರ, ಕಾಶಿನಕುಂಟಿ ಹಾಗೂ ಮಸೂತಿ ಗ್ರಾಮಗಳಿಗೆ ಶನಿವಾರ ದಿನಾಂಕ:10.08.2019 ರಂದು ಭೇಟಿ ನೀಡಿ ಅಲ್ಲಿನ ಪರಿಸ್ಥಿತಿ ಕುರಿತು ಪರಿಶೀಲನೆ ನಡೆಸಲಾಯಿತು. ಅದರಂತೆ ಮಸೂತಿ ಗ್ರಾಮದಲ್ಲಿ ಗಂಜಿ ಕೇಂದ್ರಕ್ಕೆ ಭೇಟಿ ನೀಡಿ, ಸಂತ್ರಸ್ಥರಿಗೆ ನೀಡುತ್ತಿರುವ ಆಹಾರ ಅಲ್ಲಿನ ಸ್ಥಿತಿಗತಿ ಕುರಿತು ಮಾಹಿತಿ ಪಡೆದುಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಸಂತ್ರಸ್ಥರ ಆರೋಗ್ಯ ಸಮಸ್ಯೆಗೆ ಸ್ಪಂದಿಸಲು ಸೂಕ್ತ ಔಷಧಿಗಳ ಸಂಗ್ರಹಣೆ ಮಾಡಿಟ್ಟುಕೊಳ್ಳಬೇಕು. ಸಂತ್ರಸ್ಥರಿಗೆ ಯಾವುದೇ ಆರೋಗ್ಯ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಅದರಂತೆ ಕಂದಾಯ ಅಧಿಕಾರಿಗಳು ಸಹ ಸಂತ್ರಸ್ಥರಿಗೆ ಯಾವುದೇ ಸಮಸ್ಯೆಯಾಗದಂತೆ ಎಲ್ಲ ವ್ಯವಸ್ಥೆ ಕಲ್ಪಿಸುವಂತೆ ಸೂಚನೆ ನೀಡಲಾಯಿತು

ಈ ಸಂದರ್ಭದಲ್ಲಿ ಗಂಜಿ ಕೇಂದ್ರದಲ್ಲಿರುವ ಮಕ್ಕಳು, ವೃದ್ದೆಯರು ಸೇರಿದಂತೆ ಜನರ ಸಮಸ್ಯೆಗಳನ್ನು ಆಲಿಸಿ ಸೂಕ್ತ ವ್ಯವಸ್ಥೆ ಕಲ್ಪಿಸಲು ಭರವಸೆ ನೀಡಲಾಯಿತು. ಈ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

(ಮೊಹಮ್ಮದ್ ಮೊಹಸಿನ್)
ಸರ್ಕಾರದ ಕಾರ್ಯದರ್ಶಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ
ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಇವರಿಗೆ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ವಿಪತ್ತು ನಿರ್ವಹಣೆ, ಭೂಮಿ ಮತ್ತು ನಗರ ಆಸ್ತಿ ಮಾಲೀಕತ್ವ ದಾಖಲೆಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

ದಿನಾಂಕ 07-08-2019 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ. ಇವರ ಅಧ್ಯಕ್ಷತೆಯಲ್ಲಿ ಜರುಗಿದ "ಬರ ಪರಿಹಾರ ಕಾರ್ಯಕ್ರಮಗಳ" ಕುರಿತು ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳ ಜಿಲ್ಲೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡುವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :- ಹಾಜರಿ ಪುಸ್ತಕದಲ್ಲಿದ್ದಂತೆ.

ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಗಳು ಸಭೆಗೆ ಆಗಮಿಸಿದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ ರಾಯಚೂರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಾಯಚೂರು ಜಿಲ್ಲೆ ಇವರನ್ನು ಕೋರಿದರು.

ಸಭೆಯನ್ನುದ್ದೇಶಿಸಿ, ಕೃಷ್ಣ ಕೊಳ್ಳದಲ್ಲಿ ಭಾರಿ ಮಳೆಯಾಗುತ್ತಿರುವುದರಿಂದ ಆಲಮಟ್ಟಿ ಜಲಾಶಯದಿಂದ ಭಾರಿ ಪ್ರಮಾಣದ ನೀರು ನಾರಾಯಣಪುರ ಜಲಾಶಯಕ್ಕೆ ಹರಿದು ಬರುತ್ತಿದ್ದು, ಪ್ರಸ್ತುತ ಸದರಿ ಜಲಾಶಯದ ಒಳಹರಿವು 3.80 ಲಕ್ಷ ಕ್ಯೂಸೆಕ್ಸ್ ಇದ್ದು, ಹೊರಹರಿವು 3.93 ಲಕ್ಷ ಕ್ಯೂಸೆಕ್ಸ್ ನಷ್ಟು ನೀರನ್ನು ಕೃಷ್ಣ ನದಿಗೆ ಬಿಡಲಾಗುತ್ತಿದೆ. ಪ್ರಸ್ತುತ ಮಹರಾಷ್ಟ್ರದಲ್ಲಿ ಭಾರಿ ಮಳೆಯಾಗುತ್ತಿದ್ದು, ಬೆಳಗಾವಿ ಜಿಲ್ಲಾಡಳಿತದಿಂದ ಇನ್ನೂ ಹೆಚ್ಚಿನ ಪ್ರಮಾಣದ ನೀರು ಆಲಮಟ್ಟಿ ಜಲಾಶಕ್ಕೆ ನೀರು ಹರಿದು ಬರುತ್ತದೆ ಎಂದು ಮುನ್ನೆಚ್ಚರಿಕೆ ನೀಡಿರುತ್ತಾರೆ. ಸದರಿ ಜಲಾಶಯದಿಂದ ನಾರಾಯಣಪುರ ಜಲಾಶಯಕ್ಕೆ 5.00 ಲಕ್ಷ ಕ್ಯೂಸೆಕ್ಸ್ ಹೆಚ್ಚು ಹರಿದು ಬರಬಹುದೆಂದು ಅಧಿಕಾರಿಗಳು ತಿಳಿಸಿರುತ್ತಾರೆ. ನಾರಾಯಣಪುರ ಜಲಾಶಯದಿಂದ 5.00 ಲಕ್ಷ ಕ್ಯೂಸೆಕ್ಸ ನೀರು ಬಿಡುವುದರಿಂದ ರಾಯಚೂರು ಜಿಲ್ಲೆಯ ಕೃಷ್ಣ ನದಿ ತೀರದ ಲಿಂಗಸಗೂರು, ದೇವದುರ್ಗ ಮತ್ತು ರಾಯಚೂರು ತಾಲ್ಲೂಕುಗಳ ಕೆಲವೊಂದು ಜನವಸತಿ ಪ್ರದೇಶಗಳು ತೊಂದರೆಯಾಗುವ ಸಂಭವವಿರುತ್ತದೆ. ಆದುದರಿಂದ, ನಾರಾಯಣಪುರ ಜಲಾಶಯದಿಂದ ಕೃಷ್ಣ ನದಿಗೆ ಹೆಚ್ಚಿನ ಪ್ರಮಾಣದ ನೀರು ಹರಿಸುವುದರಿಂದ ರಾಯಚೂರು ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿಯನ್ನು ಹೆದರಿಸಲು ಮುಂಜಾಗೃತ ಕ್ರಮವಾಗಿ ರಾಯಚೂರು ಜಿಲ್ಲೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಈ ಸಭೆಯನ್ನು ಆಯೋಜಿಸಲಾಗಿದೆಯೆಂದು ತಿಳಿಸಲಾಯಿತು.

ವಿಷಯ:-1. ಪ್ರವಾಹ ಪರಿಸ್ಥತಿ ಕುರಿತು:

ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆಯ ಪ್ರವಾಹ ಪರಿಸ್ಥಿತಿ ಕುರಿತು ವಿವರಿಸುತ್ತಾ, ಪಕ್ಕದ ಬಿಜಾಪುರ, ಯಾದಗಿರಿ ಜಿಲ್ಲೆಯ ಜಲಾಶಯದಿಂದ ಬಿಡಲಾಗಿರುವ ನೀರಿನ ಪ್ರಮಾಣವು ಆಲಮಟ್ಟಿ ಜಲಾಶಯದ ಒಳಹರಿವು 3.62 ಲಕ್ಷ ಕ್ಯೂಸೆಕ್ಸ್ ಇದ್ದು, ಹೊರಹರಿವು 4.00 ಲಕ್ಷ ಕ್ಯೂಸೆಕ್ಸ್ ನಷ್ಟಿದ್ದು, ನಾರಾಯಣಪುರ ಜಲಾಶಯದಿಂದ ಒಳಹರಿವು 3.62 ಲಕ್ಷ ಕ್ಯೂಸೆಕ್ಸ್ ಇದ್ದು, ಹೊರಹರಿವು 4.00 ಲಕ್ಷ ಕ್ಯೂಸೆಕ್ಸ್ ನಷ್ಟು ಕೃಷ್ಣನದಿಗೆ ಹರಿಬಿಡಲಾಗುತ್ತಿದೆಯೆಂದು ವಿವರಿಸಿದರು. ಇದರಿಂದ ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಶೀಲಹಳ್ಳಿ ಸೇತುವೆ, ದೇವದುರ್ಗ ತಾಲೂಕಿನ ಹೂವಿನಡಿಗಿ ಸೇತುವೆ ಹಾಗೂ ರಾಯಚೂರು ತಾಲ್ಲೂಕಿನ ಗುರ್ಜಾಪುರ ಬ್ಯಾರೇಜ್ ಸೇತುವೆಗಳು ಸಂಪೂರ್ಣವಾಗಿ ಮುಳುಗಡೆಯಾಗಿ ಸಂಪರ್ಕ ಕಡಿತಗೊಂಡಿರುತ್ತದೆ. ಹಾಗೂ ಇನ್ನೂ ಮುಳುಗಡೆ ಹಂತದಲ್ಲಿದೆ ಎಂದು ವಿವರಿಸಿದರು. ನಂತರ ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ 3 ಹಾಗೂ ರಾಯಚೂರು ತಾಲ್ಲೂಕಿನ 3 ಜನವಸತಿ ಪ್ರದೇಶಗಳು ನಡುಗಡ್ಡೆ ಗ್ರಾಮಗಳಾಗಿವೆ, ಸದರಿ ನಡುಗಡ್ಡೆ ಜನವಸತಿ ಪ್ರದೇಶಗಳಲ್ಲಿ ಆಹಾರ ಸಾಮಗ್ರಿಗಳನ್ನು ವಿತರಿಸಲಾಗಿದೆ ಹಾಗೂ 2 ಆಂಬುಲೆನ್ಸ್ ಗಳ ಜೊತೆಯಲ್ಲಿ

ಇಬ್ಬರು ಡಾಕ್ಟರ್ ನರ್ಸ, ಆಶಾ ಕಾರ್ಯಕರ್ತರು ಸ್ಥಳದಲ್ಲಿರುತ್ತಾರೆ. ಹಾಗೂ 1 ಬೋಟ್ ಜೊತೆಗೆ 5 ಜನ ಅಗ್ನಿಶಾಮಕದಳ ಸಿಬ್ಬಂದಿಗಳು ಮತ್ತು ಪೋಲಿಸ್ ಸಿಬ್ಬಂದಿಗಳು ಸ್ಥಳದಲ್ಲಿದ್ದು ವೈದ್ಯಕೀಯ ಬಗ್ಗೆ ಕಾಳಜಿವಹಿಸಲಿದ್ದಾರೆಂದು ತಿಳಿಸಿದರು. ನಂತರ ಜಿಲ್ಲೆಯ ಮೂರು ತಾಲ್ಲೂಕಿನ 51 ಗ್ರಾಮಗಳನ್ನು ಗುರಿತಿಸಿದ್ದು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆಯೆಂದು ಸಭೆಗೆ ತಿಳಿಸಲಾಯಿತು.

**ಜಿಲ್ಲಾಡಳಿತವು ಪ್ರವಾಹ ಕುರಿತು ತೆಗೆದುಕೊಂಡ ಕ್ರಮಗಳ ಕುರಿತು ವಿವರಿಸುತ್ತಾ :**

- ವಾಟ್ಸಪ್ ಗ್ರೂಪ್ ಮೂಲಕ ನಾರಾಯಣಪುರ ಜಲಾಶಯದಿಂದ ಕೃಷ್ಣ ನದಿಗೆ ಹರಿಬಿಡಲಾದ ನೀರಿನ ಪ್ರಮಾಣವನ್ನು ಪ್ರತಿ 30 ನಿಮಿಷಕ್ಕೊಮ್ಮೆ ಪಡೆದು, ತಾಲ್ಲೂಕಿನ ಅಧಿಕಾರಿಗಳಿಗೆ ಮುನ್ನೆಚ್ಚರಿಕೆಯನ್ನು ನೀಡಲಾಗುತ್ತಿದೆ.
- ಕೃಷ್ಣ ನದಿ ತೀರದ ಗ್ರಾಮಗಳಲ್ಲಿ ಡಂಗೂರದ ಮೂಲಕ ಹಾಗೂ ದಿನ ಪತ್ರಿಕೆಗಳ ಮೂಲಕ ಮುನ್ನೆಚ್ಚರಿಕೆ ನೀಡಲಾಗಿದೆ.
- ನದಿ ಪಾತ್ರದಲ್ಲಿರುವ 51 ಗ್ರಾಮಗಳಿಗೆ ಆಹಾರಧಾನ್ಯ ವಿತರಣೆ ಮಾಡಲಾಗಿದೆ.
- ನಾರಾಯಣಪುರ ಜಲಾಶಯದ ಕೃಷ್ಣ ನದಿ ಪ್ರವಾಹದಿಂದ ಮುಳುಗಡೆಯಾಗುವ ಸೇತುವೆಗಳಲ್ಲಿ ಪೊಲೀಸ್ ಇಲಾಖೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗಳನ್ನು ನಿಯೋಜಿಸಿ, ಭದ್ರತೆ ಒದಗಿಸಲಾಗಿದೆ ಹಾಗೂ ಬೇರೆ ಮಾರ್ಗಗಳ ಮೂಲಕ ವಾಹನಗಳನ್ನು ಬಿಡಲಾಗುತ್ತಿದೆ.
- ಪ್ರವಾಹದ ಸ್ಥಳಗಳಿಗೆ ಅಧಿಕಾರಿಗಳು/ಸಿಬ್ಬಂದಿಗಳು ಭೇಟಿ ನೀಡಲಾಗುತ್ತಿದೆ.
- ಪ್ರವಾಹಕ್ಕೆ ಒಳಗಾಗುವ ಗ್ರಾಮಗಳಲ್ಲಿ ಪರಿಣಿತ ಈಜುಗಾರರಿಗೆ ಹಾಗೂ ಸಾರ್ವಜನಿಕರಿಗೆ ಲೈಫ್ ಜಾಕೆಟ್ ಗಳನ್ನು ವಿತರಿಸಲಾಗಿದೆ.
- ರಾಯಚೂರು ತಾಲ್ಲೂಕಿನಲ್ಲಿ 242.8 ಹೆಕ್ಟರ್, ಲಿಂಗಸಗೂರು ತಾಲ್ಲೂಕಿನಲ್ಲಿ 96.8 ಹೆಕ್ಟರ್ ಮತ್ತು ದೇವದುರ್ಗ ತಾಲ್ಲೂಕಿನಲ್ಲಿ 153 ಹೆಕ್ಟರ್ ಒಟ್ಟು ಜಿಲ್ಲೆಯಲ್ಲಿ 492.6 ಹೆಕ್ಟರ್ ಕೃಷಿ ಪ್ರದೇಶದಲ್ಲಿ ನದಿ ನೀರು ಬೆಳೆಗಳಿಗೆ ಬಂದಿರುತ್ತದೆ.
- ಆರೋಗ್ಯ ಇಲಾಖೆಯಿಂದ 23 (MLHP,JHA M/F,ASHA) ಸಿಬ್ಬಂದಿಯನ್ನು ನಿಯೋಜಿಸಲಾಗಿದೆ, ತುರ್ತು ಸಂದರ್ಭದಲ್ಲಿ ಸಾರ್ವಜನಿಕರಿಗೆ ಉಪಯೋಗಿಸಲು 5 ಆಂಬುಲೆನ್ಸ್ ಗಳನ್ನು ಸಿದ್ದಗೊಳಿಸಲಾಗಿದೆ ಮತ್ತು ಔಷಧಿಯ ಕಿಟ್ ಗಳನ್ನು ಪ್ರವಾಹ ಸ್ಥಳ ಸಾಗಿಸಲು ಸಂಗ್ರಹಿಸಿಡಲಾಗಿದೆ.
- 51 ಕೃಷ್ಣ ನದಿ ದಡದ ಗ್ರಾಮಗಳಲ್ಲಿ ಕಂದಾಯ ಮತ್ತು PDO ಗಳು ರಾತ್ರಿ ವೇಳೆ ವಾಸ್ತಾವ್ಯ ಹೂಡಿದ್ದು, ಪ್ರತಿ ಒಂದು ತಾಸಿಗೆ ತಹಶೀಲ್ದಾರರಿಗೆ ಮಾಹಿತಿ ನೀಡುತ್ತಿದ್ದಾರೆ.
- 60 NDRF ತಂಡ, 102 ಸೈನಿಕರ ತಂಡ, ಸ್ಥಳೀಯವಾಗಿ ಜಿಲ್ಲಾ ಸಶ್ರ ಪಡೆ ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿಗಳು ಹಾಗೂ ಬೋಟ್ ಗಳ ವ್ಯವಸ್ಥೆ ಮಾಡಲಾಗಿದೆ.
- ಜಿಲ್ಲೆಯಲ್ಲಿ ಇಲ್ಲಿಯವರೆಗೆ 200 ಜನರನ್ನು ಸುರಕ್ಷಿತ ಸ್ಥಳಗಳಿಗೆ NDRF, ARMY ಹಾಗೂ ಸ್ಥಳೀಯ ಅಧಿಕಾರಿಗಳ ಮುಖಾಂತರ ಸ್ಥಳಾಂತರಿಸಲಾಗಿದೆ.

ಮೇಲಿನ ಎಲ್ಲಾ ವಿವರಣೆಯನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪಡೆದ ನಂತರ ಕೆಲವೊಂದು ಸಲಹೆಯನ್ನು ನೀಡಿದರು. ಜಿಲ್ಲಾಡಳಿತವು ಮುನ್ನೆಚ್ಚರಿಕೆ ಕ್ರಮವಾಗಿ ಒಳ್ಳೆಯ ನಿರ್ಧಾರ ತೆಗೆದುಕೊಂಡಿದೆ. ಅದರಂತೆ, ಪ್ರಸ್ತುತ ಮಹರಾಷ್ಟ್ರದಲ್ಲಿ ಭಾರಿ ಮಳೆಯಾಗುತ್ತಿದ್ದು, ಬೆಳಗಾವಿ ಜಿಲ್ಲಾಡಳಿತದಿಂದ ಇನ್ನೂ ಹೆಚ್ಚಿನ ಪ್ರಮಾಣದ ನೀರು ಆಲಮಟ್ಟಿ ಜಲಾಶಯಕ್ಕೆ ನೀರು ಹರಿದು ಬರುತ್ತದೆ ಎಂದು ಮುನ್ನೆಚ್ಚರಿಕೆ ನೀಡಿರುತ್ತಾರೆ. ಸದರಿ ಜಲಾಶಯದಿಂದ ನಾರಾಯಣಪುರ ಜಲಾಶಯಕ್ಕೆ 5.00 ಲಕ್ಷ ಕ್ಯೂಸೆಕ್ಸ್ ಹೆಚ್ಚು ಹರಿದು ಬರಬಹುದೆಂದು ಅಧಿಕಾರಿಗಳು ತಿಳಿಸಿರುತ್ತಾರೆ. ನಾರಾಯಣಪುರ ಜಲಾಶಯದಿಂದ 5.00 ಲಕ್ಷ ಕ್ಯೂಸೆಕ್ಸ ನೀರು ಬಿಡುವುದರಿಂದ ರಾಯಚೂರು ಜಿಲ್ಲೆಯ ಕೃಷ್ಣ ನದಿ ತೀರದ ಲಿಂಗಸಗೂರು, ದೇವದುರ್ಗ ಮತ್ತು ರಾಯಚೂರು ತಾಲ್ಲೂಕುಗಳ ಕೆಲವೊಂದು ಜನವಸತಿ ಪ್ರದೇಶಗಳು ತೊಂದರೆಯಾಗುವ ಸಂಭವವಿರುತ್ತದೆ. ಆದುದರಿಂದ ಜಿಲ್ಲೆಯಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿ, ಸ್ಥಳೀಯವಾಗಿ ಇರುವ ಪ್ರವಾಹದ ಕುರಿತು ಜನರಿಗೆ ಜಾಗೃತಿ ಮೂಡಿಸಬೇಕು ಹಾಗೂ ಗಂಜಿ ಕೇಂದ್ರಗಳನ್ನು ತೆಗೆಯುವ ಸ್ಥಳಗಳನ್ನು ಪರಿಶೀಲಿಸಿ ಜಿಲ್ಲಾಡಳಿತಕ್ಕೆ ತಿಳಿಸಬೇಕೆಂದು ಸೂಚನೆಯನ್ನು ನೀಡಲಾಯಿತು. ಅದರಂತೆ, ಈ ಕೆಳಗಿನಂತೆ, ಜಿಲ್ಲಾ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಯಿತು.

| ಕ್ರ.ಸಂ | ನೋಡಲ್ ಅಧಿಕಾರಿಯ ಹೆಸರು | ದೂರವಾಣಿ ಸಂಖ್ಯೆ | ಪ್ರವಾಹ ಪೀಡಿತ ಗ್ರಾಮಗಳ ಹೆಸರು |
|---|---|---|---|
| | ದೇವದುರ್ಗ ತಾಲೂಕು | | |
| 1 | ಯೂಸುಫ್ ಡಿಎಸ್, ಜಿ.ಪಂ, ರಾಯಚೂರು. | 9480874001 | ಕೊಪ್ಪರ್ |
| 2 | ರಮೇಶ್ ಟಿಎ. ಪಿಡಬ್ಲ್ಯೂಡಿ, ರಾಯಚೂರು. | 9449741103 | ಕಾರ್ಕಿಹಳ್ಳಿ |
| 3 | ಶರಣಬಸವ ಪಿಡಿ, ಡಿಆರ್‌ಡಿಎ, ಜಿ.ಪಂ, ರಾಯಚೂರು | 9448565179 | ಅಂಜಲಾ |
| 4 | ರಾಜು ಡಿಡಿ, ಅಲ್ಪಸಂಖ್ಯಾತ, ರಾಯಚೂರು. | 7892452808 | ಮಂಡಗೋಟ |
| 5 | ರಾಜಣ್ಣ ಡಿಡಿಎಲ್‌ಆರ್, ರಾಯಚೂರು. | 9448763379 | ಲಿಂಗದಳ್ಳಿ |
| 6 | ಅಶೋಕ್ ರೆಡ್ಡಿ, ಎಇಇ, ಕೆಬಿಜೆಎನ್‌ಎಲ್ | 9448888712 | ಗೂಗಲ್ |
| 7 | ಮಹೇಂದ್ರ ಕುಮಾರ್ ಪಿಡಿ, ಡಿಯುಡಿಸಿ, ರಾಯಚೂರು. | 9448147390 | ಮೈದಾರ್ಗೋಲ್ |
| 8 | ಗೋನಾಲ್, ಡಿಒ, ಬಿಸಿಎಂ, ರಾಯಚೂರು. | 9448695565 | ಹುವಿನಹಡಗಿ |
| | ರಾಯಚೂರು ತಾಲೂಕ | | |
| 9 | ವೀರಂಗೌಡ ಸಿಡಿಪಿಒ, ಜಿ.ಪಂ, ರಾಯ್ಚುರ್ | 9845981413 | ಗುರ್ಜಾಪುರ |
| 10 | ಚಿದಾನಂದ್ ಡಿಟಿಡಬ್ಲ್ಯೂಒ, ರಾಯಚೂರು. | 9900223306 | ಕಾಡ್ಲೂರ್ |
| 11 | ಬಸಂಗೌಡ ಎಇ, ಪಿಎಂಜಿಎಸ್ವೈ, ರಾಯಚೂರು. | 9448037248 | ಅರಶಿನಗಿ |
| 12 | ಗಣಪತಿ ಸಕರೆ ಎಇಇ, ಆರ್.ಡಬ್ಲ್ಯೂ.ಎಸ್, ರಾಯಚೂರು | 9901598888 | ಬುರ್ದಿಪಾಡ್ |
| 13 | ಅಂಜನಯ್ಯ ಇಇ ಪಿಆರ್‌ಇಡಿ, ರಾಯಚೂರು. | 9606240781 | ಡೊಂಗರಾಂಪುರ ಮತ್ತು ಅತ್ಕೂರ್ |
| 14 | ಶರಣಬಾಸವಾ ಪ್ಯಾಟೆಡ್ ಇಒ ಕ್ಯಾಶುಟೆಕ್ | 9449866100 | ಕುರ್ವಕಲ |
| 15 | ವೈ.ಎ.ಕಾಳೆ, ಡಿ.ಎಂ, ವಾಲ್ಮೀಕಿ ಅಭಿವೃದ್ಧಿ. | 9972413586 | ಕುರ್ವಕುರ್ದ |

ವಿಷಯ-2 : ಬರಪರಿಸ್ಥಿತಿ ಕುರಿತು

ಮಳೆ ಪ್ರಮಾಣ ವರದಿ:-

ಜಂಟಿ ಕೃಷಿ ನಿರ್ದೇಶಕರು ಸಭೆಯನ್ನುದ್ದೇಶಿಸಿ 2019-20 ನೇ ಸಾಲಿನ ಮಳೆಯ ಪ್ರಮಾಣ ವಿವರಿಸುತ್ತಾ, ಜಿಲ್ಲೆಯ ಮುಂಗಾರು ಹಂಗಾಮಿನ ಅವಧಿಯಲ್ಲಿ ಶೇ.27 ರಷ್ಟು ಮಳೆಯ ಕೊರತೆಯಾಗಿರುತ್ತದೆ. ಪ್ರಸ್ತುತ ವಾರದಲ್ಲಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದ್ದರಿಂದ ಮುಂಗಾರು ಬಿತ್ತನೆ ಚಾಲ್ತಿಯಲ್ಲಿರುತ್ತದೆ ಎಂದು ತಿಳಿಸಿದರು. ಮುಂಗಾರು ಹಂಗಾಮಿನ ಬೆಳೆ ಪರಿಹಾರದ ಕುರಿತು ವಿವರಣೆ ನಿಡುತ್ತಾ, ಮುಂಗಾರು ಹಂಗಾಮಿನಲ್ಲಿ 3,50,701 ಹೆಕ್ಟರ್ ಬಿತ್ತನೆ ಗುರಿ ಹೊಂದಿದ್ದು, 1,35,293 ಹೆಕ್ಟರ್ ಬಿತ್ತನೆಯಾಗಿರುತ್ತದೆ ಹಾಗೂ ಪ್ರಧಾನ ಮಂತ್ರಿ ಫಸಲ ಭೀಮಾ ಯೋಜನೆಡಿಯಲ್ಲಿ 2019-2020 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 89,295 ರೈತರು ಬೆಳೆ ವಿಮೆ ಯೋಜನೆಗೆ ಒಳಪಟ್ಟಿದ್ದಾರೆ ಎಂದು ತಿಳಿಸಿದರು. 2019-20ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಾಲಬಾದೆಯಿಂದ ರೈತರು ಆತ್ಮ ಹತ್ಯೆ ಮಾಡಿಕೊಂಡ 5 ಜನ ರೈತರ ಪ್ರಕರಣಗಳು ದಾಖಲಾಗಿರುತ್ತವೆ ಎಂದು ಸಭೆಗೆ ತಿಳಿಸಿದರು. ನಂತರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ಮಳೆಯಾಗುತ್ತಿದ್ದು ಜಿಲ್ಲೆಯಲ್ಲಿ ರೈತರಿಗೆ ಬಿತ್ತನೆ ಕಾರ್ಯಗಳಿಗೆ ತೊಂದರೆಯಾಗದಂತೆ ಸೂಕ್ತ ಕ್ರಮವಹಿಸವುದು, ಬೀದರ ಜಿಲ್ಲೆಯನ್ನು ಮಾದರಿಯಾಗಿಟ್ಟುಕೊಂಡು ಪ್ರಧಾನ ಮಂತ್ರಿ ಫಸಲ ಭೀಮಾ ಯೋಜನೆಯನ್ನು ಈ ಜಿಲ್ಲೆಯಲ್ಲಿ ಪ್ರಗತಿ ಸಾಧಿಸಬೇಕೆಂದು ಸಲಹೆಯನ್ನು ನೀಡಲಾಯಿತು.

(ಕ್ರಮ: ಜಂಟಿ ಕೃಷಿ ನಿದೇಶಕರು ಕೃಷಿ ಇಲಾಖೆ ರಾಯಚೂರು)

ಕುಡಿಯುವ ನೀರು ಸರಬರಾಜು ಯೋಜನೆ:

ಕಾರ್ಯಪಾಲಕ ಅಭಿಯಂತರರು ಗ್ರಾ.ನೀ.ಸ.ಮಂ. ಇವರು ಸಭೆಯಲ್ಲಿ ಮಾತನಾಡುತ್ತಾ, ರಾಯಚೂರು ಜಿಲ್ಲೆಯಲ್ಲಿ ಪ್ರಸ್ತುತ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿರುವುದಿಲ್ಲ ಮಳೆ ಅಭಾವದಿಂದ ಗ್ರಾಮೀಣ ಪ್ರದೇಶದಲ್ಲಿ 5 ಗ್ರಾಮಗಳಲ್ಲಿ 8 ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಹಾಗೂ ಪ್ರಸ್ತುತ 117 ಗ್ರಾಮಗಳಲ್ಲಿ 148 ಖಾಸಗಿ ಬೋರ್ವೆಲ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಪ್ರತಿ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ತಾಲ್ಲೂಕು 4 ಟಾಸ್ಕಫೋರ್ಸ್ ನಿಂದ 426 ಕಾಮಗಾರಿಗಳಿಗೆ ರೂ.778.54 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ನಂತರ ಯೋಜನಾಧಿಕಾರಿಗಳು ಜಿಲ್ಲಾ ನಗರಾಭಿವೃದ್ಧಿ ಕೋಶ ಇವರು ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಬಗ್ಗೆ ವಿವರಿಸಿದರು.

ಮೇವಿನ ಪರಿಸ್ಥಿತಿ :-

ಉಪ ನಿರ್ದೇಶಕರು ಪಶು ಸಂಗೋಪನಾ ಇಲಾಖೆ ರಾಯಚೂರು ಇವರು ಮಾತನಾಡುತ್ತಾ ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು 157343 ಮೆ.ಟನ್ ಮೇವು ಲಭ್ಯವಿದ್ದು ಮುಂದಿನ 9 ವಾರಗಳಿಗೆ ಸಕಾಗುವಷ್ಟು ಇರುತ್ತದೆ ಹಾಗೂ ಜಿಲ್ಲೆಯಲ್ಲಿ 42,314 ಮೇವಿನ ಮಿನಿ ಕಿಟ್ ಗಳನ್ನು ಪೂರೈಕೆ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಹಾಗೂ ಪ್ರಸ್ತುತ ಜಿಲ್ಲೆಯಲ್ಲಿ 7 ಮೇವು ಬ್ಯಾಂಕುಗಳು ತೆರೆಯಲಾಗಿದ್ದು ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಇರುವುದರಿಂದ ಜಿಲ್ಲೆಯಲ್ಲಿ ಸಂಗ್ರಹವಾದ ಮೇವನ್ನು ರೈತರಿಗೆ ಸೂಕ್ತ ರೀತಿಯಾಗಿ ಪೂರೈಕೆ ಮಾಡಬೇಕಾಗುವುದರಿಂದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವಶ್ಯಕತೆ ಇದ್ದಲ್ಲಿ ಮೇವು ಬ್ಯಾಂಕ್/ ಗೋಶಾಲೆ ಸ್ಥಾಪಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

(ಕ್ರಮ:ಉಪ ನಿರ್ದೇಶಕರು ಪಶು ಸಂಗೋಪನಾ ಇಲಾಖೆ ರಾಯಚೂರು)

ನಂತರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಪ್ರಸ್ತುತ ಪ್ರವಾಹ ಪರಿಸ್ಥಿತಿ ಉದ್ಭವಿಸಿದ್ದು ಎಲ್ಲಾ ಅಧಿಕಾರಿಗಳು ಯುದ್ಧೋಪಾದಿಯಲ್ಲಿ ಕಾರ್ಯ ನಿರ್ವಹಿಸಬೇಕು ಹಾಗೂ ಜಿಲ್ಲಾಧಿಕಾರಿಗಳ ಅನುಮತಿ ಪಡೆಯದೆ ಯಾರು ಕೇಂದ್ರ ಸ್ಥಾನವನ್ನು ಬಿಡಬಾರದು ಎಂದು ಎಲ್ಲಾ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಹಾಗೂ ಕ್ಷೇತ್ರ ಭೇಟಿಯನ್ನು ಮುಕ್ತಾಯಗೊಳಿಸಲಾಯಿತು.

(ಜಿ. ಕುಮಾರ ನಾಯಕ)

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ
ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

ಪ್ರತಿಯನ್ನು:

1. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ವಿಧಾನ ಸೌಧ ಬೆಂಗಳೂರು ರವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
6. ಜಿಲ್ಲಾಮಟ್ಟದ ಎಲ್ಲಾ ಅನುಷ್ಠಾನಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ. (ಜಿಲ್ಲಾಧಿಕಾರಿಗಳು, ರಾಯಚೂರು ಮೂಲಕ).

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಆಗಸ್ಟ್-2019 ತಿಂಗಳ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ.

| | | | |
|---|---|---|---|
| 1 | ಜಿಲ್ಲೆಯ ಹೆಸರು | **ರಾಯಚೂರು** | |
| 2 | ಉಸ್ತುವಾರಿ ಕಾರ್ಯದರ್ಶಿಯವರ ಹೆಸರು | **ಜಿ. ಕುಮಾರ ನಾಯಕ** | |
| 3 | ಭೇಟಿಯಾದ/ಪ್ರವಾಸದ ದಿನಾಂಕ | **07.08.2019** | |
| 4 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಯಿಂದ ಆಗಸ್ಟ್-2019 ತಿಂಗಳ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ. | **ಗಮನಿಸಿದ ಅಂಶಗಳು** | **ಸಲಹೆಗಳು** |
| | | 1) ಪ್ರವಾಹ ಪರಿಸ್ಥಿತಿ ಕುರಿತು | ಪ್ರಸ್ತುತ ಮಹರಾಷ್ಟ್ರದಲ್ಲಿ ಭಾರಿ ಮಳೆಯಾಗುತ್ತಿದ್ದು, ಬೆಳಗಾವಿ ಜಿಲ್ಲಾಡಳಿತದಿಂದ ಇನ್ನೂ ಹೆಚ್ಚಿನ ಪ್ರಮಾಣದ ನೀರು ಆಲಮಟ್ಟಿ ಜಲಾಶಯಕ್ಕೆ ನೀರು ಹರಿದು ಬರುತ್ತದೆ ಎಂದು ಮುನ್ನೆಚ್ಚರಿಕೆ ನೀಡಿರುತ್ತಾರೆ. ಸದರಿ ಜಲಾಶಯದಿಂದ ನಾರಾಯಣಪೂರ ಜಲಾಶಯಕ್ಕೆ 5.00 ಲಕ್ಷ ಕ್ಯೂಸೆಕ್ಸ್ ಹೆಚ್ಚು ಹರಿದು ಬರಬಹುದೆಂದು ಅಧಿಕಾರಿಗಳು ತಿಳಿಸಿರುತ್ತಾರೆ. ನಾರಾಯಣಪೂರು ಜಲಾಶಯದಿಂದ 5.00 ಲಕ್ಷ ಕ್ಯೂಸೆಕ್ಸ ನೀರು ಬಿಡುವುದರಿಂದ ರಾಯಚೂರು ಜಿಲ್ಲೆಯ ಕೃಷ್ಣ ನದಿ ತೀರದ ಲಿಂಗಸಗೂರು, ದೇವದುರ್ಗ ಮತ್ತು ರಾಯಚೂರು ತಾಲೂಕುಗಳ ಕೆಲವೊಂದು ಜನವಸತಿ ಪ್ರದೇಶಗಳು ತೊಂದರೆಯಾಗುವ ಸಂಭವವಿರುತ್ತದೆ. ಆದುದರಿಂದ ಜಿಲ್ಲೆಯಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿ, ಸ್ಥಳೀಯವಾಗಿ ಇರುವ ಪ್ರವಾಹದ ಕುರಿತು ಜನರಿಗೆ ಜಾಗೃತಿ ಮೂಡಿಸಬೇಕು ಹಾಗೂ ಗಂಜಿ ಕೇಂದ್ರಗಳನ್ನು ತೆಗೆಯುವ ಸ್ಥಳಗಳನ್ನು ಪರಿಶೀಲಿಸಿ ಜಿಲ್ಲಾಡಳಿತಕ್ಕೆ ತಿಳಿಸಬೇಕೆಂದು ಸೂಚನೆಯನ್ನು ನೀಡಲಾಯಿತು. |

| | | | |
|---|---|---|---|
| | | 2) 2019-20 ನೇ ಸಾಲಿನ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ. | 2 ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ಮಳೆಯಾಗುತ್ತಿದ್ದು ಜಿಲ್ಲೆಯಲ್ಲಿ ರೈತರಿಗೆ ಬಿತ್ತನೆ ಕಾರ್ಯಗಳಿಗೆ ತೊಂದರಯಾಗದಂತೆ ಸೂಕ್ತ ಕ್ರಮವಹಿಸಲು ಹಾಗೂ ಬೀದರ್ ಜಿಲ್ಲೆಯನ್ನು ಮಾದರಿಯಾಗಿಟ್ಟುಕೊಂಡು ಪ್ರಧಾನ ಮಂತ್ರಿ ಫಸಲ ಭೀಮಾ ಯೋಜನೆಯನ್ನು ಈ ಜಿಲ್ಲೆಯಲ್ಲಿ ಪ್ರಗತಿ ಸಾಧಿಸಬೇಕೆಂದು ಸಲಹೆಯನ್ನು ನೀಡಲಾಯಿತು.. |

(ಜಿ.ಕುಮಾರ ನಾಯಕ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ
ಹಾಗೂ ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ.

**ದಿನಾಂಕ:12-08-2019 ರಂದು ಮಾನ್ಯ ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಚಾಮರಾಜನಗರ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ**

**ಅಧ್ಯಕ್ಷತೆ:-**

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ ಹಾಗೂ
ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ, ಬೆಂಗಳೂರು

**ಉಪಸ್ಥಿತಿ:-**

ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ
ಅಪರ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
ಪೊಲೀಸ್ ಉಪ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ,
ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಚಾಮರಾಜನಗರ ಜಿಲ್ಲೆ.
ಪ್ರವಾಹ ಪೀಡಿತ ಗ್ರಾಮಗಳಿಗೆ ನಿಯೋಜನೆಗೊಮಡಿದ್ದ ನೋಡಲ್ ಅಧಿಕಾರಿಗಳು.
ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಹಾಜರಾತಿಯನ್ನು ವಹಿಯಲ್ಲಿ ಪಡೆದುಕೊಳ್ಳಲಾಗಿದೆ.

*****

ಮಾನ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳು ಸಭೆಗೆ ಸ್ವಾಗತಿಸಿದರು. ಮುಂದುವರಿದು, ಕಬಿನಿ ಜಲಾಶಯ ಹಾಗೂ ಕೆ.ಆರ್‌ಎಸ್ ಅಣೆಕಟ್ಟೆಯಿಂದ ದಿನಾಂಕ: 11-08-2019 ರಂದು, 2,60,000 ಕ್ಯೂಸೆಕ್ಸ್ ನೀರನ್ನು ನದಿಗೆ ಬಿಟ್ಟಿರುವುದರಿಂದ ಕೊಳ್ಳೇಗಾಲ ತಾಲ್ಲೂಕಿನ ಕಾವೇರಿ ನದಿ ಪಾತ್ರದಲ್ಲಿ ಬರುವ ಗ್ರಾಮಗಳಾದ ಮುಳ್ಳೂರು, ಹಳೆ ಹಂಪಾಪುರ, ದಾಸನಪುರ, ಹಳೆ ಅಣಗಳ್ಳಿ, ಹರಳೆ, ಧನಗೆರೆ, ಎಡಕುರಿಯ, ಸತ್ತೇಗಾಲ, ಗ್ರಾಮಗಳು ಜಲಾವೃತವಾಗಿದ್ದು, ಜಮೀನುಗಳು ಮುಳುಗಡೆಯಾಗಿರುತ್ತದೆ. ಕೊಳ್ಳೇಗಾಲ ತಾಲ್ಲೂಕಿನ ಮುಳ್ಳೂರು, ಹಳೆ ಹಂಪಾಪುರ, ದಾಸನಪುರ, ಹಳೆ ಅಣಗಳ್ಳಿ, ಹರಳೆ, ಸರಗೂರು, ಧನಗೆರೆ, ಎಡಕುರಿಯ, ಸತ್ತೇಗಾಲ ಗ್ರಾಮಗಳು ಪ್ರವಾಹ ಉಂಟಾಗಬಹುದಾದ ಗ್ರಾಮಗಳಾಗಿರುತ್ತವೆ. ಈ ಪೈಕಿ ದಾಸನಪುರ, ಹಳೆ ಹಂಪಾಪುರ, ಹಳೆ ಅಣಗಳ್ಳಿ ಗ್ರಾಮಗಳು ಪೂರ್ಣ ಜಲಾವೃತವಾಗಿರುತ್ತವೆ ಹಾಗೂ ಮುಳ್ಳೂರು, ಯಡಕುರಿಯ ಗ್ರಾಮಗಳು ಭಾಗಶಃ ಜಲಾವೃತವಾಗಿರುತ್ತದೆ ಗ್ರಾಮಗಳಲ್ಲಿನ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಕ್ರಮವಹಿಸಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಈ ಸಂಬಂಧ ಮಾತನಾಡಿ ಪ್ರವಾಹ ಪೀಡಿತ ಗ್ರಾಮಗಳಿಗೆ ನೇಮಕವಾಗಿರುವ ನೋಡಲ್ ಅಧಿಕಾರಿಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಲು ಸೂಚಿಸಲಾಯಿತು.

ದಾಸನಪುರ ಗ್ರಾಮದ ನೋಡಲ್ ಅಧಿಕಾರಿಗಳು ಮಾತನಾಡಿ, ಗ್ರಾಮಸ್ಥರಿಗೆ ಕೊಳ್ಳೇಗಾಲ ಪಟ್ಟಣದಲ್ಲಿರುವ ವರ್ಗೀಕೃತ ಬಾಲಕರ ವಿದ್ಯಾರ್ಥಿ ನಿಲಯಕ್ಕೆ 332 ನಾಗರೀಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದ್ದು, ಗಂಜಿ ಕೇಂದ್ರವನ್ನು ಪ್ರಾರಂಭಿಸಲಾಗಿರುತ್ತದೆ. ಸದರಿ ಗ್ರಾಮದಲ್ಲಿ ಒಟ್ಟಾರೆ 205 ವಾಸದ ಮನೆಗಳಿದ್ದು, ಎಲ್ಲಾ ಮನೆಗಳು ಜಲಾವೃತವಾಗಿರುತ್ತವೆ ಎಂದು ಸಭೆಯ ಗಮನಕ್ಕೆ ತಂದರು.

ಮುಳ್ಳೂರು ಗ್ರಾಮದ ನೋಡಲ್ ಅಧಿಕಾರಿಗಳು ಮಾತನಾಡಿ, ಒಟ್ಟು 1455 ಮನೆಗಳ ಪೈಕಿ 133 ಮನೆಗಳು ಜಲಾವೃತವಾಗಿರುವುದಾಗಿ ಹಾಗೂ 4 ಮನೆಗಳಿಗೆ ಹಾನಿಯಾಗಿರುವುದಾಗಿ ಮತತು ಮುಳ್ಳೂರು ಗ್ರಾಮದಲ್ಲಿಯೇ ನೆರೆ ಸಂತ್ರಸ್ಥರಿಗೆ ಗಂಜಿ ಕೇಂದ್ರ ತೆರದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಹಳೆ ಅಣಗಳ್ಳಿ ಗ್ರಾಮಸ್ಥರನ್ನು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಕೊಳ್ಳೇಗಾಲ ಪಟ್ಟಣದಲ್ಲಿ ಗಂಜಿ ಕೇಂದ್ರ ತೆರಯಲಾಗಿರುತ್ತದೆ ಹಾಗೂ ಹಳೆ ಹಂಪಾಪುರ ಗ್ರಾಮಸ್ಥರಿಗೆ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಹಾಗೂ ಯಡಕುರಿಯ ಮತ್ತು ಸತ್ತೇಗಾಲ ಗ್ರಾಮದ ನೆರೆ ಸಂತ್ರಸ್ಥರಿಗಾಗಿ ಸತ್ತೇಗಾಲ ಅಗ್ರಹಾರದಲ್ಲಿ ಗಂಜಿ ಕೇಂದ್ರವನ್ನು ತೆರದು ಕ್ರಮವಹಿಸಲಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು.

**ಈ ಸಂಬಂಧ ಮಾತನಾಡಿ, ಗಂಜಿ ಕೇಂದ್ರಗಳಲ್ಲಿ ನೆರೆ ಸಂತ್ರಸ್ಥರಿಗಾಗಿ ವೈದ್ಯಕೀಯ ಚಿಕಿತ್ಸೆ ಸೌಲಭ್ಯ, ಶುದ್ಧ ಕುಡಿಯುವ ನೀರು, ಉತ್ತಮ ಗುಣಮಟ್ಟದ ಆಹಾರ, ಹಾಗೂ ಹೊದಿಕೆ, ಇನ್ನಿತರ ಸೌಲಭ್ಯಗಳನ್ನು ಒದಗಿಸಲು ಹಾಗೂ ಗಂಜಿ ಕೇಂದ್ರ ಶುಚಿತ್ವವಾಗಿಡಲು ಕ್ರಮವಹಿಸಲು ಸೂಚಿಸಲಾಯಿತು.**

ಪಶುಪಾಲನಾ ಇಲಾಖೆ ಉಪ ನಿರ್ದೇಶಕರು ಮಾತನಾಡಿ, ಹರಳೆ, ಹಳೆ ಹಂಪಾಪುರ, ದಾಸನಪುರ, ಹಳೆ ಅಣಗಳ್ಳಿಯ 270 ಜಾನುವಾರುಗಳಿಗೆ ಮೇವನ್ನು ಪೂರೈಸುತ್ತಿದ್ದು ಸುರಕ್ಷಿತ ಸ್ಥಳಗಳಿಗೆ ರವಾನಿಸಲಾಗಿರುತ್ತದೆ ಎಂಬ ಅಂಶವನ್ನು ಸಭೆಗೆ ತಿಳಿಸಿದರು.

**ಈ ಸಂಬಂಧ ಮಾತನಾಡಿ, ಯಾವುದೇ ಜಾನುವಾರುಗಳು ಪ್ರವಾಹದಿಂದ ತೊಂದರೆಗೊಳಗಾಗದಂತೆ, ರೋಗಗಳು ಹರಡದಂತೆ ಹಾಗೂ ಮೇವಿಗೆ ತೊಂದರೆಯಾಗದಂತೆ ಮುಂಜಾಗ್ರತೆ ವಹಿಸಲು ಸೂಚಿಸಲಾಯಿತು.**

ಚೆಸ್ಕಾಂ ಅಧಿಕಾರಿಗಳು ಮಾತನಾಡಿ, ಈಗಾಗಲೇ ಪ್ರವಾಹ ಪೀಡಿತ ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುವುದಾಗಿ ಸಭೆಯ ಗಮನಕ್ಕೆ ತಂದರು.

ರಸ್ತೆ ಹಾಗೂ ಸೇತುವೆ ಗಳ ಸ್ಥಿತಿಗತಿಗಳ ಬಗ್ಗೆ ವಿವರಿಸುತ್ತಾ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಯಡಕುರಿಯ ಹತ್ತಿರವಿರುವ ಸೇತುವೆಯ ದುರಸ್ಥಿಯನ್ನು ಸರಿಪಡಿಸುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು

**ಈ ಸಂಬಂಧ ಮಾತನಾಡಿ, ರಸತೆಗಳು ಸೇತುವೆಗಳು ಪ್ರವಾಹದಿಂದ ಹಾನಿಗೊಳಗಾದಲ್ಲಿ ತಕ್ಷಣ ಅದರ ದುರಸ್ಥಿ ಕೆಲಸಗಳನ್ನು ಕೈಗೊಂಡು ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಮಾತನಾಡಿ, ಗಂಜಿ ಕೇಂದ್ರಗಳಲ್ಲಿ ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ ಹಾಗೂ ತಾಲ್ಲೂಕು ಸರ್ಕಾರಿ ಆಸ್ಪತ್ರೆ 24*7 ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಪ್ರವಾಹದಿಂದ ಅವಘಡಗಳು ಸಂಭವಿಸಿದಲ್ಲಿ ಚಿಕಿತ್ಸೆ ನೀಡಲು ಪ್ರತ್ಯೇಕವಾಗಿ 16 ಹಾನಿಗೆಗಳನ್ನು ಕಾಯ್ದಿರಿಸಿಕೊಳ್ಳಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

**ಈ ಸಂಬಂಧ ಮಾತನಾಡಿ, ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ವಹಿಸಲು ಹಾಗೂ ಯಾವುದೇ ಸಂದರ್ಭದಲ್ಲಿ ಚಿಕಿತ್ಸೆ ನೀಡಲು ವೈದ್ಯರು ಮತ್ತು ಸಿಬ್ಬಂದಿಗಳು ಇರುವಂತೆ ನೋಡಿಕೊಳ್ಳಲು ಸೂಚಿಸಲಾಯಿತು.**

ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಮಾತನಾಡಿ, ಮುಳ್ಳೂರು, ದಾಸನಪುರ, ಹಳೆ ಅಣಗಳ್ಳಿ, ಹಳೆ ಹಂಪಾಪುರ ಗ್ರಾಮದಲ್ಲಿರುವ ಸರ್ಕಾರಿ ಶಾಲೆಗಳು ಜಲಾವೃತವಾಗಿರುತ್ತವೆ. ಒಂದು ವಾರದ ಹಿಂದೆಯೇ, ಸದರಿ ಶಾಲೆಗಳ ಮುಖ್ಯ ಶಿಕ್ಷಕರ ಸಭೆ ನಡೆಸಿ ಶಾಲಾ ದಾಖಲೆಗಳನ್ನು ಸುರಕ್ಷಿತವಾಗಿಡಲು ಸೂಚಿಸಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಪ್ರವಾಹ ಪೀಡಿತ 10 ಗ್ರಾಮಗಳಲ್ಲಿ, ರಾಗಿ– 7 ಹೆಕ್ಟೇರ್, ಕಬ್ಬು– 108 ಹೆಕ್ಟೇರ್, ಮುಸುಕಿನ ಜೋಳ– 105 ಹೆಕ್ಟೇರ್, ಭತ್ತ– 84 ಹೆಕ್ಟೇರ್, ಭತ್ತ (ನರ್ಸರಿ)– 10 ಹೆಕ್ಟೇರ್, ಒಟ್ಟಾರೆ– 314 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ಮರ್ಗಸೂಚಿಯಂತೆ 42.39 ಲಕ್ಷಗಳ ನಷ್ಟವಾಗಿರುವುದನ್ನು ದಿನಾಂಕ:11–08–2019 ರ ಅಂತ್ಯಕ್ಕೆ ಅಂದಾಜಿಸಲಾಗಿರುತ್ತದೆ. ಪ್ರವಾಹ ಪರಿಸ್ಥಿತಿ ಮುಂದುವರಿದಿದ್ದು ಇನ್ನೂ ಅಧಿಕ ಪ್ರಮಾಣದಲ್ಲಿ ಬೆಳೆಹಾನಿಯಾಗುವ ಸಂಭವವಿರುವುದಾಗಿ ಸಭೆಯ ಗಮನಕ್ಕೆ ತಂದರು.

**ಈ ಸಂಬಂಧ ಮಾತನಾಡಿ, ಬೆಳೆ ಹಾನಿ ಬಗ್ಗೆ ಪ್ರವಾಹ ತಗ್ಗಿದ ನಂತರದಲ್ಲಿ ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆಯಿಂದ ಜಂಟಿಸಮೀಕ್ಷೆ ನಡೆಸಿ ಶೀಘ್ರವಾಗಿ ಪರಿಹಾರ ಪಾವತಿಸಲು ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.**

ನಾಗರೀಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಪೊಲೀಸ್ ಇಲಾಖೆ, ಅಗ್ನಿಶಾಮಕ ಇಲಾಖೆ, ಕಂದಾಯ ಇಲಾಖೆ, ಸಾರಿಗೆ ಇಲಾಖೆ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮುಂಜಾಗ್ರತೆಯಾಗಿ ಎಲ್ಲಾ ಕ್ರಮಗಳನ್ನು ಕೈಗೊಂಡಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

**ಪ್ರವಾಹದ ನೀರನ್ನು ನದಿ ಪಾತ್ರಗಳಲ್ಲಿ (ಹತ್ತಿರದಲ್ಲಿ) ಇರುವಂತಹ ಕೆರೆಗಳನ್ನು ಗುರುತಿಸಿ ಕೆರೆ ತುಂಬಿಸಲು ಕಾಲುವೆ ಮಾಡುವ ಬಗ್ಗೆ ಕ್ರಮವಹಿಸಲು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಸೂಚಿಲಾಯಿತು ಹಾಗೂ ಪ್ರವಾಹದ ನೀರನ್ನು ಕೆರೆಗಳಿಗೆ ಭರ್ತಿ ಮಾಡಿಕೊಳ್ಳಲು ಅವಶ್ಯವಿರುವ ಫೀಡರ್ ಚಾನಲ್ ಅನ್ನು ಮಾಡಲು ನರೇಗಾ ಯೋಜನೆಯಡಿಯಲ್ಲಿ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಹಣಾಧೀಕಾರಿಗಳಿಗೆ ಸೂಚಿಸಲಾಯಿತು.**

**ಕೊಳ್ಳೇಗಾಲ ತಾಲ್ಲೂಕಿನ ಕಾವೇರಿ ನದಿ ಪಾತ್ರದಲ್ಲಿರುವ ಪ್ರವಾಹ ಪೀಡಿತ ಗ್ರಾಮಗಳಲ್ಲಿ ಜನರನ್ನು ರಕ್ಷಿಸಲು ಎಲ್ಲಾ ಇಲಾಖೆ ಅಧಿಕಾರಿ/ನೌಕರರು ಕೇಂದ್ರಸ್ಥಾನದಲ್ಲಿದ್ದುಕೊಂಡು ಕರ್ತವ್ಯ ನಿರ್ವಹಿಸಬೇಕು, ಜನ–ಜಾನುವಾರುಗಳ ಆರೋಗ್ಯದ ಬಗ್ಗೆ ಮುಂಜಾಗ್ರತೆ ವಹಿಸುವುದು, ಪೊಲೀಸ್, ಅಗ್ನಿಶಾಮಕ ಹಾಗೂ ಕಂದಾಯ ಇಲಾಖೆಗಳು ಕಂಟ್ರೋಲ್ ರೂಂ ತೆರೆದು ನಾಗರೀಕರ ಸಮಸ್ಯೆಗಳಿಗೆ ಸ್ಪಂದಿಸುವುದು, ಗಂಜಿ ಕೇಂದ್ರವನ್ನು ವ್ಯವಸ್ಥಿತವಾಗಿ ನಿರ್ವಹಿಸುವುದು, ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡುವುದು ಇನ್ನಿತರ ಅಗತ್ಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಚಿಸಲಾಯಿತು.**

ಅಂತಿಮವಾಗಿ ಜಿಲ್ಲಾಧಿಕಾರಿಗಳು, ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ನೀಡಿರುವ ಸೂಚನೆಯಂತೆ ಕ್ರಮವಹಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸುತ್ತಾ, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ವಂದನೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ರಾಜೇಂದರ್ ಕುಮಾರ್ ಕಠಾರಿಯಾ),
ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ, ಹಾಗೂ
ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಡಾ: ವಿಶಾಲ್. ಆರ್. ಭಾ.ಆ.ಸೇ. ಮಾನ್ಯ ಆಯುಕ್ತರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:31-08-2019ರಂದು ಬೆಳಗ್ಗೆ 10-00ಗಂಟೆಗೆ ಜರುಗಿದ ಜಿಲ್ಲೆಯಲ್ಲಿ ಅತಿವೃಷ್ಠಿ ಹಾಗೂ ಪ್ರವಾಹದಿಂದ ಆಗಿರುವ ಹಾನಿಯ ಬಗ್ಗೆ ಕೈಕೊಂಡ ಪರಿಹಾರ ಕ್ರಮಗಳ ಕುರಿತು ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳು.

****

<u>ಸಭೆಯ ಹಾಜರಾತಿ:</u>

ಹಾಜರಾತಿ ವಹಿಯಲ್ಲಿ ಇದ್ದಂತೆ.

ಜಿಲ್ಲಾಧಿಕಾರಿಗಳು ಹಾವೇರಿ ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಡಾ: ವಿಶಾಲ್. ಆರ್. ಭಾ.ಆ.ಸೇ. ಮಾನ್ಯ ಆಯುಕ್ತರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ಕೋರಿದರು. ಹಾವೇರಿ ಜಿಲ್ಲೆಯಲ್ಲಿ ಮಳೆಯಿಂದ ಆದ ಹಾನಿಯ ಕುರಿತು ಸವಿವರವಾದ ವಿವರವನ್ನು ಪ್ರಾತ್ಯಕ್ಷತೆಯ ಮುಖಾಂತರ ಜಿಲ್ಲಾಧಿಕಾರಿಗಳು ವಿವರಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಆಗಸ್ಟ್ ತಿಂಗಳನಲ್ಲಿ ಸತತವಾಗಿ ಸುರಿದ ಭಾರಿ ಮಳೆ ಮತ್ತು ನದಿಯ ಪ್ರವಾಹದಿಂದಾಗಿ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮನೆ ಹಾನಿ, ಜನ-ಜಾನುವಾರು ಹಾನಿ, ಬೆಳೆ ಹಾನಿ ಹಾಗೂ ಸಾರ್ವಜನಿಕ/ ಖಾಸಗಿ ಆಸ್ತಿ-ಪಾಸ್ತಿಗಳು ಹಾನಿಯಾಗಿದ್ದು, ಈ ಸಂದರ್ಭದಲ್ಲಿ ಜಿಲ್ಲೆಯ ಎಲ್ಲ ಅಧಿಕಾರಿಗಳು ಹಗಲಿರುಳು ಎನ್ನದೇ ಉತ್ತಮ ಕೆಲಸವನ್ನು ನಿರ್ವಹಿಸಿದ್ದಕ್ಕೆ ಅಧಿಕಾರಿಗಳಿಗೆ ಅಭಿನಂದನೆಯನ್ನು ಸಲ್ಲಿಸಿದರು ಹಾಗೂ ನೆರೆ ಪರಿಹಾರ ಕಾರ್ಯಗಳ ಜೊತೆಗೆ ಮಳೆ ನೀರು ಇಂಗದ ಪ್ರದೇಶಗಳಲ್ಲಿ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಈಗಿನಿಂದಲೇ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನಕ್ಕೂ ಸಹ ಪ್ರಥಮ ಆದ್ಯತೆ ನೀಡಿ ಮುಂಬರುವ ದಿನಗಳಲ್ಲಿ ಎದುರಾಗಬಹುದಾದ ಕುಡಿಯುವ ನೀರಿನ ಸಮಸ್ಯೆ ಹಾಗೂ ಬರ ಪರಿಸ್ಥಿತಿಯ ಸಮಯದಲ್ಲಿ ಖಾಸಗಿ ಕೊಳವೆ ಬಾವಿಯ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುವಂತೆ ಎಲ್ಲ ತಹಶೀಲ್ದಾರರಿಗೆ ತಿಳಿಸುತ್ತಾ ಈ ಕೆಳಗಿನಂತೆ ನಿರ್ದೇಶನಗಳನ್ನು ನೀಡಿದರು.

- ನೆರೆ ಹಾವಳಿಗೆ ತುತ್ತಾದ ಜನರನ್ನು ಸೂಕ್ತ ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಿ ಸದರಿ ಸಂತ್ರಸ್ಥರಿಗೆ ಮೂಲಭೂತ ಸೌಕರ್ಯಗಳಾದ ಆಹಾರ, ವಸತಿ, ಕುಡಿಯುವ ನೀರಿನ ಸೌಕರ್ಯವನ್ನು ಕಲ್ಪಿಸುವಂತೆ ಸೂಚಿಸಿದರು.

- ಜಿಲ್ಲೆಯಲ್ಲಿನ ಕುಡಿಯುವ ನೀರಿನ ಕಾಮಗಾರಿಗಳಿಗೆ ಈಗಾಗಲೇ ಮಂಜೂರಾತಿ ನೀಡಿ ಅನುದಾನವನ್ನು ಸಹ ಬಿಡುಗಡೆ ಮಾಡಲಾಗಿದ್ದು, ಅಕ್ಟೋಬರ್-ನವೆಂಬರ್ ಮಾಹೆಯ ಒಳಗಾಗಿ ಕುಡಿಯುವ ನೀರಿನ ಕಾಮಗಾರಿಗಳನ್ನು ಪೂರ್ಣಗೊಳಿಸಿ ಬೇಸಿಗೆಯ ಸಮಯದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಮುಂಜಾಗ್ರತಾ ಕ್ರಮವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.
- ಅತಿವೃಷ್ಠಿ/ ನದಿಯ ಪ್ರವಾಹದಿಂದ ಹಾನಿಗೊಳಗಾದ ಮನೆಗಳ ಸರ್ವೆ ಕಾರ್ಯವನ್ನು ಎಚ್ಚರಿಕೆಯಿಂದ ಮಾಡುವಂತೆಯೂ, ಹಾನಿಗೊಳಗಾದ ಪ್ರತಿ ಮನೆಯ ನಾಲ್ಕು ಫೋಟೋಗಳನ್ನು ಕಡ್ಡಾಯವಾಗಿ ಸಂಗ್ರಹಿಸಿ ಯಾವುದೇ ಒತ್ತಡಕ್ಕೆ ಒಳಗಾಗದೆ ಸಮಸ್ಯೆಯನ್ನು ತಂದುಕೊಳ್ಳದೇ ನಿಖರವಾದ ಸಮೀಕ್ಷೆಯನ್ನು ಕೈಗೊಂಡು ಸರ್ಕಾರದ ಮಾರ್ಗಸೂಚಿಯಂತೆ ಸಂತ್ರಸ್ಥರಿಗೆ ಪರಿಹಾರವನ್ನು ಸಕಾಲದಲ್ಲಿ ವಿತರಿಸುವಂತೆ ಸೂಚಿಸಿದರು.
- ಗ್ರಾಮಲೆಕ್ಕಾಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಬೆಳೆ ಹಾನಿ ಮತ್ತು ಫಲವತ್ತಾದ ಭೂಮಿಯ ಹಾನಿಯ ನಿಖರವಾದ ಜಂಟಿ ಸರ್ವೆ ಸಮೀಕ್ಷೆ ಮಾಡಿ ಹಾನಿಯ ವರದಿಯನ್ನು ಸಲ್ಲಿಸುವಂತೆ ಸೂಚಿಸಿದರು.
- ಗ್ರಾಮಾಂತರ ಪ್ರದೇಶಗಳಲ್ಲಿ ನಿರಂತರ ಮಳೆಯಿಂದ ಹಾನಿಗೊಳಗಾದ ಮನೆಗಳಿಗೆ ವಿದ್ಯುತ್ ಸೌಕರ್ಯವನ್ನು ತಕ್ಷಣ ಕಲ್ಪಿಸುವಂತೆ ಸೂಚಿಸಿದರು.
- ಅತಿವೃಷ್ಠಿಯಿಂದ ಹಾನಿಗೊಳಗಾದ ಎಲ್ಲ ಮನೆಗಳ ವಿವರವನ್ನು ರಾಜೀವಗಾಂಧಿ ವಸತಿ ನಿಗಮದ ವೆಬ್‌ಸೈಟ್‌ನಲ್ಲಿ ಫಲಾನುಭವಿವಾರು ವಿವರ ಹಾಗೂ ಮನೆಯ ಹಾನಿಯ ವಿವರವನ್ನು ತಪ್ಪದೇ ದಾಖಲಿಸುವಂತೆ ಸೂಚಿಸಿದರು.
- ಅತಿವೃಷ್ಠಿಯಿಂದ ಹಾನಿಗೊಳಗಾದ ಫಲಾನುಭವಿಗಳಿಗೆ ರೂ. 10,000/- ಪರಿಹಾರಧನವನ್ನು ಆರ್.ಟಿ.ಜಿ.ಎಸ್. ಮುಖಾಂತರ ಜಮೆ ಮಾಡಲಾಗಿದ್ದು, ಫಲಾನುಭವಿಗಳ ಖಾತೆ ಜಮಾ ಆಗಿರುವ ಬಗ್ಗೆ ತಹಶೀಲ್ದಾರರು ಪರಿಶೀಲಿಸುವಂತೆ ಸೂಚಿಸಿದರು. ಆರ್.ಟಿ.ಜಿ.ಎಸ್ ಗೆ ಆಧಾರ್ ಲಿಂಕ್ ಆಗಿರುವ ಬಗ್ಗೆ ಪುನರ್ ಪರಿಶೀಲಿಸುವಂತೆ ಹಾಗೂ ಸದರಿ ಫಲಾನುಭವಿಗಳಿಗೆ ಪರಿಹಾರಧನ ವರ್ಗಾವಣೆಯಾಗದೇ ಇದ್ದಲ್ಲಿ ಪುನರ್ ಪರಿಶೀಲನೆ ಮಾಡುವಂತೆ ಸೂಚಿಸಿದರು.
- ನೆರೆಯಿಂದ ಹಾನಿಗೊಳಗಾದ ಸಂತ್ರಸ್ಥರಿಗೆ ಮನೆಗಳನ್ನು ಮಂಜೂರು ಮಾಡುವಾಗ ಅರ್ಹ ಫಲಾನುಭವಿಗಳಿಗೆ ಮಾತ್ರ ಮಂಜೂರು ಮಾಡುವುದು. ತಪ್ಪು ಮಾಹಿತಿ ನೀಡಿ ಸರ್ಕಾರಿ ಸೌಲಭ್ಯವನ್ನು ಪಡೆದುಕೊಳ್ಳಲು ಮುಂದಾಗುವ ಅನರ್ಹ ಫಲಾನುಭವಿಗಳ ಮೇಲೆ ತೀವ್ರ ನಿಗಾ ಇಟ್ಟು ಅಂತವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.
- ಮನೆ ಹಾನಿ ಕುರಿತು ಸಮೀಕ್ಷೆ ಮಾಡಿ ಸಲ್ಲಿಸುವ ವರದಿಗಳನ್ನು ತಹಶೀಲ್ದಾರರು/ ಉಪ ವಿಭಾಗಾಧಿಕಾರಿಗಳು/ ಜಿಲ್ಲಾಧಿಕಾರಿಗಳು ಶೇ.100% ರಷ್ಟು ಪರಿಶೀಲಿಸಿ ಅರ್ಹರಿಗೆ ನಿವೇಶನವನ್ನು ಮಂಜೂರಿಸುವಂತೆ ಸೂಚಿಸಿದರು.
- ಜಿಲ್ಲೆಯಲ್ಲಿ ಅತಿವೃಷ್ಠಿ/ ನದಿ ಪ್ರವಾಹದಿಂದಾಗಿ ಜನರಿಗೆ ಸಾಂಕ್ರಾಮಿಕ ರೋಗಗಳು ಬರುವ ಸಾಧ್ಯತೆ ಇರುವುದರಿಂದ ಮುಂಜಾಗ್ರತಾ ಕ್ರಮವಾಗಿ ಅಗತ್ಯ ಔಷಧಿ ಸಂಗ್ರಹಿಸಿಟ್ಟುಕೊಳ್ಳುವುದರೊಂದಿಗೆ ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತೆಯ ಕ್ರಮವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು.

- ಅತಿವೃಷ್ಠಿಯಿಂದಾಗಿ ಜಾನುವಾರುಗಳು ಮೃತಪಟ್ಟಿದ್ದಲ್ಲಿ ತಕ್ಷಣ ಪರಿಹಾರವನ್ನು ನೀಡತಕ್ಕದ್ದು. ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಅಗತ್ಯ ಮೇವನ್ನು ಸಂಗ್ರಹಿಸಿಟ್ಟುಕೊಳ್ಳುವುದು. ಅಗತ್ಯವಿದ್ದಲ್ಲಿ ಗೋಶಾಲೆಗಳನ್ನು ಆರಂಭಿಸುವಂತೆಯೂ ಹಾಗೂ ಜಾನುವಾರುಗಳಿಗೆ ರೋಗ ರುಜಿನಗಳು ತಗುಲದಂತೆ ಲಸಿಕೆಗಳನ್ನು ಹಾಕಿಸುವುದು ಹಾಗೂ ಅವಶ್ಯಕ ಔಷಧಿಗಳನ್ನು ಸಂಗ್ರಹಿಸಿಟ್ಟುಕೊಳ್ಳುವಂತೆ ಸಹಾಯಕ ನಿರ್ದೇಶಕರು ಪಶುಪಾಲನಾ ಮತ್ತು ಪಶು ಸಂಗೋಪನಾ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದರು.
- ಮೂಲಭೂತ ಸೌಕರ್ಯಗಳಾದ ವಿದ್ಯುತ್, ರಸ್ತೆ, ಸೇತುವೆ, ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳ ಪುನರ್ ಸ್ಥಾಪನೆಗೆ ಮೊದಲ ಆದ್ಯತೆಯನ್ನು ನೀಡುವಂತೆಯೂ ಹಾಗೂ ಕುಡಿಯುವ ನೀರಿನ ಮರು ಸ್ಥಾಪನೆಯಾದ ನಂತರ ನೀರನ್ನು ಕುಡಿಯಲು ಯೋಗ್ಯವಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಜನರಿಗೆ ಶುದ್ಧ ಕುಡಿಯುವ ನೀಡನ್ನು ಪೂರೈಸುವಂತೆ ಸೂಚಿಸಿದರು.
- ನದಿ ದಡದಲ್ಲಿರುವ ಸಂತ್ರಸ್ಥರ ಮನೆಗಳನ್ನು ಪ್ರಥಮ ಆದ್ಯತೆ ನೀಡಿ ಸ್ಥಳಾಂತರಿಸತಕ್ಕದ್ದು, ಸ್ಥಳಾಂತರಿಸಲಾಗುವ ಸಂತ್ರಸ್ಥರನ್ನು ಊರಿನ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ತಾತ್ಕಾಲಿಕವಾಗಿ ಮನೆಗಳನ್ನು ನಿರ್ಮಿಸತಕ್ಕದ್ದು. ಇದರಿಂದಾಗಿ ಎಲ್ಲ ಮನೆಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಕೃಷ್ಣ ಬಾಜಪೇಯಿ)
ಜಿಲ್ಲಾಧಿಕಾರಿಗಳು
ಹಾವೇರಿ ಜಿಲ್ಲೆ, ಹಾವೇರಿ

16/09/19
(ಡಾ:- ವಿಶಾಲ್. ಆರ್.) ಭಾ.ಆ.ಸೇ.
ಆಯುಕ್ತರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ
ಇಲಾಖೆ ಬೆಂಗಳೂರು ಹಾಗೂ
ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ನಂ:ಅತಿವೃಷ್ಠಿ:ವಹಿ:25:2019-20
ಹಾವೇರಿ,ದಿನಾಂಕ:31-8-2019

# ಮಾನ್ಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರುಗಳು ಜಂಟಿಯಾಗಿ ನಡೆಸಲಾದ ಪ್ರವಾಹ ಪೀಡಿತ ಪ್ರದೇಶಗಳ ಪರಿಶೀಲನಾ ವರದಿ:-

| | | |
|---|---|---|
| 1 | ಜಿಲ್ಲೆಯ ಹೆಸರು | ಕೊಡಗು |
| 2 | ಹಾಜರಿದ್ದ ಸಚಿವರು | ಶ್ರೀ ಸುರೇಶ್ ಕುಮಾರ್ |
| 3 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ | ವಿ. ಅನ್ಬುಕುಮಾರ್ ಭಾ.ಆ.ಸೇ |
| 4 | ಭೇಟಿಯಾದ/ಪ್ರವಾಸದ ದಿನಾಂಕ | ಆಗಸ್ಟ್ -2019 ದಿನಾಂಕ:20.08.2019 ರಿಂದ ದಿನಾಂಕ:22.08.2019 |
| 5 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಈ ಕೆಳಗಿನಂತಿದೆ. |

ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 20.08.2019ರಂದು ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ (ಕೆ.ಡಿ.ಪಿ) ಸಭೆಯಲ್ಲಿ ನಿರ್ದೇಶನ ನೀಡಿದಂತೆ ದಿನಾಂಕ:20.08.2019 ರಿಂದ ದಿನಾಂಕ:22.08.2019ರವರೆಗೆ ಸನ್ಮಾನ್ಯ ಸಚಿವರೊಂದಿಗೆ ಕೊಡಗು ಜಿಲ್ಲೆಯಲ್ಲಿ ಪ್ರವಾಹಕ್ಕೆ ಒಳಗಾದ ಪ್ರದೇಶಗಳ ಭೌತಿಕ ಪರಿಶೀಲನೆ ನಡೆಸಲಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

**ಭೌತಿಕ ಪರಿಶೀಲನೆಯ ವಿವರ:-**

1. ಪುನರ್ವಸತಿ ನಿರ್ಮಾಣ ಕಾಮಗಾರಿಗಳಿಗೆ ಭೇಟಿ.
2. ಜಂಬೂರಿನಲ್ಲಿ 400 ಹಾಗೂ ಇನ್ಫೋಸಿಸ್ ಸಂಸ್ಥೆಯವರಿಂದ 200 ಮನೆಗಳನ್ನು ನಿರ್ಮಿಸಲಾಗುತ್ತಿದ್ದು ಸದರಿ ಮನೆಗಳನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಲಾಗಿದೆ.
3. ಹಾರಂಗಿ ಡ್ಯಾಂಗೆ ಭೇಟಿ ನೀಡಿ ನೀರಿನ ಪ್ರಮಾಣ ಪರಿಶೀಲಿಸಲಾಗಿದೆ.
4. ಬಿರುಕು ಬಿಟ್ಟಿರುವ ಅಯ್ಯಪ್ಪ ಬೆಟ್ಟಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ.
5. ಹಾಗೂ ವಿವಿಧ ಕಾಮಗಾರಿಗಳ ಪರಿಶೀಲನೆ ನಡೆಸಲಾಗಿದೆ. (ವಿವರ ಈ ಕೆಳಗಿನಂತಿದೆ)

2019ರ ಮುಂಗಾರು ಋತುವಿನಲ್ಲಿ ಆಗಸ್ಟ್ 1 ರಿಂದ 9 ರವರೆಗೆ ಕರ್ನಾಟಕ ರಾಜ್ಯದಲ್ಲಿ ಬಿದ್ದಂತಹ ಮಹಾ ಮಳೆಗೆ ಹಾಗು ಮಹಾರಾಷ್ಟ್ರ ರಾಜ್ಯದಲ್ಲಿನ ಕೃಷ್ಣ ಕಣಿವೆ ಜಲಾಶಯಗಳು ತುಂಬಿ ಹರಿದ ನೀರಿನಿಂದ ರಾಜ್ಯದ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಪ್ರವಾಹ ಉಂಟಾಗಿ ನದಿಯ ಅಕ್ಕಪಕ್ಕದ ಪ್ರದೇಶಗಳಿಗೆ ನೀರು ತುಂಬಿ ಅಪಾರ ಪ್ರಮಾಣದ ಜೀವಹಾನಿ ಮತ್ತು ಬೆಳೆಹಾನಿ ಹಾಗು ಸಾರ್ವಜನಿಕ ಆಸ್ತಿ ಹಾನಿಯಾದ ಹಿನ್ನಲೆಯಲ್ಲಿ ಸರ್ಕಾರವು ರಾಜ್ಯದ 22 ಜಿಲ್ಲೆಗಳಡಿ ಬರುವ 103 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಪ್ರದೇಶಗಳೆಂದು ಸರ್ಕಾರವು ಘೋಷಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಪ್ರದೇಶವೆಂದು ಘೋಷಿಸಲಾಗಿದ್ದು, ಹಾನಿಯ ವಿವರಗಳು ಈ ಕೆಳಗಿನಂತಿದೆ.

ಕೊಡಗು ಜಿಲ್ಲೆಯಲ್ಲಿ ದಿನಾಂಕ:15-08-2019ರ ಬೆಳಿಗ್ಗೆಯಿಂದ ಮಳೆಯ ಪ್ರಮಾಣ ಇಳಿಮುಖಗೊಂಡಿರುತ್ತದೆ. ಜಿಲ್ಲೆಗೆ ಜನವರಿ-2019ರ ಮಾಹೆಯಿಂದ ಈವರೆವಿಗೆ 2043.58 ಮಿ.ಮೀ. ಮಳೆಯಾಗಿರುತ್ತದೆ. ಕಳೆದ ವರ್ಷ ಇದೇ ಅವಧಿಗೆ 3615.93 ಮಿ.ಮೀ. ಮಳೆಯಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಶೇ.56.52 ರಷ್ಟಿರುತ್ತದೆ. ಜಿಲ್ಲೆಯ ಎಲ್ಲಾ ನದಿಗಳು ತುಂಬಿ ಹರಿಯುತ್ತಿದ್ದು, ಹಾರಂಗಿ ಜಲಾಶಯದಿಂದ ನೀರನ್ನು ಹೊರ ಬಿಡಲಾಗುತ್ತಿದೆ.

ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲೆಯಲ್ಲಿ ದಿನಾಂಕ:07-08-2019 ರಿಂದ 15-08-2019 ರವರೆಗೆ (ಸಾರ್ವತ್ರಿಕ ರಜಾ ದಿನಗಳು ಸೇರಿದಂತೆ 09 ದಿವಸಗಳು) ಅಂಗನವಾಡಿ, ಶಾಲಾ ಮತ್ತು ಕಾಲೇಜುಗಳಿಗೆ ಜಿಲ್ಲಾಡಳಿತದಿಂದ ರಜೆ ಘೋಷಿಸಲಾಗಿದೆ.

ಜಾವೇದ್ ಅಖ್ತರ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ದೂರವಾಣಿ : 080-22255324
080-22034234
ಫ್ಯಾಕ್ಸ್ : 080-22353916
ಇ-ಮೇಲ್: prs-hfw@karnataka.gov.in
ಕೊಠಡಿ ಸಂಖ್ಯೆ: 105, ಮೊದಲನೇ ಮಹಡಿ
ವಿಕಾಸ ಸೌಧ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು-560 001

E-648262/H419
16/8

ಸಂಖ್ಯೆ: ಆಕುಕ 181 ಪ್ರಕಾ 2019 ದಿನಾಂಕ: 14.08.2019

## ಟಿಪ್ಪಣಿ

ಮಂಡ್ಯ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯಾಗಿ ನಾನು ದಿನಾಂಕ: 12.08.2019 ರಂದು ಜಿಲ್ಲೆಗೆ ಭೇಟಿ ನೀಡಿದ್ದು, ಪ್ರವಾಸ ವರದಿಯನ್ನು ಈ ಕೆಳಕಂಡಂತೆ ಸಲ್ಲಿಸಲಾಗಿದೆ:-

ಜಲಾನಯನ ಪ್ರದೇಶಗಳಲ್ಲಿ ಉಂಟಾದ ಭಾರೀ ಮಳೆಯಿಂದ ಕೆ.ಆರ್.ಎಸ್. ಜಲಾಶಯದ ಒಳ ಹರಿವು ಮತ್ತು ಹೊರಹರಿವು ಅತ್ಯಧಿಕ ಪ್ರಮಾಣದಲ್ಲಿ ಹೆಚ್ಚಾಗಿರುತ್ತದೆ. ದಿನಾಂಕ: **12.08.2019** ರಂದು ವಿವಿಧ ಸಮಯಗಳಲ್ಲಿ ಕೆ.ಆರ್.ಎಸ್. ಜಲಾಶಯದ ಒಳ ಹರಿವು ಮತ್ತು ಹೊರ ಹರಿವಿನ ಪ್ರಮಾಣ ಈ ಕೆಳಕಂಡಂತಿದೆ :

| ಕ್ರ.ಸಂ. | ಸಮಯ | ಒಳಹರಿವು (ಕ್ಯೂಸೆಕ್ಸ್‌ಗಳಲ್ಲಿ) | ಹೊರಹರಿವು (ಕ್ಯೂಸೆಕ್ಸ್‌ಗಳಲ್ಲಿ) (ನದಿಗೆ) |
|---|---|---|---|
| 1. | ಬೆಳಗ್ಗೆ 6.00 ಗಂಟೆ | 204200 | 151315 |
| 2. | ಬೆಳಗ್ಗೆ 10.00 ಗಂಟೆ | 202312 | 163874 |
| 3. | ಮಧ್ಯಾಹ್ನ 12 ಗಂಟೆ | 197743 | 163874 |

ಕಳೆದ ಎರಡು ದಿನಗಳಿಂದ ಜಲಾನಯನ ಪ್ರದೇಶಗಳಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದ ಕೆ.ಆರ್.ಎಸ್. ಜಲಾಶಯದಲ್ಲಿ ನೀರಿನ ಒಳಹರಿವು ಹೆಚ್ಚಾದ್ದರಿಂದ, ಸುಮಾರು 163874 ಕ್ಯೂಸೆಕ್ಸ್ ನೀರನ್ನು ಹೊರ ಬಿಡಲಾಯಿತು. ಆದರೆ, ಮಧ್ಯಾಹ್ನದ ನಂತರ ನೀರಿನ ಒಳಹರಿವು ಸ್ವಲ್ಪ ಕಡಿಮೆಯಾಗಿದ್ದು, ಸಂಜೆಯ ನಂತರ 150000 ಕ್ಯೂಸೆಕ್ಸ್‌ಗಿಂತ ಕಡಿಮೆಯಾಗಿರುತ್ತದೆ. ನೀರಿನ ಒಳಹರಿವು ತೀವ್ರವಾಗಿ ಕಡಿಮೆಯಾಗುತ್ತದೆಂದು ಅಂದಾಜಿಸಿ ಸಂಜೆ 4.00 ರ ಹೊತ್ತಿಗೆ ಹೊರ ಹರಿವನ್ನು 50000 ಕ್ಯೂಸೆಕ್ಸ್‌ಗೆ ಇಳಿಸಲಾಯಿತು ಹಾಗೂ ರಾತ್ರಿ 7.00 ರ ಹೊತ್ತಿಗೆ ಬಹುತೇಕ ನಿಲ್ಲಿಸಲಾಯಿತು.

1961 ನೇ ಇಸವಿಯಲ್ಲಿ 2,13,000 ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಲಾಗಿದ್ದು, 1991 ರಲ್ಲಿ 2,11,000 ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಲಾಗಿತ್ತು. ಆ ಸಮಯದಲ್ಲೂ ಸಹ ಊರಿನಿಂದ ಹೊರಗೆ ಇದ್ದ ಕೆಲವು ಮನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ಹಳ್ಳಿಗಳು ನೀರಿನಲ್ಲಿ ಮುಳುಗಡೆಯಾಗಿರುವುದಿಲ್ಲ. ಜಿಲ್ಲಾಡಳಿತವು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡು ನಡುಗಡ್ಡೆಯ ಮಠದಲ್ಲಿ ವಾಸಿಸುತ್ತಿದ್ದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು ಹಾಗೂ ನೀರು ಬಿಡುಗಡೆಗೂ ಮುನ್ನ ತಮ್ಮ ಉದ್ಯೋಗದ ಅವಶ್ಯಕತೆಗಾಗಿ ನದಿದಾಟಿದವರನ್ನು ಮರಳಿ ಕರೆತರಲಾಗಿತ್ತು.

2--

ಮಂಡ್ಯ ಜಿಲ್ಲೆಯಲ್ಲಿ ಬಿದ್ದ ಮಳೆಗೆ ಸಂಬಂಧಿಸಿದಂತೆ ಕೆಲವು ಪ್ರಮುಖ ಸಂಗತಿಗಳು :

ಕೃಷ್ಣರಾಜಸಾಗರ ಜಲಾಶಯ ಭರ್ತಿ ಕುರಿತು :

| ದಿನಾಂಕ | ಒಳಹರಿವು (ಕ್ಯೂಸೆಕ್ಸ್‌ನಲ್ಲಿ) | ಹೊರಹರಿವು (ಕ್ಯೂಸೆಕ್ಸ್‌ನಲ್ಲಿ) | ಅಡಿಗಳ ಮಟ್ಟ |
|---|---|---|---|
| 8.8.2019 | 30774 | 3226 | 91.00 |
| 9.8.2019 | 51152 | 374 | 97.5 |
| 10.8.2019 | 108555 | 441 | 108.5 |
| 11.8.2019 | 187721 | 57373 | 118.75 |
| **12.8.2019** | | | |
| ಬೆಳಗ್ಗೆ 6.00 ಗಂಟೆ | 204200 | 151315 | 121.94 |
| ಬೆಳಗ್ಗೆ 10.00 ಗಂಟೆ | 202312 | 163874 | 122.35 |
| ಮಧ್ಯಾಹ್ನ 12.00 ಗಂಟೆ | 197743 | 163874 | 122.25 |

ಜಾನುವಾರು ಹಾನಿಯಾಗಿ ಅಂದಾಜು ರೂ. 9 ಲಕ್ಷ ನಷ್ಟವಾಗಿರುತ್ತದೆ. ಒಟ್ಟು 43 ಮನೆಗಳಿಗೆ ಹಾನಿಯಾಗಿದ್ದು, ಅಂದಾಜು ರೂ. 2.15 ಕೋಟಿ ಹಾನಿಯಾಗಿರುತ್ತದೆ. 1000 ಎಕರೆ ವಿಸ್ತೀರ್ಣದ ಕೃಷಿ ಬೆಳೆ ಹಾನಿಯಾಗಿದ್ದು, ಅಂದಾಜು ರೂ. 56 ಲಕ್ಷ ಹಾನಿಯಾಗಿರುತ್ತದೆ. 363 ಎಕರೆ ತೋಟಗಾರಿಕೆ ಬೆಳೆ ಹಾನಿಯಾಗಿದ್ದು, ಅಂದಾಜು ರೂ.95 ಲಕ್ಷ ಹಾನಿಯಾಗಿರುತ್ತದೆ. ಮೂಲಭೂತ ಸೌಕರ್ಯಗಳಿಂದ ಒಟ್ಟು 3.98 ಕೋಟಿ ಹಾನಿಯಾಗಿರುತ್ತದೆ.

ಕಾವೇರಿ ನೀರನ್ನು ಕಾಲುವೆ ಮೂಲಕ ಬಿಡುಗಡೆ ಮಾಡುವ ಸಂದರ್ಭದಲ್ಲಿ ಎಲ್ಲಾ ಕೆರೆಗಳನ್ನು ತುಂಬಿಸಲು ಜಿಲ್ಲಾಡಳಿತಕ್ಕೆ ಸೂಚನೆಯನ್ನು ನೀಡಲಾಗಿದೆ. ಒಂದು ವೇಳೆ ದುರ್ಬಲ ಸ್ಥಳಗಳಿಂದ ಜನರನ್ನು ಸ್ಥಳಾಂತರಿಸುವ ಸಂದರ್ಭ ಬಂದಲ್ಲಿ ಅಗತ್ಯ ಔಷಧಿ, ಇತ್ಯಾದಿಗಳನ್ನು ಸಂಗ್ರಹಿಸಿಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಸೂಚನೆಗಳನ್ನು ನೀಡಲಾಗಿದೆ.

ಅವಗಾಹನೆಗಾಗಿ,

(ಜಾವೇದ್ ಅಖ್ತರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

1) ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
2) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು.


## 2019ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಮನೆಗಳಿಗೆ ಪರಿಹಾರ ಕಲ್ಪಿಸುವ ಕುರಿತು:-


ಪ್ರವಾಹದಿಂದ ಸಂತ್ರಸ್ಥರಾದವರಿಗೆ ವಸತಿ ಸೌಕರ್ಯವನ್ನು ತುರ್ತಾಗಿ ಕಲ್ಪಿಸಲು ಕಾರ್ಯಕ್ರಮವನ್ನು ರೂಪಿಸಿದ್ದು, ಇದರಡಿಯಲ್ಲಿ ಜಿಲ್ಲಾಧಿಕಾರಿಗಳು ಗುರ್ತಿಸಿ ಅಂತಿಮಗೊಳಿಸಿದ ನಿರ್ವಸತಿಗರ ವಿವರಗಳನ್ನು ಆನ್‌ಲೈನ್‌ನಲ್ಲಿ ನಮೂದಿಸಲು ರಾಜೀವಗಾಂಧಿ ವಸತಿ ನಿಗಮವು ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಿದ್ದು ಮೊಬೈಲ್ ಹ್ಯಾಪ್ ಉಪಯೋಗಿಸಿ ಜಿ.ಪಿ.ಎಸ್ ಮಾಡಿದ ಫಲಾನುಭವಿಗಳ ಖಾತೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಛಾಯಚಿತ್ರಗಳ ಈ ಕೆಳಗಿನಂತಿದೆ.











ಸದರಿ ಹ್ಯಾಪ್ ಅನ್ನು ಉಪಯೋಗಿಸುವ ಕುರಿತು ಕೈಪಿಡಿಯನ್ನು ನಿಗಮದ ವೆಬ್ ಸೈಟ್ ನಲ್ಲಿ ಲಗತ್ತಿಸಲಾಗಿದ್ದು ಹೆಚ್ಚಿನ ಮಾಹಿತಿಗಗಿ **ಸ್ಪಂದನಾ ಸಹಾಯವಾಣಿ ರಾಜೀವಗಾಂಧಿ ವಸತಿ ನಿಗಮ** ವನ್ನು ಸಂಪರ್ಕಿಸಲು ಪ್ರವಾಹ ಪೀಡಿತ ಜಿಲ್ಲೆಯ ಅಧಿಕಾರಿಗಳಿಗೆ ಸೂಚಿಸಿದೆ.

**ಮಾನವ ಜೀವಹಾನಿ:-**

ಭೂಕುಸಿತ ಹಾಗೂ ಪ್ರವಾಹದಿಂದ 11 ಮೃತ ಪಟ್ಟಿದ್ದು ಕುಟುಂಬದ ವಾರೀಸುದಾರರಿಗೆ ಪ್ರಕೃತಿ ವಿಕೋಪ ಮಾರ್ಗಸೂಚಿಯಂತೆ ತಲಾ ರೂ.4.00 ಲಕ್ಷ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ರೂ.1.00 ಲಕ್ಷದಂತೆ ಪ್ರಕರಣಕ್ಕೆ ರೂ.5.00 ಲಕ್ಷದಂತೆ ರೂ.55.00 ಲಕ್ಷಗಳ ಪರಿಹಾರ ಪಾವತಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಡಿ ರೂ.1.00 ಲಕ್ಷ ಹಣವನ್ನು ಹಿಂಬರ್ತಿ ಮಾಡಲು ಕಾಣೆಯಾದ 05 ಪ್ರಕರಣಗಳು ಸೇರಿದಂತೆ 16 ಪ್ರಕರಣಗಳಿಗೆ ಒಟ್ಟು ರೂ.16.00 ಲಕ್ಷಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

**ಕಾಣೆಯಾದವರ ಬಗ್ಗೆ ಮಾಹಿತಿ:-**

ವಿರಾಜಪೇಟೆ ತಾಲ್ಲೂಕಿನ ಹೆಗ್ಗಳ ಗ್ರಾಮದ ತೋರ ಪ್ರದೇಶದ ಒಟ್ಟು 05 ಜನ ಕಾಣೆಯಾಗಿದ್ದು, ಎನ್‌ಡಿಆರ್‌ಎಫ್, ಗರುಡ ಫೋರ್ಸ್ ಮತ್ತು ಪೊಲೀಸ್ ಇಲಾಖೆ ತಂಡಗಳಿಂದ ಶೋಧ ಕಾರ್ಯ ಮುಂದುವರೆಸಲಾಗುತ್ತಿದೆ.

**ಜಾನುವಾರು ಜೀವಹಾನಿ:-**

ಜಿಲ್ಲೆಯ ಒಟ್ಟು 60 ಜಾನುವಾರುಗಳು ಭೂಕುಸಿತ ಮತ್ತು ಪ್ರವಾಹದಿಂದ ಮೃತಪಟ್ಟಿರುತ್ತವೆ.

**ಪ್ರವಾಹ ಸ್ಥಳಗಳು:-**

ಜಿಲ್ಲೆಯಲ್ಲಿ ಅತಿವೃಷ್ಠಿಯಿಂದ ಕೆಲವು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಜಿಲ್ಲಾಡಳಿತದಿಂದ ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದೆ. ಕೆಲವು ಸ್ಥಳಗಳಲ್ಲಿ ಬರೆಗಳು ಜರಿದು ರಸ್ತೆ ಸಂಚಾರ ಅಸ್ತವ್ಯಸ್ತವಾಗಿದ್ದು, ತೆರವುಗೊಳಿಸಲು ಕ್ರಮ ವಹಿಸಲಾಗಿದೆ. ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ 11 ಹೋಬಳಿಯ 54 ಗ್ರಾಮ ಪಂಚಾಯತ್‌ಗಳಲ್ಲಿ 119 ಪ್ರದೇಶಗಳು ಭೂಕುಸಿತ/ಪ್ರವಾಹದಿಂದ ಬಾಧಿತವಾಗಿರುತ್ತವೆ.

ವಿರಾಜಪೇಟೆ ನಗರದ ಅಯ್ಯಪ್ಪಬೆಟ್ಟ (ಮಲೆತಿರಿಕೆ ಬೆಟ್ಟ) ಮತ್ತು ನೆಹರೂ ನಗರದಲ್ಲಿ ಬಿರುಕು ಕಂಡು ಬಂದಿದ್ದು, ತಕ್ಷಣ ಅಲ್ಲಿನ ನಿವಾಸಿಗಳನ್ನು ಹತ್ತಿರದ ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ. ಈ ಬಗ್ಗೆ ಭೂ ಸರ್ವೇಕ್ಷಣಾ ಇಲಾಖೆಯಿಂದ ಪರಿಶೀಲನೆ ನಡೆಸಲಾಗಿದ್ದು, ಅಂತಿಮ ವರದಿ ಸ್ವೀಕೃತವಾಗಿರುವುದಿಲ್ಲ. ಪ್ರಾಥಮಿಕ ವರದಿಯಂತೆ ಸದರಿ ಪ್ರದೇಶದಲ್ಲಿನ ನಿವಾಸಿಗಳನ್ನು ಮುನ್ನೆಚ್ಚರಿಕಾ ಕ್ರಮವಾಗಿ ಆಗಸ್ಟ್ ಮಾಹೆಯ ಅಂತ್ಯದವರೆಗೆ ಪರಿಹಾರ ಕೇಂದ್ರಗಳಲ್ಲೇ ಇರಲು ಸೂಚನೆ ನೀಡಲಾಗಿದೆ.

**ಸಂತ್ರಸ್ಥರ ರಕ್ಷಣೆ:-**

ಈವರೆಗೆ ಜಿಲ್ಲೆಯಲ್ಲಿ ಒಟ್ಟು 8211 ಜನ ಮತ್ತು 19 ಜಾನುವಾರುಗಳನ್ನು ರಕ್ಷಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 50 ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದ್ದು, 2596 ಕುಟುಂಬಗಳ 8211 ಜನರಿಗೆ ಆಶ್ರಯ ನೀಡಲಾಗಿತ್ತು. ಪರಿಹಾರ ಕೇಂದ್ರಗಳಲ್ಲಿ ಆಶ್ರಿತರಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು. ಪ್ರಸ್ತುತ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಇಳಿಮುಖವಾಗಿರುವುದರಿಂದ ಜನರು ಸ್ವ ಇಚ್ಛೆಯಿಂದ ಅವರ ಮನೆಗಳಿಗೆ ತೆರಳುತ್ತಿದ್ದು, ಮಳೆಯಿಂದ ಮನೆ ಸಂಪೂರ್ಣ ಹಾನಿಗೊಳಗಾದವರು ಮಾತ್ರ ನಿರಾಶ್ರಿತ ಕೇಂದ್ರದಲ್ಲಿರುತ್ತಾರೆ. ಪ್ರಸ್ತುತ ಜಿಲ್ಲೆಯಲ್ಲಿ ತೆರೆದಿರುವ ಪರಿಹಾರ ಕೇಂದ್ರಗಳ ಪೈಕಿ ವಿರಾಜಪೇಟೆ ತಾಲ್ಲೂಕಿನಲ್ಲಿ ಮಾತ್ರ 05 ಪರಿಹಾರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 78 ಕುಟುಂಬಗಳ 219 ಜನ ಆಶ್ರಯ ಪಡೆದಿರುತ್ತಾರೆ.

- ಜಿಲ್ಲೆಯಲ್ಲಿ ಅತೀವೃಷ್ಠಿಯಿಂದ ಉಂಟಾದ ಹಾನಿಯ ವಿವರಗಳು:-

ಮೂಲಭೂತ ಸೌಲಭ್ಯಗಳು (ರಸ್ತೆ, ಸರ್ಕಾರಿ ಕಟ್ಟಡಗಳು, ಕೆರೆ, ಮೋರಿ ಇತ್ಯಾದಿ):-

| ಕ್ರ.ಸಂ. | ಇಲಾಖೆ | ಕಾಮಗಾರಿಗಳು | ಅಂದಾಜು ನಷ್ಟ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಲೋಕೋಪಯೋಗಿ ಇಲಾಖೆ | 81 | 10023.45 |
| 2 | ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ವಿಭಾಗ | 786 | 9578.00 |
| | ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ವಿಭಾಗ (ಅಂಗನವಾಡಿ ಕಟ್ಟಡಗಳು) | 75 | 150.00 |
| | ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ವಿಭಾಗ (ಶಾಲಾ ಕಟ್ಟಡಗಳು) | 168 | 252.00 |
| | ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ವಿಭಾಗ (ಆಸ್ಪತ್ರೆಗಳು) | 14 | 21.00 |
| 3 | ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್ ವಿಭಾಗ (ನೀರು ಪೂರೈಕೆ ಮತ್ತು ನೈರ್ಮಲ್ಯ) | 131 | 300.00 |
| 4 | ಸಣ್ಣ ನೀರಾವರಿ | 27 | 675.00 |
| 5 | ಚೆಸ್ಕಾಂ | 1467 | 61.31 |
| 6 | ನಗರಾಭಿವೃದ್ಧಿ | 223 | 3305.50 |
| 7 | ಯೋಜನಾ ಉಪವಿಭಾಗ | 15 | 557.30 |
| 8 | ರಾಷ್ಟ್ರೀಯ ಹೆದ್ದಾರಿ | 32 | 5664.00 |
| 9 | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 1 | 4.20 |
| **ಒಟ್ಟು** | | **3020** | **30591.76** |

ಬೆಳೆಹಾನಿ:-

| ಕ್ರ.ಸಂ. | ಬೆಳೆಗಳ ವಿವರ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಅಂದಾಜು ನಷ್ಟ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಭತ್ತ | 3623 | 452.88 |
| 2 | ಜೋಳ | 40 | 6.00 |
| 3 | ಕಾಫಿ | 102034 | 5185.26 |
| 4 | ಅಡಿಕೆ | 1579 | 2368.00 |
| 5 | ಕರಿಮೆಣಸು | 6350 | 6665.00 |
| 6 | ಶುಂಠಿ | 904 | 5428.00 |
| 7 | ಬಾಳೆ | 2241 | 5658.00 |
| 8 | ಇತರೆ ತರಕಾರಿಗಳು | 380 | 362.00 |
| 9 | ಏಲಕ್ಕಿ | 1806 | 325.08 |
| 10 | ರೇಷ್ಮೆ | 0 | 0.00 |
| 11 | ಮೀನುಗಾರಿಕೆ | 18 | 202.00 |
| **ಒಟ್ಟು** | | 118975 | **26652.22** |

ಮನೆಹಾನಿ ಅಂದಾಜು ನಷ್ಟ (ಸರ್ವೆ ಪ್ರಗತಿಯಲ್ಲಿದೆ):-

| ಕ್ರ.ಸಂ. | ತಾಲ್ಲೂಕು | ಒಟ್ಟು ಮನೆಗಳು | ಅಂದಾಜು ನಷ್ಟ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಮಡಿಕೇರಿ | 451 | 210.51 |
| 2 | ಸೋಮವಾರಪೇಟೆ | 936 | 369.00 |
| 3 | ವಿರಾಜಪೇಟೆ | 897 | 552.05 |
| **ಒಟ್ಟು** | | **2284** | **1131.56** |

ಜಿಲ್ಲೆಯಲ್ಲಿ ಕೈಗೊಂಡ ತುರ್ತು ಸರ್ವೆಯಂತೆ ಜಿಲ್ಲೆಯಲ್ಲಿ ಅಂದಾಜು ಒಟ್ಟು 572.44 ಕೋಟಿ (ಮನೆಹಾನಿ ಹೊರತು ಪಡಿಸಿ) ನಷ್ಟ ಸಂಭವಿಸಿರುತ್ತದೆ. ಇದು ಬದಲಾವಣೆಗೆ ಒಳಪಟ್ಟಿರುತ್ತದೆ.


**ಸಂತ್ರಸ್ಥರಿಗೆ ಪರಿಹಾರ ಪಾವತಿ ವಿವರ:-**

ಜಿಲ್ಲೆಯಲ್ಲಿ ಒಟ್ಟಾಗಿ 2,408 ಜನರಿಗೆ ಪ್ರಕೃತಿ ವಿಕೋಪ ಮಾರ್ಗಸೂಚಿ ಹಾಗೂ ಸರ್ಕಾರದ ಆದೇಶದಂತೆ ತಲಾ ರೂ.10,000/- ದಂತೆ 240.80 ಲಕ್ಷಗಳನ್ನು ವಿತರಿಸಲಾಗಿದೆ.


**ಭೂಕುಸಿತ ಮತ್ತು ಪ್ರವಾಹದಿಂದ ಬಂದ್ ಆದ ರಸ್ತೆಗಳ ವಿವರ:-**


ಜಿಲ್ಲೆಯ ವಿವಿಧ ಭಾಗಗಳಲ್ಲಿ ಬರೆ ಜರಿದು ರಸ್ತೆ ಸಂಚಾರಕ್ಕೆ ಅಡಚಣೆ ಮತ್ತು ಮರ ಬಿದ್ದು ಅಡಚಣೆ ಉಂಟಾಗಿದ್ದು ತುರ್ತಾಗಿ ಕ್ರಮ ವಹಿಸಬಹುದಾದ ಕಡೆಗಳಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ತುರ್ತು ಕ್ರಮ ವಹಿಸಿ ರಸ್ತೆಗಳನ್ನು ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.


**"ಕೊಡಗು ಪುನರ್ವಸತಿ ಯೋಜನೆ"ಯಡಿ ನಿರ್ಮಾಣ ಮಾಡಿರುವ ಪ್ರದೇಶಗಳಿಗೆ ಮಾನ್ಯ ಸಚಿವರು ಭೇಟಿ ಮಾಡಿರುವ ಛಾಯಚಿತ್ರಗಳು:-**















99







ಪ್ರವಾಹ ಪೀಡಿತ ಪ್ರದೇಶಗಳಿಗೆ ಮಾನ್ಯ ಸಚಿವರು ಭೇಟಿ ಮಾಡಿರುವ ಛಾಯಚಿತ್ರಗಳು:-









# Earmark sites for rehabilitation, says Suresh Kumar



Minister S Suresh Kumar inspects the houses built for Kodagu floods victims at the rehabilitation site in Karnangeri in Madikeri taluk on Thursday. (Below) He also visited the place of landslide in Thora.



## Minister inspects post-flood condition of Kodagu

MADIKERI, DHNS

Minister S Suresh Kumar said the Kodagu district administration has been asked to identify sites for rehabilitation of flood victims.

Kumar inspected the houses built for the victims at Karnangeri and Jambaru colonies on Thursday.

"If necessary, sites will be purchased from private land holders. People can also donate land for victims through the district administration," he said and added, "Work on 35 houses at Karnangeri is complete. Infosys Foundation has built 200 houses at Jamburu and the quality of the houses is good."

Chief Minister B S Yediyurappa will inaugurate the houses – the date of inaugura-

### Visit to Thora

Kumar visited Thora near Virajpet and took stock of operation to trace missing persons. He also spoke to the family members of those who had lost their lives in the landslide.

The minister inspected the Makutta road, which was damaged due to landslides. He said that officials were directed to complete the repair works soon. "Rehabilitation of people at Ayyappa Betta and Nehrunagara Betta will be discussed soon, as these areas were found vulnerable," he said.

The minister also visited Harangi reservoir and obtained information on the water impounded in the dam, inflow and other related details.

Irrigation Department Assistant Executive Engineer Rajegowda said that a proposal for Rs 130 crore was submitted reservoir. The minister promised to discuss the issue at the next Cabinet meeting.

District In-charge Secretary Anbu Kumar, DC Annies Kanmani Joy and Zilla Panchayat CEO K Lakshmi

### MLAs maintain distance

MLAs Appacchu Ranjan and K G Bopaiah were conspicuous by their absence during Minister Suresh Kumar's visit, expressing their disappointment on not being offered portfolios. MLC Sunil Subramani, brother of Appacchu Ranjan, too, did not meet the minister.

BJP district president B B Bharatish reportedly requested the minister to convince the government on accommodating the MLAs from the district. Suresh Kumar is believed to have promised Bharatish on conveying the message to BJP leaders.

# ಕರ್ಣಂಗೇರಿ, ಜಂಬೂರಿನಲ್ಲಿ ನಿರ್ಮಾಣ ಹಂತದ ಕಟ್ಟಡ ವೀಕ್ಷಿಸಿದ ಸಚಿವ ಭರವಸೆ


■ ವಿಕ ಸುದ್ದಿಲೋಕ ಮಡಿಕೇರಿ

ಕಳೆದ ವರ್ಷ ಪ್ರಕೃತಿ ವಿಕೋಪದಿಂದ ಮನೆ ಕಳೆದುಕೊಂಡ ಸಂತ್ರಸ್ತರಿಗೆ ಕರ್ಣಂಗೇರಿ ಹಾಗೂ ಜಂಬೂರಿನಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಮನೆಗಳನ್ನು ಸಚಿವ ಎಸ್. ಸುರೇಶ್ ಕುಮಾರ್ ಗುರುವಾರ ವೀಕ್ಷಿಸಿದರು.

ಈ ಸಂದರ್ಭದಲ್ಲಿ ಮಕ್ಕಂದೂರು ವ್ಯಾಪ್ತಿಯಲ್ಲಿ ಭೂಕುಸಿತದಿಂದ ಹಾನಿಯಾಗಿರುವ ಪ್ರದೇಶಗಳನ್ನು ವೀಕ್ಷಣೆ ಮಾಡಿದರು. ಬಳಿಕ ಮಾತನಾಡಿದ ಸಚಿವರು, ಕಳೆದ ಬಾರಿ ಪ್ರಕೃತಿ ವಿಕೋಪದಿಂದ ಮನೆ ಕಳೆದುಕೊಂಡ ಸಂತ್ರಸ್ತರಿಗೆ ಕರ್ಣಂಗೇರಿಯಲ್ಲಿ 35, ಜಂಬೂರಿನಲ್ಲಿ 350 ಕ್ಕೂ ಹೆಚ್ಚು ಮನೆಗಳನ್ನು ನಿರ್ಮಾಣ ಮಾಡುತ್ತಿದ್ದು, ಇನ್ನು ಕರ್ಣಂಗೇರಿಯಲ್ಲಿ ಮನೆಯ ಕಾಮಗಾರಿ ಪೂರ್ಣಗೊಂಡಿದ್ದು, ಮಾನ್ಯ ಮುಖ್ಯಮಂತ್ರಿ ಅವರ ಮೂಲಕ ಒಂದು ತಿಂಗಳಲ್ಲಿ ಮನೆಗಳನ್ನು ಹಸ್ತಾಂತರಿಸಲಾಗುವುದು ಎಂದು ಸಚಿವರು ತಿಳಿಸಿದರು.

ಜಂಬೂರಿನಲ್ಲಿ ರಾಜ್ಯ ಸರ್ಕಾರ ನಿರ್ಮಿಸುತ್ತಿರುವ 350 ಮನೆಗಳು ಹಾಗೂ ಇನ್ಫೋಸಿಸ್ ಸಂಸ್ಥೆಯಿಂದ 200 ಮನೆಗಳನ್ನು ನಿರ್ಮಿಸಲಾಗುತ್ತಿದ್ದು, ಈ ಮನೆಗಳ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು. ಈಗಾಗಲೇ 50 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿದೆ ಹಾಗೆಯೇ 220 ಮನೆಗಳು ಬೇರೆ ಹಂತದಲ್ಲಿದೆ. ವಿದ್ಯುತ್ ಸಂಪರ್ಕ, ಕುಡಿಯುವ ನೀರು ಮತ್ತಿತರ ಮೂಲಸೌಲಭ್ಯ ಕಲ್ಪಿಸಿ ಶೀಘ್ರ ಮನೆಗಳನ್ನು ಹಸ್ತಾಂತರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಈ ನಿಟ್ಟಿನಲ್ಲಿ ಕಾಮಗಾರಿಯನ್ನು ಚುರುಕುಗೊಳಿಸಲಾಗುವುದು ಎಂದು ಸುರೇಶ್ ಕುಮಾರ್ ಹೇಳಿದರು. ಮನೆಗಳ ಕಾಮಗಾರಿಯು ಗುಣಮಟ್ಟದಿಂದ ಕೂಡಿದೆ ಎಂದು ಇದೇ ಸಂದರ್ಭದಲ್ಲಿ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ವರದಿಗೆ ಸೂಚನೆ: ಪ್ರಸಕ್ತ ವರ್ಷದಲ್ಲಿ ತೋರ ಮತ್ತು ಕಾವೇರಿ ನದಿ ಪಾತ್ರದ ಕರಡಿಗೋಡು, ಕುಂಬಾರಗುಂಡಿ [illegible]



ಕಳೆದ ವರ್ಷ ಪ್ರಕೃತಿ ವಿಕೋಪದಿಂದ ಮನೆ ಕಳೆದುಕೊಂಡ [illegible] ಮಾಡಲಾಗುತ್ತಿರುವ ಮನೆಗಳನ್ನು [illegible]

[illegible]

ಈ ಸಂದರ್ಭದಲ್ಲಿ [illegible]

*—*—*—*—*—*—*

# ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ:ಪ್ರಕಾ:08:2019

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ:03-09-2019

## ಟಿಪ್ಪಣಿ

**ವಿಷಯ:** ಆಗಸ್ಟ್ 2019 ಮಾಹೆಯ ಬೆಂಗಳೂರು (ನಗರ) ಜಿಲ್ಲಾ ಪ್ರವಾಸ ವರದಿ.

----------

ದಿನಾಂಕ 27-08-2019ರಂದು ಬೆಂಗಳೂರು (ನಗರ) ಜಿಲ್ಲೆಗೆ ಉಸ್ತುವಾರಿ ಕಾರ್ಯದರ್ಶಿಯಾಗಿ ಭೇಟಿ ನೀಡಿ ಜಿಲ್ಲೆಯ ಹಿರಿಯ ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಪರಿಶೀಲನಾ ಸಭೆ ನಡೆಸಿದ್ದು, ಸಭೆಯ ನಡುವಳಿಯನ್ನು ತಮ್ಮ ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು
(ನಗರ) ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

5-9-2019
693348

**ಇವರಿಗೆ:**

1. ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ.

**ಪ್ರತಿಯನ್ನು ಮಾಹಿತಿಗಾಗಿ :**

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಆಪ್ತ ಕಾರ್ಯದರ್ಶಿ, ವಿಧಾನಸೌಧ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಎ.ಆರ್) ಇಲಾಖೆ ಎಂ.ಎಸ್.ಬಿಲ್ಡಿಂಡ್.

06/09/19

11. **ಇತರೆ ವಿಚಾರಗಳು :** ಅತ್ತಿಬೆಲೆ ಪುರಸಭೆಯ ಜಾಗವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ರವರು ಬಸ್ ನಿಲ್ದಾಣಕ್ಕಾಗಿ ಉಚಿತವಾಗಿ ಕೋರಿರುವ ವಿಚಾರವನ್ನು ಮುಖ್ಯಾಧಿಕಾರಿ ರವರು ಸಭೆಯ ಗಮನಕ್ಕೆ ತಂದರು. ಪುರಸಭಾ ಜಾಗವನ್ನು ಉಚಿತವಾಗಿ ಮಂಜೂರು ಮಾಡಲು ಅವಕಾಶವಿರುವುದಿಲ್ಲ, ಈ ಸಂಬಂಧ ಬಿ.ಎಂ.ಟಿ.ಸಿ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಚರ್ಚಿಸಲಾಗಿ ಆದಾಯದ ಪಾಲು ವಿಂಗಡಣ (Sharing Basis) ಆಧಾರದ ಮೇರೆಗೆ ಬಸ್ ನಿಲ್ದಾಣಕ್ಕೆ ಜಾಗವನ್ನು ಹಸ್ತಾಂತರಿಸುವ ಬಗ್ಗೆ ಬಿ.ಎಂ.ಟಿ.ಸಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಯೋಜನಾ ನಿರ್ದೇಶಕರು, ಜಿನಕೋ, ಬೆಂಗಳೂರು ನಗರ ಜಿಲ್ಲೆ ರವರು ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.

ಕ್ರಮ:- ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ನಗರ ಜಿಲ್ಲೆ

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ಬೆಂಗಳೂರು ನಗರ ಜಿಲ್ಲೆ.

8. **ಜಲಶಕ್ತಿ ಅಭಿಯಾನ** : ನೀರಿನ ಸಂರಕ್ಷಣೆ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಶಾಲೆ, ಸಂಘ ಸಂಸ್ಥೆಗಳು ಮತ್ತು ಎಲ್ಲಾ ಇಲಾಖೆಗಳ ಸಹಾಕರದೊಂದಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಯಿತು. ಹಾಗೂ ಆನೇಕಲ್ ತಾಲ್ಲೂಕಿನಲ್ಲಿರುವ ಎಲ್ಲಾ ಸರ್ಕಾರಿ ಕಟ್ಟಡಗಳಿಗೆ ಮಳೆನೀರು ಕೊಯ್ಲು ಅಳವಡಿಸಲು ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕ್ರಮ:- ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಆನೇಕಲ್ ತಾಲ್ಲೂಕು, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ನಗರ ಜಿಲ್ಲೆ ಮತ್ತು ತಹಶೀಲ್ದಾರ್ ಆನೇಕಲ್ ತಾಲ್ಲೂಕು.

9. **ಆರೋಗ್ಯ ಇಲಾಖೆ:** ಆನೇಕಲ್ ತಾಲ್ಲೂಕಿನಲ್ಲಿ 4 ನಾಲ್ಕು ಡೆಂಗ್ಯೂ ಪ್ರಕರಣಗಳು ದೃಢಪಟಿದ್ದು ಯಾವುದೇ ಪ್ರಾಣ ಹಾನಿ ಸಂಬವಿಸಿರುವುದಿಲ್ಲ ಎಂದು ಸಭೆಯಲ್ಲಿ ಹಾಜರಿದ್ದ ಆರೋಗ್ಯ ಅಧಿಕಾರಿಗಳು ಸಭೆಗೆ ತಿಳಿಸಿದರು. ಡೆಂಗ್ಯೂ ಜ್ವರದ ಬಗ್ಗೆ ಜಾಗೃತಿ ಮೂಡಿಸಲು ಶಾಲಾ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಅಂಧೋಲನ ಮಾಡಲು ತಾಲ್ಲೂಕು ಆರೋಗ್ಯ ಅಧಿಕಾರಿಗಳಿಗೆ ಸೂಚಿಸಲಾಯಿತು. ಅತ್ತಿಬೆಲೆ ಸರ್ಕಾರಿ ಆಸ್ಪತ್ರೆಯಲ್ಲಿ ಕೇವಲ ಒಬ್ಬರೆ ವೈದ್ಯರಿದ್ದು, ರಾಷ್ಟ್ರೀಯ ಹೆದ್ದಾರಿ ಆಗಿರುವುದರಿಂದ ಸಾಕಷ್ಟು ಅಪಘಾತ ಪ್ರಕರಣಗಳು ದಾಖಲಾಗುತ್ತಿದ್ದು, ವೈದ್ಯರನ್ನು ನೇಮಿಸಿಕೊಡುವಂತೆ ತಾಲ್ಲೂಕು ವೈದ್ಯಾಧಿಕಾರಿಗಳು ಸಭೆಯಲ್ಲಿ ಕೋರಿದರು. ಆರೋಗ್ಯ ಇಲಾಖೆಯ ನಿರ್ದೇಶಕರೊಂದಿಗೆ ದೂರವಾಣಿ ಮುಖಾಂತರ ಮಾತನಾಡಲಾಗಿ, ಸದ್ಯದಲ್ಲೇ ಅತ್ತಿಬೆಲೆ ಸರ್ಕಾರಿ ಆಸ್ಪತ್ರೆಗೆ ವೈದ್ಯರನ್ನು ನೇಮಕ ಮಾಡುವುದಾಗಿ ತಿಳಿಸಿದರು. ರೋಟೋ ವೈರಸ್ ಬಗ್ಗೆ ಜಾಗೃತಿ ಮೂಡಿಸಲು ಬಿತ್ತಿ ಪತ್ರ, ಸರ್ವೆ ಕಾರ್ಯಗಳನ್ನು ಕೈಗೊಂಡಿರುವ ಬಗ್ಗೆ ಆರೋಗ್ಯ ಅಧಿಕಾರಿಗಳು ತಿಳಿಸಿದರು.

ಕ್ರಮ:- ಜಿಲ್ಲಾ ಮತ್ತು ತಾಲ್ಲೂಕು ಆರೋಗ್ಯಾಧಿಕಾರಿಗಳು ಅಗತ್ಯ ಕ್ರಮವಹಿಸುವುದು.

10. **ತೋಟಗಾರಿಕೆ** : ಆನೇಕಲ್ ತಾಲ್ಲೂಕಿನಲ್ಲಿ 30 ಎಕರೆ ಹಸಿರು ಮನೆ ಗುರಿ ಇದ್ದು, 10 ಎಕರೆ ಪ್ರದೇಶದಲ್ಲಿ ಹಸಿರು ಮನೆಯನ್ನು ನಿರ್ಮಿಸಲಾಗಿರುತ್ತದೆ. ಆನೇಕಲ್ ತಾಲ್ಲೂಕಿನಲ್ಲಿ ಹನಿ ನೀರಾವರಿ ಪದ್ದತಿಯ ಸಹಾಯದಿಂದ ಹೂ ಮತ್ತು ತರಕಾರಿಯನ್ನು ಬೆಳೆಯಲಾಗುತ್ತಿದ್ದು, ಬೆಂಗಳೂರು ನಗರ ಮತ್ತು ಹೊಸೂರು ಹತ್ತಿರವಾಗಿರುವುದರಿಂದ ಉತ್ತಮ ಮಾರುಕಟ್ಟೆ ಸೌಲಭ್ಯವಿರುವುದರಿಂದ ರೈತರಿಗೆ ಆರ್ಥಿಕವಾಗಿ ಲಾಭದಾಯಕ ಕೃಷಿಯಾಗಿರುತ್ತದೆ. ಹಾಗೂ 6(ಆರು) ಸಮುದಾಯ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಲಾಗಿರುವುದಾಗಿ ಸಹಾಯಕ ತೋಟಗಾರಿಕಾ ನಿರ್ದೇಶಕರು ಸಭೆಯಲ್ಲಿ ತಿಳಿಸಿದರು.

ಕ್ರಮ:- ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರು ಅಗತ್ಯ ಕ್ರಮ ವಹಿಸುವುದು.

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನಾಗಿ ಪರಿವರ್ತಿಸಲು ಸರ್ಕಾರದ ಅನುಮತಿಗಾಗಿ ಸಲ್ಲಿಸಲು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

<u>ಕ್ರಮ:-</u> ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

6. **ಹಿಂದುಳಿದ ವರ್ಗಗಳ ವಸತಿ ನಿಲಯ:** ಆನೇಕಲ್ ತಾಲ್ಲೂಕಿನಲ್ಲಿ 7(ಏಳು) ವಸತಿ ನಿಲಯಗಳಿದ್ದು 4(ನಾಲ್ಕು) ಮೆಟ್ರಿಕ್ ಪೂರ್ವ ಮತ್ತು 3(ಮೂರು) ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಾಗಿರುತ್ತವೆ. ಮೆಟ್ರಿಕ್ ನಂತರದ ಬಾಲಕ ವಿದ್ಯಾರ್ಥಿ ನಿಲಯಗಳಲ್ಲಿ ಮಂಜೂರಾತಿ ಸಂಖ್ಯೆ 100 ಇದ್ದು, ತಾಂತ್ರಿಕ ವಿದ್ಯಾರ್ಥಿಗಳಿಗೆ ಬೇಡಿಕೆ ಇರುವುದಾಗಿ ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದಾಗಿ ಬಿ.ಸಿ.ಎಂ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನಾಗಿ ಪರಿವರ್ತಿಸಲು ಸರ್ಕಾರದ ಅನುಮತಿಗೆ ಸಲ್ಲಿಸಲು ನಿರ್ದೇಶನ ನೀಡಲಾಯಿತು.

<u>ಕ್ರಮ:-</u> ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು

7. **ಘನತ್ಯಾಜ್ಯ ನಿರ್ವಹಣೆ:** ಆನೇಕಲ್ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳ ಘನತ್ಯಾಜ್ಯ ವಿಲೇವಾರಿಗೆ ನೆಲಭರ್ತಿ ಜಾಗ ಇರುವುದಿಲ್ಲ, ಇದರಿಂದ 6 ನಗರ ಸ್ಥಳೀಯ ಸಂಸ್ಥೆಗಳ ಘನತ್ಯಾಜ್ಯ ವಿಲೇವಾರಿಗೆ ತೊಂದರೆಯಾಗಿರುವುದಾಗಿ ಸಭೆಯಲ್ಲಿ ಹಾಜರಿದ ಯೋಜನಾ ನಿರ್ದೇಶಕರು, ಜಿಲ್ಲಾ ನಾಗರಾಭಿವೃದ್ಧಿ ಕೋಶ, ಬೆಂಗಳೂರು ರವರು ಸಭೆಗೆ ಮಾಹಿತಿ ನೀಡಿದರು.

ಘನತ್ಯಾಜ್ಯ ವಿಲೇವಾರಿಗಾಗಿ ಸರ್ಕಾರಿ ಜಾಗ ಗುರುತಿಸಿಕೊಡಲು ಸಭೆಯಲ್ಲಿ ಹಾಜರಿದ್ದು ಉಪವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ಆನೇಕಲ್ ರವರಿಗೆ ಸೂಚಿಸಲಾಯಿತು. ಸರ್ಕಾರಿ ಜಾಗ ಲಭ್ಯವಿಲ್ಲದಿದ್ದಲ್ಲಿ, ಖಾಸಗಿ ಜಮೀನನ್ನು ಗುರುತಿಸಿ ಖರೀದಿಗಾಗಿ ಪ್ರಾಸ್ತವನೆಯನ್ನು ಸಲ್ಲಿಸಲು ಸೂಚಿಸಲಾಯಿತು. ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ ಸೂಕ್ತ ರೀತಿಯಲ್ಲಿ ಕಸ ಸಂಗ್ರಹೆ ಮತ್ತು ವಿಲೇವಾರಿಗೆ ಸೂಕ್ತ ಕ್ರಿಯಾಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸಲು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ರವರಿಗೆ ಸೂಚಿಸಲಾಯಿತು. ಘನತ್ಯಾಜ್ಯ ವಿಲೇವಾರಿಗೆ ಅತ್ತಿಬೆಲೆ, ಹೆಬ್ಬಗೋಡಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರಕಾರ್ಮಿಕರ ಕೊರತೆ ಇದ್ದು ಈ ಬಗ್ಗೆ ಸರ್ಕಾರದ ಮಾರ್ಗಸೂಚಿಯಂತೆ ನೇರ ಪಾವತಿಯಡಿ ನೇಮಕಾತಿ ಮಾಡಿಕೊಂಡು ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿ ಮಾಡಲು ಸೂಚಿಸಲಾಯಿತು.

<u>ಕ್ರಮ:-</u> ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ತಹಶೀಲ್ದಾರ್ ಆನೇಕಲ್ ತಾಲ್ಲೂಕು ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ನಗರ ಜಿಲ್ಲೆ.

ಮುಂದುವರೆದಿರುವುದಾಗಿ ಸಭೆಗೆ ತಿಳಿಸಿದರು. ತಾಲ್ಲೂಕಿನಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಸಮಸ್ಯೆ ಇಲ್ಲವೆಂದು ತಿಳಿಸಿದರು.

3. **ಪ್ರಧಾನ ಮಂತ್ರಿ ಕಿಸಾನ್ ಸಮ್ಮನ್ ಯೋಜನೆ:** ಪ್ರಧಾನ ಮಂತ್ರಿ ಕಿಸಾನ್ ಸಮ್ಮನ್ ಯೋಜನೆಯಡಿ ಇದುವರೆಗೆ 13367 ಅರ್ಜಿ/ಘೋಷಣೆಗಳನ್ನು ಸ್ವೀಕರಿಸಲಾಗಿದೆ ಎಂದು ಕೃಷಿ ಅಧಿಕಾರಿಗಳ ಸಭೆಯಲ್ಲಿ ತಿಳಿಸಿದರು. ಬೆಂಗಳೂರು ನಗರ ಜಿಲ್ಲೆಯಲ್ಲಿ ಕಿಸಾನ್ ಸಮ್ಮನ್ ಯೋಜನೆ ಅಡಿ 800 ಅರ್ಜಿಗಳ ಪರಿಶೀಲನೆ ಬಾಕಿ ಇದ್ದು ಆನೇಕಲ್ ತಾಲ್ಲೂಕಿನಲ್ಲಿ 150 ಅರ್ಜಿಗಳು ಬಾಕಿ ಇದ್ದು ಪರಿಶೀಲನೆ ಆಗದಿರುವ ಬಗ್ಗೆ ಆನೇಕಲ್ ತಾಲ್ಲೂಕಿನ ತಹಶಿಲ್ದಾರ್‌ರವರನ್ನು ಪ್ರಶ್ನಿಸಲಾಗಿ ತಹಶಿಲ್ದಾರ್ ರವರು ಕಿಸಾನ್ ಸಮ್ಮನ್ ಯೋಜನೆಯ ಲಾಗಿನ್ (ನಿಷ್ಕ್ರಿಯವಾಗಿದ್ದು) ಡಿ ಆಕ್ಟಿವೆಟ್ ಆಗಿರುವುದಾಗಿ ಸಭೆಗೆ ತಿಳಿಸಿದರು.

ಉಪವಿಭಾಗಧಿಕಾರಿ ಬೆಂಗಳೂರು ದಕ್ಷಿಣ ಇವರಿಗೆ ಈ ಸಮಸ್ಯೆ ಬಗ್ಗೆ ಪರಿಶೀಲಿಸಿ ಬಾಕಿ ಇರುವ ಅರ್ಜಿಗಳನ್ನು ಇತ್ಯಾರ್ಥಗೊಳಿಸಲು ಸೂಚಿಸಲಾಯಿತು.

<u>ಕ್ರಮ :-</u> ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ಮತ್ತು ಜಂಟಿ ನಿರ್ದೇಶಕರು, ಕೃಷಿ ಇಲಾಖೆ.

4. **ಅಂಗನವಾಡಿ ಕಟ್ಟಡಗಳು :** ಆನೇಕಲ್ ತಾಲ್ಲೂಕಿನಲ್ಲಿ ಒಟ್ಟು 432 ಅಂಗನವಾಡಿ ಕೇಂದ್ರಗಳಿದ್ದು ಕೇವಲ 52 ಸ್ವಂತ ಕಟ್ಟಡಗಳನ್ನು ಹೊಂದಿದ್ದು ಉಳಿದ ಅಂಗನವಾಡಿ ಕೇಂದ್ರಗಳು ಶಾಲೆ, ಬಾಡಿಗೆ ಕಟ್ಟಡ, ಪುರಸಭಾ ಕಟ್ಟಡಗಳಲ್ಲಿ ನಡೆಸುತ್ತಿರುವುದಾಗಿ ಸಭೆಗೆ ಸಿ.ಡಿ.ಪಿ.ಓ ರವರು ತಿಳಿಸಿದರು. ಗ್ರಾಮೀಣ ಪ್ರದೇಶದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಜಾಗ ನೀಡಲು ಸಭೆಯಲ್ಲಿ ಹಾಜರಿದ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ ರವರಿಗೆ ಸೂಚಿಸಲಾಯಿತು. ಹಾಗೂ ಎಂ.ಜಿ.ಎನ್.ಆರ್.ಇ.ಜಿ.ಎ ಕಾರ್ಯಕ್ರಮದಡಿ ಹೊಂದಿಕೆ ಹಣ ನೀಡಲು ಸೂಚಿಸಲಾಯಿತು. ಪಟ್ಟಣದ ವ್ಯಾಪ್ತಿಯಲ್ಲಿ ಅಂಗನವಾಡಿ ಕಟ್ಟಡಗಳಿಗೆ ಸ್ಥಳ ನೀಡಲು ಮತ್ತು ಕಟ್ಟಡ ನಿರ್ಮಾಣದ ವೆಚ್ಚವನ್ನು ವಿವಿಧ ಯೋಜನೆಯಡಿ ಸರ್ಕಾರದ ಆದೇಶದಂತೆ ಭರಿಸಲು ಯೋಜನಾ ನಿರ್ದೇಶಕರು, ಜಿಲ್ಲಾ ನಾಗರಾಭಿವೃದ್ಧಿ ಕೋಶ, ಬೆಂಗಳೂರು ರವರಿಗೆ ಸೂಚಿಸಲಾಯಿತು.

<u>ಕ್ರಮ:-</u> ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಆನೇಕಲ್ ತಾಲ್ಲೂಕು ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ನಗರ ಜಿಲ್ಲೆ.

5. **ಸಮಾಜ ಕಲ್ಯಾಣ ಇಲಾಖೆ:** ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ 8 (ಎಂಟು) ಸಮಾಜ ಕಲ್ಯಾಣ ವಿದ್ಯಾರ್ಥಿ ನಿಲಯಗಳು, 2(ಎರಡು) ಕಿತ್ತೂರು ರಾಣಿ ಚೆನ್ನಮ್ಮ ವಿದ್ಯಾರ್ಥಿ ನಿಲಯಗಳು ಮತ್ತು 3(ಮೂರು) ಮುರಾರ್ಜಿ ದೇಸಾಯಿ ವಸತಿ ನಿಲಯಗಳಿರುವುದಾಗಿ ಸಭೆಯಲ್ಲಿ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರು ತಿಳಿಸಿದರು ಹಾಗೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದಾಗಿ ಸಭೆಗೆ ತಿಳಿಸಿದರು.

ಆನೇಕಲ್ ತಾಲ್ಲೂಕು ಪ್ರಗತಿ ಪರಿಶೀಲನಾ ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಿಕೊಡಲು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ. ರವರನ್ನು ಕೋರಲಾಯಿತು.

**ಸಭೆಯಲ್ಲಿ ಚರ್ಚಿತವಾದ ವಿಷಯಗಳು :**

1. **ಕುಡಿಯುವ ನೀರು :** ಆನೇಕಲ್ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಕೊಳವೆ ಬಾವಿಗಳ ನೀರಿನ ಮೂಲಗಳಾಗಿದ್ದು, ಕೊಳವೆ ಬಾವಿಗಳಲ್ಲಿ ನೀರಿನ ಮಟ್ಟ ಕಡಿಮೆ ಇದ್ದು, ಕಾವೇರಿ ನೀರಿನ ಸಂಪರ್ಕಕ್ಕೆ ಕ್ರಿಯಾ ಯೋಜನೆಯನ್ನು ರೂಪಿಸುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಆನೇಕಲ್ ರವರು ತಿಳಿಸಿದರು.

   ಕುಡಿಯುವ ನೀರು ಅತೀ ಪ್ರಮುಖವಾದ ವಿಚಾರವಾಗಿದ್ದು ಈ ಬಗ್ಗೆ ವಿಳಂಬ ಮಾಡದೆ ತುರ್ತಾಗಿ ಕ್ರಿಯಾ ಯೋಜನೆಯನ್ನು ರೂಪಿಸಿ ಸರ್ಕಾರದ ಅನುಮತಿಯನ್ನು ಪಡೆದು ಕಾರ್ಯಗತಗೊಳಿಸಲು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಬೆಂಗಳೂರು ನಗರ ಜಿಲ್ಲೆ ರವರಿಗೆ ಸೂಚಿಸಲಾಯಿತು. ಆನೇಕಲ್ ತಾಲ್ಲೂಕಿನ ಪಟ್ಟಣಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಕೈಗೊಳ್ಳಲು ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ದಿ ಕೋಶ, ಬೆಂಗಳೂರು ನಗರ ಜಿಲ್ಲೆ ರವರಿಗೆ ಸೂಚಿಸಲಾಯಿತು.

   <u>ಕ್ರಮ:–</u> ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಬೆಂಗಳೂರು ನಗರ ಜಿಲ್ಲೆ ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ದಿ ಕೋಶ, ಬೆಂಗಳೂರು ನಗರ ಜಿಲ್ಲೆ.

2. **ಕೃಷಿಭಾಗ್ಯ ಯೋಜನೆ:** ತಾಲ್ಲೂಕು ಕೃಷಿ ಅಧಿಕಾರಿಗಳು ಕೃಷಿ ಭಾಗ್ಯ ಯೋಜನೆಯಡಿ ಆನೇಕಲ್ ತಾಲ್ಲೂಕಿಗೆ 180 ಕೃಷಿ ಹೊಂಡಗಳ ಗುರಿಯನ್ನು ನೀಡಲಾಗಿದ್ದು, ಅದರಲ್ಲಿ 101 ಪ್ರಗತಿ ಸಾಧಿಸಲಾಗಿದು, ತೆಗೆಸಿರುವ ಕೃಷಿ ಹೊಂಡಗಳಿಗೆ ಪಾಲಿಥಿನ್ ಹೊದಿಕೆ, ಡೀಸೆಲ್ ಪಂಪ್‌ಸೆಟ್ ಹಾಗೂ ಸೂಕ್ಷ್ಮ ನೀರಾವರಿ ಘಟಕಗಳನ್ನು ರೈತರ ಬೇಡಿಕೆ ಆಧಾರದ ಮೇಲೆ ವಿತರಿಸಲಾಗಿದೆ. ಹಾಲಿ ಬೆಳೆ ಇರುವುದರಿಂದ ಸ್ಥಳ ಪರಿಶೀಲನೆ ಮಾಡಲು ಹೆಚ್ಚಿನ ಸಮಯ ಬೇಕಾಗಿದ್ದು ಈ ವರ್ಷದ ಅಂತ್ಯಕ್ಕೆ ಗುರಿಯನ್ನು ಪೂರ್ಣಗೊಳಿಸುವುದಾಗಿ ಸಭೆಗೆ ತಿಳಿಸಿದರು.

   **i) ಬೆಳೆ ವಿಮೆ :** ಬೆಳೆ ವಿಮೆ ಬಗ್ಗೆ ವಿಚಾರಿಸಲಾಗಿ ಆನೇಕಲ್ ತಾಲ್ಲೂಕಿನಲ್ಲಿ ಒಟ್ಟು 642 ರೈತರುಗಳಿಗೆ ಪಸಲ್ ಭೀಮ ಯೋಜನೆಯಡಿ ನೊಂದಣಿ ಮಾಡಿಸಲಾಗಿರುತ್ತದೆ. ಜುಲೈ ಮಾಹೆಯ ಅಂತ್ಯಕ್ಕೆ ವಾಡಿಕೆ ಮಳೆಯು 331 ಮೀಮೀ ಆಗಿದ್ದು, 195 ಮೀಮೀ ಮಾತ್ರ ಮಳೆಯಾಗಿರುತ್ತದೆ. ಶೇ 41% ಮಳೆಯ ಕೊರತೆಯಾಗಿದ್ದು, ಬಿತ್ತನೆ ಕಾರ್ಯ ಚಟುವಟಿಕೆ ಕುಂಠಿತವಾಗಿರುತ್ತದೆ ಹಾಗೂ ಆನೇಕಲ್ ತಾಲ್ಲೂಕಿನಲ್ಲಿ ಹೆಚ್ಚಾಗಿ ಶೇ 80% ರಾಗಿ ಶೇ 13% ದ್ವಿದಳ ದಾನ್ಯಗಳನ್ನು ಬೆಳೆಯಲಾಗುತ್ತಿದ್ದು, ಬಿತ್ತನೆ ಕಾರ್ಯ

**ಬೆಂಗಳೂರು ನಗರ ಆನೇಕಲ್ ತಾಲ್ಲೂಕಿನ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆ ದಿನಾಂಕ:27/08/2019 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ನಗರಾಭಿವೃಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡಾವಳಿ.**

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :

1. ಶ್ರೀ ಅಂಜುಮ್ ಪರ್ವೇಜ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
2. ಶ್ರೀ ಕೆ.ಶಿವರಾಮೇಗೌಡ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಬೆಂಗಳೂರು ನಗರ ಜಿಲ್ಲೆ.
3. ಶ್ರೀ ಜಿ.ಎಂ ಶಿವಣ್ಣ, ಉಪವಿಭಾಗಾಧಿಕಾರಿ, ಬೆಂಗಳೂರು ದಕ್ಷಿಣ ಉಪ–ವಿಭಾಗ.
4. ಶ್ರೀಮತಿ ಡಾ॥ ಎನ್.ಶ್ರೀಮಾಧವಿ, ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ದಿ ಕೋಶ, ಬೆಂಗಳೂರು ನಗರ ಜಿಲ್ಲೆ.
5. ಶ್ರೀ ಲಕ್ಮ್ಮಣರೆಡ್ಡಿ, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಆನೇಕಲ್.
6. ಶ್ರೀ ನರಸು ಕಳಂತ್ರೆ, ಕಾರ್ಯಪಾಲಕ ಅಭಿಯಂತರರು, ಜಿಲ್ಲಾನಗರಾಭಿವೃದ್ದಿ ಕೋಶ, ಬೆಂಗಳೂರು ನಗರ ಜಿಲ್ಲೆ.
7. ಶ್ರೀ ಮಹದೇವಯ್ಯ, ತಹಶೀಲ್ದಾರ್, ಆನೇಕಲ್ ತಾಲ್ಲೂಕು.
8. ಶ್ರೀ ದೇವರಾಜೇಗೌಡ, ಕಾರ್ಯನಿರ್ವಾಹಕ ಅಧಿಕಾರಿ, ಆನೇಕಲ್ ತಾಲ್ಲೂಕು ಪಂಚಾಯಿತಿ, ಆನೇಕಲ್.
9. ಶ್ರೀ ಮಂಜುನಾಥ, ಮುಖ್ಯಾಧಿಕಾರಿ, ಪುರಸಭೆ, ಅತ್ತಿಬೆಲೆ.
10. ಶ್ರೀ ಮಂಜುನಾಥ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾನಗರಾಭಿವೃದ್ದಿ ಕೋಶ, ಬೆಂಗಳೂರು ನಗರ ಜಿಲ್ಲೆ.

11 ಶ್ರೀ ಡಾ॥ ಎಂ.ಆರ್ ರವಿ, ಸಹಾಯಕ ನಿರ್ದೇಶಕರು, ಪಶುಪಾಲನಾ ಇಲಾಖೆ, ಆನೇಕಲ್.

12. ಶ್ರೀ ಡಾ॥ ಜ್ಞಾನಪ್ರಕಾಶ್, ತಾಲ್ಲೂಕು ಆರೋಗ್ಯ ಅಧಿಕಾರಿಗಳು, ಆನೇಕಲ್.
13. ಶ್ರೀಮತಿ ವೀಣಾ.ಎನ್ ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ಆನೇಕಲ್.
14. ಶ್ರೀ ಕೆ.ಸಿ ರಮೇಶ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆನೇಕಲ್.
15. ಶ್ರೀ ಧನಂಜಯ. ಕೆ, ಕೃಷಿ ಅಧಿಕಾರಿ, ಆನೇಕಲ್.
16. ಶ್ರೀಮತಿ ಡಾ॥ ಎಂ. ಮೀನ, ಜಿಲ್ಲಾ ಅಧಿಕಾರಿ (ಬಿ.ಸಿ.ಎಂ), ಬೆಂಗಳೂರು.
17. ಶ್ರೀ ಎಂ.ಶ್ರೀನಿವಾಸ್, ಸಹಾಯಕ ನಿರ್ದೇಶಕರು ತೋಟಗಾರಿಕೆ. ಆನೇಕಲ್.

ವಿಷಯ: ನಿರ್ದೇಶನಾಲಯದ ಹಂತದಲ್ಲಿ ಕ್ರಮವಹಿಸುವ ಸ್ವೀಕೃತಿಗಳು

ಪಸಂಮೀ/29/ಮೀಇಸೇ/2019

**ಸ್ವೀಕೃತಿ ಸಂಖ್ಯೆ: 1929 ಮತ್ತು 1914 / 2019**

ಮೀನುಗಾರಿಕೆ ನಿರ್ದೇಶನಾಲಯದಲ್ಲಿ ಕ್ರಮ ವಹಿಸತಕ್ಕಂತಹ ಈ ಕೆಳಕಂಡ ಸ್ವೀಕೃತಿಗಳು ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಪುಟ- ರಲ್ಲಿ ಅದನ್ನು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಹಾಗೂ ಅವಶ್ಯವಿದ್ದಲ್ಲಿ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಕರನ್ನು ಕೋರಬಹುದಾಗಿದೆ. ಒಪ್ಪಿದಲ್ಲಿ ಅದರಂತೆ ಬರೆದಿರುವ ಕರಡು ಪತ್ರವನ್ನು ಪುಟ- ರಲ್ಲಿ ಅನುಮೋದನೆಗೆ ಸಲ್ಲಿಸಿದೆ.

| ಕ್ರ.ಸಂ. | ಪತ್ರ ಕಳುಹಿಸಿರುವವರು | ವಿಷಯ |
|---|---|---|
| 1. | ಡಿ. ತಿಪ್ಪೇಸ್ವಾಮಿ, ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು ಇವರ ಪತ್ರ ದಿನಾಕ: 20-08-2019 | ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 10-05-2019 ರಂದು ನೀಡಿರುವ ತೀರ್ಪಿನನ್ವಯ ತಿಪ್ಪೇಸ್ವಾಮಿ.ಡಿ. ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು ರವರಿಗೆ ಮೀನುಗಾರಿಕೆ ಜಂಟಿ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ |
| 2. | ನಿಗಮದ ನಿವೃತ್ತಿ ನೌಕರರು, ಬೆಂಗಳೂರು ಇವರ ಪತ್ರ ದಿನಾಂಕ: 26-08-2019 | ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ಬೆಂಗಳೂರು ಘಟಕದ ಸಿಬ್ಬಂದಿಯೋರ್ವರು ನಡೆಸಿದ ಆರ್ಥಿಕ ಅವ್ಯವಹಾರದ ಸಂಬಂಧ ಸರಿಯಾದ ಕ್ರಮ ಜರುಗಿಸದೆ ಇರುವುದರ ಕುರಿತು |

ಮುಂದಿನ ಆದೇಶ ಕೋರಿ ಕಡತ ಮಂಡಿಸಿದೆ.

**ಡಾ. ಶಾಲಿನಿ ರಜನೀಶ್,** ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 701, 7ನೇ ಮಹಡಿ
3ನೇ ಹಂತ, ಬಹುಮಹಡಿಗಳ ಕಟ್ಟಡ
ಬೆಂಗಳೂರು – 560 001
ದೂ : 080–22252352, 22032726
ಇ–ಮೇಲ್: prsplanning@gmail.com

ACS/AR/E-719221

ಸಂಖ್ಯೆ: ಯೋಇ/141/ಪ್ರಕಾ/2019 ದಿನಾಂಕ: 12.09.2019

**ಮಾನ್ಯರೇ,**

ತಮ್ಮ ಸುತ್ತೋಲೆ ಪತ್ರ ಸಂಖ್ಯೆ: ಸಿಆಸುಇ 19 ಇಸಪ 2018, ದಿನಾಂಕ: 11.07.2018 ರಲ್ಲಿ ತಿಳಿಸಿರುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಭೇಟಿ ನೀಡಿದ ವರದಿಯನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

| **ಕ್ರಮ ಸಂಖ್ಯೆ** | **ಅಂಶಗಳು** | **ಕಾರ್ಯದರ್ಶಿಗಳ ಷರಾ** |
|---|---|---|
| 1 | ಜಿಲ್ಲೆಯ ಹೆಸರು | ತುಮಕೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಶಾಲಿನಿ ರಜನೀಶ್,ಭಾ.ಆ.ಸೇ. |
| 3 | ಭೇಟಿಯಾದ/ಪ್ರವಾಸದ ದಿನಾಂಕ | ದಿನಾಂಕ: 07.09.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಜಿಲ್ಲಾ ಭೇಟಿಯ ವರದಿಯ ಪ್ರತಿ ಲಗತ್ತಿಸಿದೆ |

**ಗೌರವಗಳೊಂದಿಗೆ,**

ತಮ್ಮ ವಿಶ್ವಾಸಿ,

15/9

**ಶ್ರೀಮತಿ ವಿ.ಮಂಜುಲ, ಭಾ.ಆ.ಸೇ,**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ** (ಆಸು)

13/9/19

13/9

13/9/19

# ಸ್ಥಳ ಪರಿಶೀಲನೆ ವರದಿ

ದಿನಾಂಕ: 07.09.2019 ರಂದು ನಾನು ತುಮಕೂರು ಜಿಲ್ಲೆಗೆ ಭೇಟಿ ನೀಡಿರುತ್ತೇನೆ. ಬೆಳಿಗ್ಗೆ 10.30 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಅಮಾನಿಕೆರೆ ಅಭಿವೃದ್ಧಿ ಕಾಮಗಾರಿಯನ್ನು ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಹಾಗೂ ಸಂಬಂಧ ಪಟ್ಟ ತಾಂತ್ರಿಕೇತರ ಅಧಿಕಾರಿಗಳೊಂದಿಗೆ ಪರಶೀಲನೆ ನಡೆಸಲಾಯಿತು. ತುಮಕೂರು ಅಮಾನಿಕೆರೆಯ ಒಟ್ಟು ವಿಸ್ತೀರ್ಣವು 504 ಎಕರೆ ಪ್ರದೇಶದಲ್ಲಿದ್ದು ಅತಿದೊಡ್ಡ ಕೆರೆಯಾಗಿರುತ್ತದೆ. **ಪ್ರಸ್ತುತ ಕಾಮಗಾರಿಯಲ್ಲಿ ಹೂಳೆತ್ತುವ ಕಾಮಗಾರಿಯು ತ್ವರಿತಗತಿಯಲ್ಲಿ ಸಾಗಿದ್ದಲ್ಲಿ ಮಾತ್ರ ಹೇಮಾವತಿ ನೀರು ತುಂಬಿಸಲು ಅನುಕೂಲವಾಗುತ್ತದೆಎಂಬುದನ್ನು ಗುತ್ತಿಗೆದಾರರಿಗೂ ಹಾಗೂ ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೂ ಮನದಟ್ಟು ಮಾಡಲಾಯಿತು.** ಈ ಕಾಮಗಾರಿಯನ್ನು ಸಂಪೂರ್ಣವಾಗಿ ಪರಿಶೀಲಿಸಿದಾಗ ಗುತ್ತಿಗೆದಾರರು ಪ್ರಗತಿ ಕಾಣಿಸುವಲ್ಲಿ ಕುಂಠಿತವಾಗಿರುವುದು ಕಂಡು ಬಂದಿರುತ್ತದೆ.

ಕೆರೆಯ ವಿಸ್ತೀರ್ಣದ ಒಟ್ಟು 504 ಎಕರೆಗಳಲ್ಲಿ ಪ್ರಸ್ತುತ 20 ಎಕರೆ ಪ್ರದೇಶದಲ್ಲಿ ಮಾತ್ರ ಕೆರೆಯ ಹೂಳೆತ್ತು ಮಾಡಿದ್ದು, ಇಡೀ ವಿಸ್ತೀರ್ಣದಲ್ಲಿ ಮಾಡಲು ಹಾಗೂ ಒಂದಕ್ಕೆ ಇನ್ನೊಂದು connect ಮಾಡಲು ಸೂಚಿಸಲಾಯಿತು. ಒಟ್ಟಾರೆ ಮಳೆ ನೀರು Baby pool ಗೆ ಹೋಗಿ ಸೇರಬೇಕು. ಕಾರಣ ಮಳೆಗಾಲ ನಿಂತ ಮೇಲೆ ಸಸಿಗಳು ಬೆಳೆಯುವುದು ಕಷ್ಟ. 25.5 ಕಿಲೋ ಮೀಟರ್ ಕೆರೆಯ ದಂಡನ್ನು ಅಭಿವೃದ್ಧಿಪಡಿಸಲು ಪ್ರಾರಂಭಿಸಿದ್ದು, ಜೊತೆಗೆ ಲಭ್ಯವಿರುವ Toe pivoting / Curbstone / Tiles ಹಾಕಲು ಕಾಮಗಾರಿಯನ್ನು ಪ್ರಾರಂಭಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿತ್ತು.

**(ಕ್ರಮ – ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿ.)**

ಅಲ್ಲದೆ 2 ದಿನದೊಳಗೆ ಕೆಂಪು ಮಣ್ಣು ಹಾಕಿ ಕೆರೆಯಲ್ಲಿ ಹಸಿರೀಕರಣ ಅಭಿವೃದ್ಧಿ ಪಡಿಸುವುದನ್ನು ಗಮದಲ್ಲಿಟ್ಟುಕೊಂಡು ಕೆರೆಯ ಸುತ್ತ ಹಾಗೂ ಸಣ್ಣ ಕೆರೆ ಅಂಗಳದಲ್ಲಿ ವಿವಿಧ ಬಗೆಯ ಹೂ ಬಿಡುವ ಸಸಿ ಹಾಗೂ 4–5 ವರ್ಷ ದೊಡ್ಡದಾದ ಗಿಡಗಳನ್ನು ಸುತ್ತಲೂ ನೆಡುವ ಕುರಿತು ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಇವರಿಗೆ ಸೂಚಿಸಲಾಗಿದ್ದು, ಅಮಾನಿಕೆರೆಯಲ್ಲಿ ಹಸಿರುಕರಣ ಸಂಬಂಧಿಸಿದಂತೆ ತಗಲುವ ಅಂದಾಜು ವೆಚ್ಚವನ್ನು ಕೂಡಲೇ ಸ್ಮಾರ್ಟ್ ಸಿಟಿ ಕಛೇರಿಗೆ ಸಲ್ಲಿಸುವಂತೆ ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಇವರಿಗೆ ತಿಳಿಸಲಾಯಿತು.

**(ಕ್ರಮ – ಉಪ ನಿರ್ದೇಶಕರು, ತೋಟಗಾರಿಕೆ)**

**ಕೆರೆಯ ಸುತ್ತಲೂ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಲು ಯೋಜಿಸಿದ್ದು,** ಸೌರಶಕ್ತಿಯನ್ನು ಗಮದಲ್ಲಿಟ್ಟುಕೊಂಡು ಸೋಲಾರ್ ಫೆನ್ಸಿಂಗ್ಅಳವಡಿಸುವ ಪ್ರಕ್ರಿಯೆಗೆ ಕೂಡಲೇ ಚಿಂತನೆ ನಡೆಸುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸಲಾಯಿತು ಹಾಗೂ ಮನೆಗಳು ಇರುವ ಕಡೆ ಗೋಡೆ (Compound) ನಿರ್ಮಿಸಲು ಸೂಚಿಸಲಾಯಿತು. ಈ ಯೋಜನೆಯಡಿ ಕೆರೆಯ ಬಂಡ್ ಅಭಿವೃದ್ಧಿ, ಬೋಟಿಂಗ್ ಅಭಿವೃದ್ಧಿ, ಸೈಕಲ್ ಟ್ರಾಕ್ ಫೂಟ್ ಪಾತ್ ಮತ್ತು ಮೊನೋರೈಲ್, ಪಾತ್‌ವೇ ಅಭಿವೃದ್ಧಿ, ವಾಕಿಂಗ್ ಪಾತ್, ವಾರಾಂತ್ಯದ ಸಂಗೀತ ಕಾರಂಜಿ, ಮಕ್ಕಳ ಆಟಿಕೆ, ಯೋಗ ಕೇಂದ್ರ, ಪಕ್ಷಿಗಳಿಗೆ ಉತ್ತಮ ಆವಾಸಸ್ಥಾನಗಳನ್ನು ಕಲ್ಪಿಸುವುದು ಹಾಗೂ ಅವುಗಳ ಸಂತಾನಾಭಿವೃದ್ಧಿ ಮಾಡಲು ದ್ವೀಪಗಳ ಅಭಿವೃದ್ಧಿ ಸೇರಿದಂತೆ ಸುಂದರ ಉದ್ಯಾನವನ್ನಾಗಿ ಮಾಡಲು ಉದ್ದೇಶಿಸಿ ಅಭಿವೃದ್ಧಿಯನ್ನು ಕೈಗೂಳ್ಳಲಾಗಿದೆ. ಈ ಕಾಮಗಾರಿಗಳಿಗೆ ಅಗತ್ಯವಿರುವ ರೇಖಾ ಚಿತ್ರ ಹಾಗೂ ನಕ್ಷೆಗಳನ್ನು ಗುತ್ತಿಗೆದಾರರಿಗೆ ನೀಡುವಲ್ಲಿ **ಪಿ.ಎಂ.ಸಿ ಯವರು ಸಮಯ ವಿಳಂಬ ಮಾಡಿದರೆ ಕೂಡಲೇ ನೋಟಿಸ್ ಹಾಗೂ ದಂಡ ವಿಧಿಸುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಯಿತು.**

**(ಕ್ರಮ – ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿ.)**

ಆನಂತರ ನಗರದ ಹೊರಪೇಟೆ ಮುಖ್ಯ ರಸ್ತೆಯಲ್ಲಿ ನಡೆಯುತ್ತಿರುವ ಸ್ಮಾರ್ಟ್‌ರೋಡ್ ಕಾಮಗಾರಿಯನ್ನು ವೀಕ್ಷಿಸಲಾಗಿದ್ದು, ಸದರಿ ಕಾಮಗಾರಿಯಲ್ಲಿ **ಬೆಸ್ಕಾಂ, ಬಿ.ಎಸ್.ಎನ್.ಎಲ್, KUWS & DB ಹಲವು ಇಲಾಖೆಗಳ ಪೈಪ್‌ಗಳು/ಪೋಲ್ಸ್ ಸ್ಥಳಾಂತರ ಮಾಡದೇ ಇರುವುದರಿಂದ ವಿಳಂಬವಾಗಿದ್ದು,** ಈ ಸಂಬಂಧ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಕೂಡಲೇ ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು. ಸ್ಮಾರ್ಟ್‌ರೋಡ್ ಕಾಮಗಾರಿಯನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸದೆ ಇದ್ದಲ್ಲಿ ಅಥವಾ ಕಾಮಗಾರಿಗಳು ನಡೆಯುವ ಸ್ಥಳಗಳಲ್ಲಿ ಸುರಕ್ಷಿತ ಕ್ರಮ ಅಳವಡಿಸದೇ ಇದ್ದಲ್ಲಿ ಸಾರ್ವಜನಿಕರಿಗೆ ಸಂಚಾರ ದಟ್ಟಣೆ ಸಮಸ್ಯೆ ಉಂಟಾಗುತ್ತದೆ. **ಇವೆಲ್ಲವನ್ನು ಪಾಲಿಸುವಲ್ಲಿ ವಿಫಲರಾಗುವ ಗುತ್ತಿಗೆದಾರರ ಮೇಲೆ ಕೂಡಲೇ ಕ್ರಮಕೈಗೊಳ್ಳುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಯಿತು**. ಸ್ಮಾರ್ಟ್ ರಸ್ತೆ ನಿರ್ಮಾಣಕ್ಕಾಗಿ ಈಗಾಗಲೇ ಅಗೆದಿರುವ ರಸ್ತೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸುವವರೆಗೂ ಹೊಸ ರಸ್ತೆಗಳ ಅಗೆಯುವಿಕೆಯನ್ನು ಕೈಗೊಳ್ಳತಕ್ಕದ್ದು ಎಂದು ಸ್ಥಳದಲ್ಲೇ ಸಂಬಂಧ ಪಟ್ಟ ಅಭಿಯಂತರರಿಗೆ ಹಾಗೂ ಗುತ್ತಿಗೆದಾರರಿಗೆ ಸೂಚಿಸಲಾಯಿತು.

ಆನಂತರ ಮಾರಿಯಮ್ಮ ನಗರದ ಬಡವಾಸಿಗಳಿಗೆ ವಸತಿ ಸೌಲಭ್ಯಕ್ಕಾಗಿ ನಿರ್ಮಿಸುತ್ತಿರುವ ಕಟ್ಟಡ ಕಾಮಗಾರಿಯನ್ನು ವೀಕ್ಷಿಸಿದ್ದು, ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಬಗ್ಗೆ ತಾಂತ್ರಿಕ ಅಧಿಕಾರಿಗಳಿಂದ ಮಾಹಿತಿ ಪಡೆಯಲಾಯಿತು. ನಂತರ ಟೌನ್‌ಹಾಲ್ ಬಳಿ ಇರುವ ನಗರ ಕೇಂದ್ರ ಗ್ರಂಥಾಲಯದ ಆವರಣದಲ್ಲಿ ಸ್ಮಾರ್ಟ್‌ಸಿಟಿ ವತಿಯಿಂದ ನಿರ್ಮಿಸುತ್ತಿರುವ ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ವೀಕ್ಷಿಸಿದ್ದು, ಕಾಮಗಾರಿಯ ಮೈಲಿಗಲ್ಲನ್ನು ಪರಿಶೀಲಿಸಲಾಗಿ ವಿಳಂಬವಾಗಿರುವುದು ಕಂಡು ಬಂದಿರುತ್ತದೆ. ಈ ಕುರಿತು ಗುತ್ತಿಗೆದಾರರನ್ನು ಪ್ರಶ್ನಿಸಿದಾಗ **ಅರಣ್ಯ ಇಲಾಖೆಯಿಂದ ಮರಗಳನ್ನು ಸ್ಥಳಾಂತರಿಸುವ ಬಗ್ಗೆ ಅನುಮತಿ ನೀಡುವಲ್ಲಿ ವಿಳಂಬವಾದ ಕಾರಣ ಕಾಮಗಾರಿಯ ಪ್ರಗತಿ ಕುಂಠಿತವಾಗಿದೆ ಎಂದು ಗುತ್ತಿಗೆದಾರರು ಸ್ಪಷ್ಟನೆ ನೀಡಿದರು.** ಆದ್ದರಿಂದ ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವಲ್ಲಿ ಆಗುವ ಸಮಸ್ಯೆಗಳನ್ನು ಬಗೆಹರಿಸಲು ಜಿಲ್ಲಾಧಿಕಾರಿಗಳು ಸಹಕರಿಸುವಂತೆ ಸೂಚಿಸಲಾಯಿತು.

**(ಕ್ರಮ – ಜಿಲ್ಲಾಧಿಕಾರಿಗಳು)**

ಮಧ್ಯಾಹ್ನ 3.00 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಅನುಷ್ಠಾನಗೊಳ್ಳುತ್ತಿರುವ ಸ್ಕಿಲ್ ಸಿಟಿ ಯೋಜನೆಯ ಕುರಿತು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರಿಗೆ ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ತಜ್ಞರೊಂದಿಗೆ ಸಭೆಯನ್ನು ಕೈಗೊಂಡು ಈ ಯೋಜನೆಯ ಕುರಿತು ತಯಾರಿಸಿರುವವಿವರವಾದ ವರದಿಯನ್ನು ಪರಿಶೀಲಿಸಿ ಈ ಯೋಜನೆಯಿಂದ **NRLM / NULM ಅಥವಾ ಕೌಶಲ್ಯಾಭಿವೃದ್ಧಿ (Skill Development) ಕಾರ್ಯಕ್ರಮಗಳನ್ನು** ಹೊರತುಪಡಿಸಿ, ನರಸಾಪುರ ಔದ್ಯೋಗಿಕ ಕ್ಷೇತ್ರಕ್ಕೆ ಬೇಕಾದ ಕೌಶಲ್ಯಗಳನ್ನು ಕಳಿಸುವುದು ಎಂದು ಸೂಚಿಸಲಾಯಿತು. ಅಲ್ಲದೆ ಕೌಶಲ್ಯಾಭಿವೃದ್ಧಿ ದತ್ತಾಂಶದಲ್ಲಿ ಲಭ್ಯವಿರುವ ಆಕಾಂಕ್ಷಿಗಳಿಗೆ ಸಂಪರ್ಕಿಸಿ, ಮೊದಲನೆಯದಾಗಿ ತರಬೇತಿ ನೀಡುವುದು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಹಾಯದಿಂದ ಸಮಗ್ರ ಕೃಷಿ ತರಬೇತಿ ಸಹ ನೀಡುವುದು.

ಸಂಜೆ 4.00 ಗಂಟೆಗೆ ತುಮಕೂರು ಜಿಲ್ಲೆಯಲ್ಲೇ ಪ್ರತಿಷ್ಠಿತ ದೇವಸ್ಥಾನಗಳಲ್ಲಿ ಒಂದಾದ ದೇವರಾಯನದುರ್ಗದ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಬೇಟಿ ನೀಡಲಾಗಿದ್ದು, **ಈ ದೇವಸ್ಥಾನವು ಸಾವಿರ ವರ್ಷ ಹಳೆದಾಗಿರುವುದರಿಂದ ಅತಿಹೆಚ್ಚು ಪ್ರವಾಸಿಗರು ಆಗಮಿಸುವ ಸಾಧ್ಯತೆ ಇರುತ್ತದೆ. ಆದರೆ ಪ್ರವಾಸ್ಯೋದ್ಯಮ ಇಲಾಖೆಯವರಿಗೆ ಬಸ್ ಸಾರಿಗೆ ವ್ಯವಸ್ಥೆ ಅಗತ್ಯವಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಇವರಿಗೆ ತಿಳಿಸಲಾಯಿತು. ಸದರಿ ದೇವಸ್ಥಾನ ಅಭಿವೃದ್ಧಿ ಸಂಬಂಧ ಮುಜುರಾಯಿ ತಹಶೀಲ್ದಾರ್‌ರವರಿಗೆ ನಕ್ಷೆಗಳನ್ನು ತಯಾರಿಸಿ ತಗಲುವ ಅಂದಾಜು ವೆಚ್ಚಕ್ಕೆ ಅನುಮೋದನೆ ಪಡೆಯಲು ಸೂಚಿಸಲಾಯಿತು.**

**(ಕ್ರಮ – ಜಿಲ್ಲಾಧಿಕಾರಿಗಳು)**

ಅಲ್ಲದೆ ಸರ್ವೇ ನಂ.9 ರಲ್ಲಿ ಚೆಕ್ ಡ್ಯಾಂ ಹೊಡೆದು ಹೋಗಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಗೆ ದುರಸ್ಥಿಗೊಳಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

(ಕ್ರಮ – ಮು.ಕಾ.ನಿ., ಜಿಲ್ಲಾ ಪಂಚಾಯತ್)

**(ಡಾ. ಶಾಲಿನಿ ರಜನೀಶ್ ಭಾ.ಆ.ಸೇ)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ
ಸಾಂಖ್ಯಿಕ ಇಲಾಖೆ ಮತ್ತು ತುಮಕೂರು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು,
ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.

**ಡಾ. ಶಾಲಿನಿ ರಜನೀಶ್,** ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 701, 7ನೇ ಮಹಡಿ
3ನೇ ಹಂತ, ಬಹುಮಹಡಿಗಳ ಕಟ್ಟಡ
ಬೆಂಗಳೂರು – 560 001
ದೂ : 080–22252352, 22032726
ಇ–ಮೇಲ್: prsplanning@gmail.com

ಸಂಖ್ಯೆ: ಯೋಇ/141/ಪ್ರಕಾ/2019 ದಿನಾಂಕ: 19.08.2019

ACS/AR/E-682910/2019

**ಮಾನ್ಯರೇ,**

ತಮ್ಮ ಸುತ್ತೋಲೆ ಪತ್ರ ಸಂಖ್ಯೆ: ಸಿಆಸುಇ 19 ಇಸಪ 2018, ದಿನಾಂಕ: 11.07.2018 ರಲ್ಲಿ ತಿಳಿಸಿರುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಭೇಟಿ ನೀಡಿದ ವರದಿಯನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

| ಕ್ರಮ ಸಂಖ್ಯೆ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ತುಮಕೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಶಾಲಿನಿ ರಜನೀಶ್,ಭಾ.ಆ.ಸೇ. |
| 3 | ಭೇಟಿಯಾದ/ಪ್ರವಾಸದ ದಿನಾಂಕ | ದಿನಾಂಕ: 13.8.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಜಿಲ್ಲಾ ಭೇಟಿಯ ವರದಿಯ ಪ್ರತಿ ಲಗತ್ತಿಸಿದೆ |

**ಗೌರವಗಳೊಂದಿಗೆ,**

ತಮ್ಮ ವಿಶ್ವಾಸಿ,

**ಶ್ರೀಮತಿ ವಿ.ಮಂಜುಲ, ಭಾ.ಆ.ಸೇ,**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಸು)**

## ತುಮಕೂರು ಉಸ್ತುವಾರಿ ಜಿಲ್ಲೆಗೆ ದಿನಾಂಕ: 13.08.2019 ರಂದು ಭೇಟಿ ನೀಡಿದ ವಿವರ

ದಿನಾಂಕ: 13.08.2019 ರಂದು ನಾನು ತುಮಕೂರು ಜಿಲ್ಲೆಗೆ ಭೇಟಿ ನೀಡಿರುತ್ತೇನೆ. ಜಿಲ್ಲೆಯಲ್ಲಿ ಕೃಷಿ ಪದ್ಧತಿ ಅಭಿವೃದ್ಧಿಪಡಿಸುವ ಸಲುವಾಗಿ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಬಿ.ಆರ್.ಮಮತ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಳ್ಳಲಾಯಿತು. ಅದರಂತೆ ಸಂಬಂಧಪಟ್ಟ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ನಬಾರ್ಡ್, ಅರಣ್ಯ ಇಲಾಖೆ ಹಾಗೂ ಇತರೆ ಅಧಿಕಾರಿಗಳು ಕೃಷಿ ಪದ್ಧತಿ ವ್ಯವಸ್ಥೆ ಬಗ್ಗೆ ವಿಮರ್ಷಿಸಿರುತ್ತಾರೆ. ಅದರಂತೆ **ರೈತರ ಆದಾಯವನ್ನು ದ್ವಿಗುಣ** ಮಾಡುವ ಸಲುವಾಗಿ ಸ್ವಂತ ಜಮೀನು ಪಡೆದು 36,000 ರೈತ ಮಹಿಳೆಯರು ಈ ಸೌಲಭ್ಯ ಪಡೆದಕೊಳ್ಳಬಹುದಾಗಿದ್ದು, ವರ್ಷದ 365 ದಿನವೂ **ಸಮಗ್ರ ಕೃಷಿ ಪದ್ಧತಿ ಅಳವಡಿಸಲು ಯೋಜನೆ ತಯಾರಿಸಲಾಗಿದೆ.** ತೋಟಗಾರಿಕೆ, ಪಶುಸಂಗೋಪನೆ, ಹೈನುಗಾರಿಕೆ, ಕುರಿ, ಕೋಳಿ, ಸಾಗಾಣಿಕೆ ಜೇನು ಕೃಷಿ, ಮೀನು ಕೃಷಿ, ರೇಷ್ಮೆ, ಅರಣ್ಯೀಕರಣ ಮತ್ತಿತರ ಚಟುವಟಿಕೆಗಳು ಕೈಗೊಳ್ಳಬಹುದಾಗಿದ್ದು, ಈ ಬಗ್ಗೆ ರೈತ ಮಹಿಳೆಯರಲ್ಲಿ ಅರಿವು ಮೂಡಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಜಿಲ್ಲೆಯ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳಲಿಚ್ಚಿಸುವ ಸ್ವಸಹಾಯ ಗುಂಪಿನ ಮಹಿಳೆಯರಿಗೆ NABARD ಅಡಿಯಲ್ಲಿ **ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವು ರೂ.75,000/- ಆರ್ಥಿಕ ನೆರವು ನೀಡಲು ಮುಂದಾಗಿದ್ದು, ಇದನ್ನು ಸದುಪಯೋಗ ಪಡಿಸಲು SLBC ಮುಂದೆ ಘಟಕ ವೆಚ್ಚ ಹಾಗೂ ಯೋಜನೆ ಅನುಮೋದನೆ ಅಗತ್ಯವಿದೆ.**

2. ರೈತ ಮಹಿಳೆಯರು ಉತ್ಪಾದಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಆರ್ಥಿಕವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಸಭೆಯಲ್ಲಿ ತಿಳಿಸಲಾಗಿತ್ತು. ಮಣ್ಣಿನ ಆರೋಗ್ಯ, ಮಳೆ ನೀರಿನ ಸಂಗ್ರಹ ನೀರಿನ ಸದ್ಬಳಕೆ ಹಾಗೂ ಮರುಬಳಕೆ, ಕೃಷಿ ತ್ಯಾಜ್ಯ ಸಂಗ್ರಹ, ಪ್ರತಿ ಕೃಷಿ ಬಗ್ಗೆ ಲೆಕ್ಕ ಪತ್ರ ನಿರ್ವಹಣೆ, ಚಟುವಟಿಕೆಯಿಂದಾದ ಲಾಭ ನಷ್ಟ ವರದಿ ತಯಾರಿಕೆ ಬಗ್ಗೆ ತರಬೇತಿ ನೀಡಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಸಮಗ್ರ ಕೃಷಿ ಪದ್ಧತಿ ಅಳವಡಿಕೆಗೆ ಸಂಬಂಧಿಸಿ ಕೃಷಿ ತಜ್ಞರು ಮಾದರಿಯನ್ನು ತಯಾರಿಸಿದ್ದು, ಬಹುವಾರ್ಷಿಕ ಬೆಳೆ, ಮಿಶ್ರ ಬೆಳೆ, ಪದ್ಧತಿಯಿಂದಾಗುವ ಲಾಭದ ಬಗ್ಗೆ ಮಾಹಿತಿ ನೀಡಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಅವಲೋಕಿಸಿ ಕ್ರಿಯಾ ಯೋಜನೆ ತಯಾರಿಸಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸೂಚಿಸಲಾಗಿತ್ತು.

3. **ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ನಿರ್ದೇಶಕರಾದ ಡಾ. ಬಿ.ಆರ್ ಮಮತ ರವರು ಜಿಲ್ಲೆಯು ಕೃಷಿ ಆಧಾರಿತವಾಗಿರುವುದರಿಂದ ಕೃಷಿ ಹಾಗೂ ಕೃಷಿ ಉತ್ಪನ್ನಗಳಿಂದ ಆದಾಯ ಗಳಿಸಲು AGRI Business ಸ್ಥಾಪಿಸಿ ಜೀವನೋಪಾಯ ಕಂಡುಕೊಳ್ಳಲು ಅಭಿಯಾನದಿಂದ ಹಣಕಾಸು ನೆರವು ನೀಡಲು ಸೂಚಿಸಿದರು.** ಅಲ್ಲದೆ, ಸ್ಯಾನಿಟರಿ ನ್ಯಾಪ್ಕಿನ್ ತಯಾರಕ ಘಟಕ ಸ್ಥಾಪಿಸಲು ಪ್ರತೀ ತಾಲ್ಲೂಕಿನ ಒಂದು ಆಯ್ದ ಸ್ವಸಹಾಯ ಗುಂಪಿಗೆ ತರಬೇತಿ ನೀಡಲಾಗುವುದೆಂದು ತಿಳಿಸಿದರು.

4. ಸರ್ಕಾರದ ಅನುದಾನ ಉಪಯೋಗಿಸಿಕೊಳ್ಳುವುದಲ್ಲದೆ **ನಬಾರ್ಡ್, ಬ್ಯಾಂಕ್ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತಿತರ ಹಣಕಾಸು** ಮೂಲಗಳಿಂದ ನೀಡುವ ಅನುದಾನವನ್ನು ಸಂಪೂರ್ಣವಾಗಿ ಕೃಷಿ ಅಭಿವೃದ್ಧಿಗೆ ಬಳಸಿಕೊಳ್ಳಲಾಗುವುದೆಂದು ತಿಳಿಸಿದ್ದು, ಮಳೆಗಾಲ ಸಮೀಪಿಸಿರುವುದರಿಂದ ಜಿಲ್ಲೆಯಲ್ಲಿ ಕೃಷಿ ಅಭಿವೃದ್ಧಿ ಯೋಜನೆಯನ್ನು ಮುಂಬರುವ 10 ದಿನಗಳೊಳಗೆ ಚಾಲನೆಗೊಳಿಸಿ, ಸ್ವಸಹಾಯ ಗುಂಪುಗಳಿಗೆ ಯೋಜನೆಗಳ ರೂಪುರೇಶೆಗಳ ಮಾಹಿತಿ ನೀಡಬೇಕೆಂದು ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಿಗೆ ಸೂಚಿಸಲಾಗಿತ್ತು.

5. ಬೆಳಗ್ಗೆ 11.30 ಗಂಟೆಗೆ ತುಮಕೂರು ಮಹಾನಗರಪಾಲಿಕೆ ಸಭಾಂಗಣದಲ್ಲಿ ಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ ಅಭಿವೃದ್ಧಿ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯನ್ನು Mayor (ಮಹಾಪೌರರು) ಮತ್ತು ನಗರದ ಶಾಸಕರೊಂದಿಗೆ ಕೈಗೊಳ್ಳಲಾಗಿತ್ತು. **ನಗರದ ಸ್ವಚ್ಛತೆ ಅವ್ಯವಸ್ಥೆಯ ಬಗ್ಗೆ ಡ್ರೋನ್ ಕ್ಯಾಮರಾ ಮೂಲಕ ಮಾಹಿತಿ ಪಡೆದು ಸಭೆಯಲಿದ್ದ ಸಂಬಂಧಿಸಿದ ಅಧಿಕಾರಿಗಳಿಗೆ ಸಭೆಯಲ್ಲಿ ವಿವರಣೆ ನೀಡಲು ಸೂಚಿಸಲಾಯಿತು.** ಕ್ಯಾತ್ಸಂದ್ರದ ಗುಡ್ಲಮ್ಮ ಕೆರೆಯಲ್ಲಿ ಕೊಳಚೆ ನೀರು ಶೇಖರಣೆಯಾಗಿರುವುದನ್ನು ಗಮನಿಸಿದ್ದು ಏಕೆ ಸ್ವಚ್ಚಗೊಳಿಸಿಲ್ಲ ಎಂದು ಸಂಬಂಧಪಟ್ಟ ಅಭಿಯಂತರರನ್ನು ಪ್ರಶ್ನಿಸಲಾಗಿ ಉತ್ತರ ನೀಡುವಲ್ಲಿ ವಿಫಲರಾದರು. ನಗರದ ಶಂಕರಮಠ ವೃತ್ತದ ಬಳಿ ಸೋಮೇಶ್ವರ ದೇವಾಲಯದ ಮುಂಬಾಗ ದೊಡ್ಡ ಚರಂಡಿಯಲ್ಲಿ ಅನೈರ್ಮಲ್ಯ ಉಂಟಾಗಿರುವುದರ ಬಗ್ಗೆ ಈಗಾಗಲೇ ಹಲವಾರು ಪತ್ರಿಕೆಗಳಲ್ಲಿ ಪ್ರಕಟಿತವಾಗಿದ್ದು ಹಾಗೂ ದಿನಾಂಕ: 11.07.2019 ರಂದು ಖುದ್ದಾಗಿ ನಾನು ಸ್ಥಳ ಪರಿವೀಕ್ಷಣೆ ಮಾಡಿ ಕೂಡಲೇ ಸ್ವಚ್ಛಗೊಳಿಸಲು ಸೂಚಿಸಿದ್ದರೂ ಸಹ ಈ ದಿನದವರೆಗೂ ಪಾಲಿಕೆಯ ಯಾರೊಬ್ಬ ಅಭಿಯಂತರರೂ ಸಹ ಕ್ರಮಕೈಗೊಂಡಿರುವುದಿಲ್ಲ. ಈ ವಿಷಯವಾಗಿ ಸಭೆಯಲ್ಲಿ ಪಾಲಿಕೆಯ ಪರಿಸರ ಅಭಿಯಂತರುಗಳನ್ನು ಪ್ರಶ್ನಿಸಿದಾಗ ಸ್ಪಷ್ಟೀಕರಣ ನೀಡಿರುವುದಿಲ್ಲ. ಈ ಸಂಬಂಧ ಆಧುನಿಕ ಯಂತ್ರೋಪಕರಣಗಳನ್ನು ಬಳಸಿಕೊಂಡು ಅದಾಗದಿದ್ದರೂ ಕನಿಷ್ಟ ಪಕ್ಷ ಬಾಡಿಗೆಗೆ ಪಡೆದು ಕೂಡಲೇ ಸ್ವಚ್ಛಗೊಳಿಸುವಂತೆ ಪರಿಸರ ಅಭಿಯಂತರುಗಳಿಗೆ ಸೂಚಿಸಲು ಆಯುಕ್ತರಿಗೆ ತಿಳಿಸಲಾಯಿತು. ನಗರದ ಬಿ.ಎಚ್ ರಸ್ತೆಯ ಬದಿಗಳಲ್ಲಿ ಪ್ಲಾಸ್ಟಿಕ್, ತ್ಯಾಜ್ಯ, ಮಣ್ಣಿನ ರಾಶಿ ತುಂಬಿರುತ್ತದೆ. ಚರಂಡಿಗಳಲ್ಲಿ ಹೂಳು ಸಹ ತೆಗೆದಿರುವುದಿಲ್ಲ ಹಾಗೂ ಚರಂಡಿಯಿಂದ ತೆಗೆದ

ತ್ಯಾಜ್ಯವನ್ನು ವಿಲೇವಾರಿ ಮಾಡಿರುವುದಿಲ್ಲ. ಈ ಸಂಬಂಧ ಸಭೆಗೆ ತೆರಳುವ ಮುನ್ನ ವಿವಿದೆಡೆ ಖುದ್ದಾಗಿ ಪರಿಶೀಲನೆ ಮಾಡಿ, ರಸ್ತೆ ಬದಿಗಳಲ್ಲಿ ನಿರ್ಲಕ್ಷ್ಯವಾಗಿ ಮಣ್ಣು, ಕಸ ಹಾಕಿರುವ ಚಿತ್ರಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಭೆಯಲ್ಲಿ ಪ್ರದರ್ಶಿಸಿ, ಈ ಅವ್ಯವಸ್ಥೆಯ ಬಗ್ಗೆ ಅಧಿಕಾರಿಗಳು ಉದಾಸೀನತೆಯನ್ನು ತೋರಿರುವುದನ್ನು ಕಂಡು ಸಂಬಂಧಪಟ್ಟ ವಾರ್ಡ್‌ಗಳ ಉಸ್ತುವಾರಿ ಅಭಿಯಂತರರುಗಳ ಮೇಲೆ ಕೂಡಲೇ ಶಿಸ್ತಿನ ಕ್ರಮ ಜರುಗಿಸಿ ನಗರದಲ್ಲಿ ಸ್ವಚ್ಚತೆಯನ್ನು ಕಾಪಾಡಿಕೊಳ್ಳಲು ಆಯುಕ್ತರಿಗೆ ಸೂಚಿಸಲಾಗಿತ್ತು. **3 ವರ್ಷದಿಂದ ನಗರಪಾಲಿಕೆಯ ಕಾರ್ಯಪಾಲಕ ಅಭಿಯಂತರರ ಕರ್ತವ್ಯಚ್ಯುತಿ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಗೆ ಶಿಸ್ತಿನ ಕ್ರಮ ಜರುಗಿಸಲು ಪತ್ರ** ಕಳುಹಿಸಲಾಗಿದೆ.

6. **ಡ್ರೋನ್ ಕ್ಯಾಮರಾದಲ್ಲಿ ಚಿತ್ರಿಸಿದ ಕ್ಯಾತ್ಸಂದ್ರ ಕೆರೆಯಲ್ಲಿ ಕೊಳಚೆ ನೀರು ಹರಿದು ಬರುತ್ತಿರುವುದನ್ನು ಗಮನಿಸಿದಾಗ ಎಲ್ಲಿಂದ ಬರುತ್ತಿದೆ ಎಂದು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರನ್ನು ಪ್ರಶ್ನಿಸಿದಾಗ ಸಿದ್ದಗಂಗಾ ಮಠದಿಂದ ಬರುವ ಕೊಳಚೆ ನೀರು ಇಲ್ಲಿ ಸಂಗ್ರಹವಾಗಿದ್ದು, ಮಠದ ಕೊಳಚೇ ನೀರು ಶುದ್ದೀಕರಣ ಘಟಕ (ಎಸ್‌ಟಿಪಿ) ಹಾಳಾಗಿರುವುದರಿಂದ ಈ ವ್ಯವಸ್ಥೆ ಉಂಟಾಗಿದೆ ಎಂದು ಸ್ಪಷ್ಟನೆ ನೀಡಿದರು. ಈ ಸಂಬಂಧ ಸಾರ್ವಜನಿಕ ಹಿತದೃಷ್ಟಿಯಿಂದ ಕ್ಯಾತ್ಸಂದ್ರದ ಕೆರೆಯ ಬಳಿ ಒಂದು ತ್ಯಾಜ್ಯ ನೀರಿನ ಸಂಸ್ಕರಣ ಘಟಕ (ಎಸ್‌ಟಿಪಿ) ವನ್ನು ಸ್ಥಾಪಿಸಬೇಕಾಗಿದ್ದು, ಮಠದವರಾದರೂ ಸಹ ಸ್ಥಾಪಿಸಬಹುದಾಗಿದ್ದು,** ಈ ಅಂಶವನ್ನು ಮಠದವರ ಗಮನಕ್ಕೆ ತರಬೇಕು ಎಂದು ಸೂಚಿಸಲಾಯಿತು. ಈ ವಿಷಯವಾಗಿ ತುಮಕೂರು ನಗರದ ಶಾಸಕರು **"ಇದು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರಲಿದ್ದು ಅದರ ವತಿಯಿಂದ ಇಲ್ಲೊಂದು (ಎಸ್‌ಟಿಪಿ) ಸ್ಥಾಪಿಸಬೇಕು"** ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಗರದ ಬಟವಾಡಿ ಬಳಿಯ ಅಕ್ಕ-ತಂಗಿ ಕೆರೆಯ ಬಳಿಯು ಸಹ ಯು.ಜಿ.ಡಿ ಸಮಸ್ಯೆ ನಿರಂತರವಾಗಿದ್ದು, ಅಲ್ಲು ಸಹ ಒಂದು (ಎಸ್‌ಟಿಪಿ) ಸ್ಥಾಪಿಸಬೇಕೆಂಬ ಸಲಹೆಯು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳ ವಲಯದಿಂದ ತರಲಾಗಿತ್ತು.

7. ನಗರದಲ್ಲಿರುವ ಕೆರೆಗಳಲ್ಲಿ ನೀರನ್ನು ತುಂಬಿಸುವ ಸಲುವಾಗಿ ಚರ್ಚಿಸಲಾಗಿದ್ದು, ಅದರಲ್ಲಿ ಹಲವು ಕೆರೆಗಳು ಒತ್ತುವರಿಯಾಗಿದ್ದು, ಇದನ್ನು ಕೂಡಲೆ ತೆರವುಗೊಳಿಸಲು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಎಲ್ಲಾ ಒತ್ತುವರಿಯಾಗಿರುವ ಕೆರೆಗಳನ್ನು ಕೂಡಲೆ ಸರ್ವೆಮಾಡಿ ಜಿಲ್ಲಾಧಿಕಾರಿಗಳು ಹಾಗೂ ಪಾಲಿಕೆ ಆಯುಕ್ತರಿಗೆ ವರದಿ ನೀಡಲು ಉಪ ನಿರ್ದೇಶಕರು, ಭೂ ದಾಖಲೆಗಳ ಇಲಾಖೆಯವರಿಗೆ ಸೂಚಿಸಲಾಗಿತ್ತು.

8. ನಗರದ ಕೆರೆಗಳ ಅಭಿವೃದ್ಧಿ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡಾಗ, ನಗರದಲ್ಲಿ ಒಟ್ಟು 27 ಕೆರೆಗಳಿದ್ದು, ಅದರಲ್ಲಿ 11 ಕೆರೆಗಳು ಪಾಲಿಕೆ ವ್ಯಾಪ್ತಿಗೆ ಬರುತ್ತದೆ, ಇವುಗಳಲ್ಲಿ ವಿಸ್ತೀರ್ಣ ಬಗ್ಗೆ ಈಗಾಗಲೇ

ಸರ್ವೇ ಕಾರ್ಯ ನಡೆಯುತ್ತಿದ್ದು, ಸರಹದ್ದು ಗುರುತಿನ ಕಲ್ಲುಗಳನ್ನು ನೀಡಬೇಕಾಗಿರುತ್ತದೆ. **ಆದರೆ ಜಿಲ್ಲೆಯಲ್ಲಿ ಭೂದಾಖಲಾತಿ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ಕಂದಾಯ ಇಲಾಖೆ ಕಾರ್ಯದರ್ಶಿಗಳಿಗೆ ಹೆಚ್ಚುವರಿ ಸಿಬ್ಬಂದಿ ನೀಡಲು ಕೋರಲಾಗಿದೆ. ಅದೇ ರೀತಿ ಸಣ್ಣ ನೀರಾವರಿ ಇಲಾಖೆ ವತಿಯಿಂದ ಎಸ್.ಟಿ.ಪಿ.ಯನ್ನು ನಿರ್ಮಿಸಲು ಕೋರಲಾಗಿದೆ.** ಆದ್ದರಿಂದ, ಈಗಾಗಲೇ ಉತ್ತರ ಕರ್ನಾಟಕದಲ್ಲಿ ಭಾರೀ ಮಳೆ ಬಂದು ಪ್ರವಾಹ ಪರಿಸ್ಥಿತಿ ಬಂದಿರುವುದರಿಂದ ಇಲ್ಲೂ ಸಹ ಭಾರೀ ಮಳೆ ಬಂದರೆ ಹಾನಿಯಾಗುವುದನ್ನು ನಿಯಂತ್ರಿಸಲು ಮುಂಜಾಗ್ರತೆ ಕ್ರಮ ವಹಿಸಲು ಆಯುಕ್ತರಿಗೆ ಸೂಚಿಸಲಾಗಿತ್ತು.

9. ಸ್ಮಾರ್ಟ್ ಸಿಟಿ ಯೋಜನೆಯಡಿ ಅಭಿವೃದ್ಧಿಪಡಿಸುತ್ತಿರುವ ಸ್ಮಾರ್ಟ್ ರಸ್ತೆಗಳ ಪ್ರಗತಿ ಕುಂಠಿತವಾಗಿದ್ದು ಈ ವಿಷಯವು ಸಂಬಂಧಪಟ್ಟ ಅಭಿಯಂತರರಿಗೆ ಪ್ರಶ್ನಿಸಿದಾಗ, ಕರ್ನಾಟಕ ನಗರ ನೀರು ಸರಬರಾಜು ಹಾಗೂ **ಒಳಚರಂಡಿ ಮಂಡಳಿ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ 24x7 ಯೋಜನೆಗೆ ಎಲ್ಲಾ ರಸ್ತೆಗಳಲ್ಲಿಯೂ ಪೈಪ್‌ಗಳನ್ನು ಅಳವಡಿಸಿಕೊಡಬೇಕೆಂದು ಕಾರ್ಯಪಾಲಕ ಅಭಿಯಂತರರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರನ್ನು ಸೂಚಿಸಲಾಗಿತ್ತು.** ಒಟ್ಟು ನಗರದಲ್ಲಿ 24x7 ನೀರಿನ ಸೌಲಭ್ಯ ಕಲ್ಪಿಸಲು 37 over head tanks ಗಳಿದ್ದು ಅದರಲ್ಲಿ ಒಟ್ಟು 18 over head tanks ಗಳನ್ನು ಮುಂಬರುವ ಮಾರ್ಚ್ ಮಾಹೆಯೊಳಗೆ ಸಿದ್ಧಪಡಿಸಲಾಗುತ್ತದೆ ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿಕಾರಿಗಳು ಸ್ಪಷ್ಟನೆ ನೀಡಿದರು.

10. ಮಧ್ಯಾಹ್ನ 2.30 ಗಂಟೆಗೆ ಪಾಲಿಕೆ ಆಯುಕ್ತರು ಹಾಗೂ ಸ್ಮಾರ್ಟ್ ಸಿಟಿ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಟಿ. ಭೂಬಾಲನ್, ಉಪ ಆಯುಕ್ತರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಭಿಯಂತರರು ಹಾಗೂ ಇತರ ಅಧಿಕಾರಿಗಳೊಂದಿಗೆ **ಬುಗುಡನಹಳ್ಳಿ ಕೆರೆಗೆ ಹರಿದು ಬಂದಿರುವ ಹೇಮಾವತಿ ನೀರನ್ನು ವೀಕ್ಷಿಸಿ ಕೈಗೊಂಡಿರುವ ಕ್ರಮಗಳ ಬಗ್ಗೆ ಸ್ಥಳ ಪರಿಶೀಲನೆಗೆ ತೆರಳಲಾಯಿತು.** ಬುಗುಡನಹಳ್ಳಿಯಿಂದ ಅಮಾನಿಕೆರೆಗೆ ಹರಿದು ಬರಬೇಕಾಗಿರುವ ಹೇಮಾವತಿ ನೀರಿಗೆ ಯಾವುದೇ ಒತ್ತುವರಿ ಇದ್ದಲ್ಲಿ ಕೂಡಲೇ ಕ್ರಮಕೈಗೊಳ್ಳುವಂತೆ ಸ್ಥಳಕ್ಕೆ ಆಗಮಿಸಿದ್ದ ಉಪ ಆಯುಕ್ತರಿಗೆ ಸೂಚಿಸಲಾಯಿತು. ಹೇಮಾವತಿ ನೀರು ಕೆರೆಗೆ ಬರುವ ಕಾಲುವೆಗಳು ನದುರಸ್ಥಿ ಇದ್ದು ಮಣ್ಣು ಕೊಚ್ಚಿಕೊಂಡು ನೀರು ಕೆರೆಗೆ ಬಂದಿರುವುದರಿಂದ ತುರ್ತಾಗಿ ನಗರಕ್ಕೆ ಕುಡಿಯುವ ನೀರು ನೀಡಲು ತೊಂದರೆಯಾಗಿರುತ್ತದೆ. ಬೃಹತ್ ನೀರಾವರಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಕಾಲುವೆ ದುರಸ್ಥಿಗಾಗಿ ಕ್ರಮವಹಿಸಲು ಕೋರಲಾಗಿದೆ. **ಅಲ್ಲದೆ, ಬುಗುಡನಹಳ್ಳಿ ಪಕ್ಕದಲ್ಲಿ ಇರುವ ಹೆಬ್ಬಾಕ ಕೆರೆಗೆ ನೀರು ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಕೆರೆಯ ತಳಭಾಗದಲ್ಲಿ ನೀರು ಇಂಗಿಹೋಗುತ್ತದೆ. ಅದಕ್ಕೆ ಕೆರೆಯ ತಳಭಾಗವನ್ನು ನೀರು ಇಂಗುಹೋಗದಂತೆ ಕ್ರಮವಹಿಸಲು KUWS ಗೆ ಕೋರಲಾಗಿದೆ.**

11. ಮಧ್ಯಾಹ್ನ 4.30 ಗಂಟೆಗೆ ತುಮಕೂರು ಸ್ಮಾರ್ಟ್ ಸಿಟಿ ವತಿಯಿಂದ ಹಾಗೂ ತುಮಕೂರು ವಿಶ್ವ ವಿದ್ಯಾನಿಲಯದ ಸಹಯೋಗದೊಂದಿಗೆ ಅನುಷ್ಠಾನಗೊಳ್ಳುತ್ತಿರುವ ಸ್ಕಿಲ್ ಸಿಟಿ ಯೋಜನೆಯ Memorandum of Understanding (MOU) ಒಪ್ಪಂದದ ಪತ್ರಕ್ಕೆ ಸಹಿ ಮಾಡಲಾಗಿರುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ನರಸಾಪುರ ಕೈಗಾರಿಕೆ ಕೇಂದ್ರದಲ್ಲಿ ಬರತಕ್ಕಂತ ಕೈಗಾರಿಕೆಗಳಿಗೆ ಬೇಕಾಗಿರುವ ಕೆಳಕಂಡವುಗಳೊಂದಿಗೆ ಕೌಶಲ್ಯಾಭಿವೃದ್ಧಿ ಮಾಡಲಾಗುತ್ತದೆ.

| | |
|---|---|
| Food Products | 12,100 |
| Textile and Apparels | 19,800 |
| Electronics | 4,800 |
| Auto & Auto Components | 6,200 |
| Other Transport Equipments | 2,500 |
| Pharmaceuticals | 1,300 |
| Chemicals | - |
| Engineering | 3,900 |
| General Industries | 15,700 |
| Total Industrial Employment | 66,300 |
| Permanent Service Jobs | 16,600 |
| **Total Employment** | 82,900 |

ತಮ್ಮ ಅವಗಾಹನೆಗೆ ಸಲ್ಲಿಸಿದೆ.

(ಡಾ. ಶಾಲಿನಿ ರಜನೀಶ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ ಹಾಗೂ
ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಡಾ॥ ಶಾಲಿನಿ ರಜನೀಶ್,** ಭಾ.ಆ.ಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ, ತುಮಕೂರು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ
**ಅಧ್ಯಕ್ಷರು,**
ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.

**ಕೊಠಡಿ ಸಂಖ್ಯೆ:** 701, 7ನೇ ಮಹಡಿ, 3ನೇ ಹಂತ,
ಬಹುಮಹಡಿ ಕಟ್ಟಡ, ಬೆಂಗಳೂರು – 560001.
**ದೂರವಾಣಿ ಸಂಖ್ಯೆ:** 080–22252352 / 22032726,
**ಫ್ಯಾಕ್ಸ್:** 080–22371454.
ಇ-ಮೇಲ್: prsplanning@gmail.com
Prs-plg@karnataka.gov.in

---

**ಸಂಖ್ಯೆ: ಯೋಇ/ 197 /ಪ್ರಕಾ/2019** **ದಿ: 16.08.2019**

**ಆತ್ಮೀಯ ಶ್ರೀ ಅಂಜುಮ್ ಪರ್ವೇಜ್ ರವರೇ,**

**ವಿಷಯ:** ತುಮಕೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವ ಬಗ್ಗೆ.

ಉಲ್ಲೇಖ: ತುಮಕೂರು ಮಹಾನಗರ ಪಾಲಿಕೆಯ ಆಯುಕ್ತರ ಪತ್ರ ಸಂಖ್ಯೆ: ತುಮಪಾ/ಸಿಬ್ಬಂದಿ/ಸಿಆರ್–03/ 2019–20; ದಿನಾಂಕ: 14.08.2019.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 13.08.2019 ರಂದು ತುಮಕೂರು ಮಹಾನಗರ ಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ ಲಿಮಿಟೆಡ್ ಯೋಜನೆಗಳ ಪ್ರಗತಿ ಪರಿಶೀಲನ ಸಭೆಯನ್ನು ಪಾಲಿಕೆ ಕಛೇರಿಯಲ್ಲಿ ಕೈಗೊಂಡಿರುತ್ತೇನೆ ಈ ಸಂಬಂಧ ನಗರದಲ್ಲಿ ಸಂಚರಿಸುವಾಗ ರಸ್ತೆಯ ಬದಿಗಳಲ್ಲಿ ಮಣ್ಣಿನರಾಶಿ, ರಾಜಕಾಲುವೆ ಅವ್ಯವಸ್ಥೆ, ನಗರದಲ್ಲಿ ಹಲವೆಡೆ ತೆರೆದ ಚರಂಡಿಗಳ ಅಸಮರ್ಪಕ ನಿರ್ವಹಣೆ ಹಾಗೂ ಇತರೆ ಅವ್ಯವಸ್ಥೆಗಳ ಬಗ್ಗೆ ಚಿತ್ರ ಸೆರೆಹಿಡಿದಿದ್ದು, ಸಭೆಯಲ್ಲಿ ಈ ಅವ್ಯವಸ್ಥೆಗೆ ಸಂಬಂಧಿಸಿದಂತೆ ತುಮಕೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರಾದ ಶ್ರೀ ತಿಪ್ಪೆರುದ್ರಪ್ಪ ರವರನ್ನು ಪ್ರಶ್ನಿಸಿದಾಗ ಬೇಜವಾಬ್ದಾರಿಯಿಂದ ಉತ್ತರಿಸಿ ತಮಗೆ ಸಂಬಂಧವೇ ಇಲ್ಲವೆಂಬುದರ ಹಾಗೆ ನಡೆದುಕೊಂಡಿದ್ದರು.

ಮುಂದುವರೆದು, ಶ್ರೀ ತಿಪ್ಪೆರುದ್ರಪ್ಪ ರವರು ತುಮಕೂರು ಮಹಾನಗರ ಪಾಲಿಕೆಯಲ್ಲೆ ಸರಿಸುಮಾರು 3 ವರ್ಷದಿಂದ ಕಾರ್ಯಪಾಲಕ ಅಭಿಯಂತರರಾಗಿಯೇ ವಾಸ್ತವ್ಯ ಹೂಡಿದ್ದಲ್ಲದೆ ಅಧೀಕ್ಷಕ ಅಭಿಯಂತರರಾಗಿಯು ಸಹ ಹೆಚ್ಚುವರಿ ಪ್ರಭಾರದಲ್ಲಿರುತ್ತಾರೆ. ಇವರಿಂದ ಯಾವುದೇ ರೀತಿ ನಗರದಲ್ಲಿ ಆಗುತ್ತಿರುವ ಸಮಸ್ಯೆಗಳಿಗೆ ಉಪಯೋಗವಾಗಿರುವುದಿಲ್ಲ. ಪ್ರಸ್ತುತ ಈತನಿಗೆ ಈಗಾಗಲೇ ಮಹಾನಗರ ಪಾಲಿಕೆ ವತಿಯಿಂದ ಕಾರಣ ಕೇಳಿ ನೋಟಿಸ್‌ನ್ನು ದಿನಾಂಕ: 13.06.2019 ರಂದು ಜಾರಿ ಮಾಡಿದ್ದರೂ ಸಹ ಕಾರ್ಯವೈಖರಿಯಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ. ಸದರಿ ಅಧಿಕಾರಿಯವರ ಬೇಜವಾಬ್ದಾರಿ ಕೆಲಸ ನಿರ್ವಹಿಸಿರುವುದರ ವಿರುದ್ಧ ಶಿಸ್ತಿನ ಕ್ರಮ ಕೈಗೊಂಡು ವರದಿ ಸಲ್ಲಿಸಿವಂತೆ ಆಯುಕ್ತರು, ತುಮಕೂರು ಮಹಾನಗರ ಪಾಲಿಕೆ ಇವರಿಗೆ ಸೂಚಿಸಿದ್ದು, ಅದರಂತೆ ಉಲ್ಲೇಖ ಪತ್ರದಲ್ಲಿ ಪೂರಕ ವರದಿಯನ್ನು ಕಛೇರಿಗೆ ಸಲ್ಲಿಸಿರುತ್ತಾರೆ. ಆದ್ದರಿಂದ, ಈ ಎಲ್ಲಾ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ ಇತನನ್ನು ಕೂಡಲೇ ಸೇವೆಯಿಂದ ಅಮಾನತುಗೊಳಿಸಿ ಸದರಿಯವರ ಜಾಗಕ್ಕೆ ಪ್ರಾಮಾಣಿಕ ಹಾಗೂ ದಕ್ಷತೆಯಿಂದ ಕೆಲಸ ನಿರ್ವಹಿಸುವಂತಹ ಅಧೀಕ್ಷಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರನ್ನು ನಿಯೋಜಿಸಲು ಈ ಮೂಲಕ ಕೋರಲಾಗಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

ಶ್ರೀ ಅಂಜುಮ್ ಪರ್ವೇಜ್ ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

16/8/2019

16/08/19

ತುಮಕೂರು ಮಹಾನಗರಪಾಲಿಕೆ, ತುಮಕೂರು

ವೆಬ್‌ಸೈಟ್ : www.tumkurcity.mrc.gov.in ದೂರವಾಣಿ : 2278480, ಫ್ಯಾಕ್ಸ್ 2275106

ಇಮೇಲ್ : itstaff_ulb_tumkur@yahoo.com ಸಾರ್ವಜನಿಕ : 0816-2271200, 2272200

ಸಂಖ್ಯೆ:ತುಮಪಾ/ಸಿಬ್ಬಂದಿ/ಸಿಆರ್-03/2019-20 ದಿನಾಂಕ14.08.2019

ಇವರಿಗೆ
ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಹುಮಹಡಿಗಳ ಕಟ್ಟಡ, ಬೆಂಗಳೂರು-01

ಮಾನ್ಯರೆ,

ವಿಷಯ: ಶ್ರೀ ತಿಪ್ಪೇರುದ್ರಪ್ಪ.ಬಿ ಕಾರ್ಯಪಾಲಕ ಅಭಿಯಂತರರು, ಇವರ ವಿರುದ್ಧ ಕ್ರಮ ಜರುಗಿಸುವ ಬಗ್ಗೆ.

ಉಲ್ಲೇಖ: 1) ಮಂಡಳಿ ಕಾರ್ಯದರ್ಶಿ, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ಇವರ ಪತ್ರ ಸಂಖ್ಯೆ:ತುಸ್ಮಾಸಿ/ಆಶಾ/2019-20 ದಿ:14.08.2019
2) ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ತುಮಕೂರು ಇವರ ಸಭಾ ನಡವಳಿ ದಿನಾಂಕ:13.08.2019

****

ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 13.08.2019 ರಂದು ತಮ್ಮ ಅಧ್ಯಕ್ಷತೆಯಲ್ಲಿ ತುಮಕೂರು ಮಹಾನಗರ ಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ ಲಿಮಿಟೆಡ್ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ಮಹಾನಗರಪಾಲಿಕೆ ಕಛೇರಿಯಲ್ಲಿ ಕೈಗೊಳ್ಳಲಾಗಿದ್ದು, ಈ ಸಂಬಂಧ ನಗರದಲ್ಲಿ ಸಂಚರಿಸುವಾಗ ರಸ್ತೆಯ ಬದಿಗಳಲ್ಲಿ ಮಣ್ಣಿನ ರಾಶಿ, ರಾಜಕಾಲುವೆ ಅವ್ಯವಸ್ಥೆ, ನಗರದ ಹಲವೆಡೆ ತೆರೆದ ಚರಂಡಿಗಳ ಅಸಮರ್ಪಕ ನಿರ್ವಹಣೆ ಹಾಗೂ ಇತರೆ ಅವ್ಯವಸ್ಥೆಗಳ ಬಗ್ಗೆ ಚಿತ್ರ ಸೆರೆಹಿಡಿದು, ಸಭೆಯಲ್ಲಿ ಈ ಅವ್ಯವಸ್ಥೆಗೆ ಸಂಬಂಧಿಸಿದಂತೆ ತುಮಕೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರಾದ ಶ್ರೀ ತಿಪ್ಪೇರುದ್ರಪ್ಪ ಇವರನ್ನು ಪ್ರಶ್ನಿಸಿದಾಗ ಬೇಜವಾಬ್ದಾರಿಯಿಂದ ಉತ್ತರಿಸಿ ಸದರಿಯವರಿಗೆ ಈ ಕುರಿತು ಸಂಬಂಧವೇ ಇಲ್ಲವೆಂಬುದರ ಹಾಗೆ ನಡೆದುಕೊಂಡಿರುವ ಕಾರಣ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಉಲ್ಲೇಖ(1)ರಂತೆ ಪತ್ರ ಸ್ವೀಕೃತವಾಗಿರುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಸದರಿಯವರಿಗೆ ಈ ಕಛೇರಿಯಿಂದ ಕಾರಣ ಕೇಳಿ ನೋಟೀಸನ್ನು ಈ ಹಿಂದೆಯೇ ದಿನಾಂಕ:13.06.2019ರಂದು ಜಾರಿ ಮಾಡಲಾಗಿರುತ್ತದೆ, ಮುಂದುವರೆದು ಸದರಿಯವರು ಗ್ರೂಪ್-ಎ ಅಧಿಕಾರಿಯಾಗಿದ್ದು, ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಕ್ಷಮ ಪ್ರಾಧಿಕಾರವು ಸರ್ಕಾರವಾಗಿರುವುದರಿಂದ ಈ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಮುಂದಿನ ಕ್ರಮಕ್ಕಾಗಿ ಶಿಫಾರಸ್ಸು ಮಾಡಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಆಯುಕ್ತರು,
ತುಮಕೂರು ಮಹಾನಗರಪಾಲಿಕೆ,
ತುಮಕೂರು.

E/All types of Letter/UD Letters

ತುಮಕೂರು ಮಹಾನಗರಪಾಲಿಕೆ, ತುಮಕೂರು
ವೆಬ್‌ಸೈಟ್ : www.tumkurcity.mrc.gov.in ದೂರವಾಣಿ : 2278480, ಫ್ಯಾಕ್ಸ್ 2275106
ಇಮೇಲ್ : itstaff_ulb_tumkur@yahoo.com ಸಾರ್ವಜನಿಕ : 0816-2271200, 2272200

ಸಂಖ್ಯೆ:ತುಮಪಾ/ಸಿಬ್ಬಂದಿ/ಸಿಆರ್-01/2019-20 ದಿನಾಂಕ14.08.2019

ಇವರಿಗೆ

RPAD

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಹುಮಹಡಿಗಳ ಕಟ್ಟಡ, ಬೆಂಗಳೂರು-01

ಮಾನ್ಯರೆ,

ವಿಷಯ: ತುಮಕೂರು ಮಹಾನಗರಪಾಲಿಕೆಯಲ್ಲಿ ಖಾಲಿ ಇರುವ ಸರ್ವೇ ಸೂಪರ್‌ವೈಸರ್, ಸರ್ವೇಯರ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 154 ಎಂ.ಎಲ್.ಆರ್ 2013 ದಿನಾಂಕ:28.12.2013
2) ಸರ್ಕಾರದ ಸುತ್ತೋಲೆ ಸಂಖ್ಯೆ:ಯುಡಿಡಿ 100 ಎಮ್‌ಎನ್‌ಇ 2016 ದಿನಾಂಕ:17.04.2017
3) ಹಿರಿಯ ಲೆಕ್ಕ ಪರಿಶೋಧನಾಧಿಕಾರಿಗಳು ಮಹಾಲೇಖಪಾಲರ ಕಚೇರಿ, ಬೆಂಗಳೂರು ಇವರ ಆಡಿಟ್ ಆಕ್ಷೇಪಣೆ ಸಂಖ್ಯೆ: 40 ದಿ:01.06.2019
4) ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ತುಮಕೂರು ಇವರ ಸಭಾ ನಡವಳಿ ದಿನಾಂಕ:13.08.2019

****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅಧಿಸೂಚನೆಯಂತೆ ತುಮಕೂರು ನಗರಸಭೆಯನ್ನು ಮಹಾನಗರಪಾಲಿಕೆಯಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ. ಉಲ್ಲೇಖ(2)ರ ಅಧಿಸೂಚನೆಯಂತೆ ಮಹಾನಗರಪಾಲಿಕೆಯ ವೃಂದ ಮತ್ತು ನೇಮಕಾತಿ (ಸಿ & ಆರ್)ಅನ್ನು ರಚಿಸಿ ರಾಜ್ಯದ ಮಹಾನಗರಪಾಲಿಕೆಗಳಿಗೆ ಅವಶ್ಯಕವಾಗಿರುವ ಹುದ್ದೆಗಳನ್ನು ಸೃಜಿಸಿ ಆದೇಶಿಸಲಾಗಿದೆ. ಈ ಆದೇಶದಂತೆ **G-4** ಶ್ರೇಣಿಯ ತುಮಕೂರು ಮಹಾನಗರಪಾಲಿಕೆಗೆ ವಿವಿಧ ವೃಂದದ ಅಧಿಕಾರಿ / ನೌಕರರ ಹುದ್ದೆಗಳನ್ನು ಮಂಜೂರು ಮಾಡಿದ್ದು, ಈ ಹುದ್ದೆಗಳಲ್ಲಿ ಸರ್ವೆ ಸೂಪರ್‌ವೈಸರ್ ಹಾಗೂ ಸರ್ವೇಯರ್ ಹುದ್ದೆಗಳು ಖಾಲಿ ಇರುತ್ತವೆ. ಈ ಬಗ್ಗೆ ಉಲ್ಲೇಖ(3)ರಂತೆ ಆಡಿಟ್ ಆಕ್ಷೇಪಣೆ ಸಹ ವ್ಯಕ್ತವಾಗಿರುತ್ತದೆ. ಕರ್ನಾಟಕ ಮಹಾನಗರಪಾಲಿಕೆಗಳ (ಅಧಿಕಾರಿ ಮತ್ತು ನೌಕರರ ಏಕರೂಪ ನೇಮಕಾತಿ) ನಿಯಮ 2010ರಂತೆ ಈ ಕಛೇರಿಗೆ ಈ ಕೆಳಕಂಡಂತೆ ಸರ್ವೆ ಸೂಪರ್‌ವೈಸರ್ ಹಾಗೂ ಸರ್ವೇಯರ್ ಹುದ್ದೆಗಳನ್ನು ಸರ್ಕಾರದ ವತಿಯಿಂದ ಭರ್ತಿ ಮಾಡಬೇಕಾಗಿರುತ್ತದೆ.

| ಕ್ರ.ಸಂ | ಹುದ್ದೆಯ ಹೆಸರು | ವೃಂದ | ಮಂಜೂರಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1. | ಸರ್ವೇ ಸೂಪರ್‌ವೈಸರ್ | ಸಿ | 02 | **02** |
| 2. | ಸರ್ವೇಯರ್ | ಸಿ | 03 | **03** |

ಮಹಾನಗರಪಾಲಿಕೆಯ ಆಸ್ತಿಗಳು, ಕೆರೆಗಳು, ರಾಜಕಾಲುವೆ ಇತ್ಯಾದಿ ಸಾರ್ವಜನಿಕ ಆಸ್ತಿಗಳ ಒತ್ತುವರಿಯು ಪದೇ ಪದೇ ಆಗುತ್ತಿದ್ದು ಈ ಒತ್ತುವರಿ ತೆರವುಗೊಳಿಸಿ ಆಸ್ತಿಗಳನ್ನು ಬಂದೋಬಸ್ತ್ ಮಾಡಬೇಕಿರುತ್ತದೆ. ಸಿವಿಲ್ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಸಲ್ಲಿಕೆಯಾಗುತ್ತಿದ್ದು 200ಕ್ಕೂ ಅಧಿಕ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ ಈ ಪ್ರಕರಣಗಳ ಕುರಿತಂತೆ ಘನ ಹೈಕೋರ್ಟ್ ಮತ್ತು ಸ್ಥಳೀಯ ನ್ಯಾಯಾಲಯಗಳಿಂದ ವರದಿ ನೀಡಲು ಸೂಚಿಸುತ್ತಿರುವ ಕಾರಣ ಈ ಕುರಿತು ಸರ್ವೆ ನಡೆಸಿ ವರದಿ ನೀಡಲು ಸರ್ವೆ ಸೂಪರ್‌ವೈಸರ್ ಹಾಗೂ ಸರ್ವೇಯರ್ ಹುದ್ದೆಗಳು ಅತ್ಯಾವಶ್ಯಕವಾಗಿದ್ದು, ಈ ಹುದ್ದೆಗಳು ಖಾಲಿ ಇರುವುದರಿಂದ ಕಚೇರಿಯ ಕೆಲಸ ಕಾರ್ಯಗಳಿಗೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ತೊಂದರೆ ಮತ್ತು ವಿಳಂಬ ಉಂಟಾಗುತ್ತಿರುತ್ತದೆ. ಇದರಿಂದಾಗಿ ನ್ಯಾಯಾಂಗ ನಿಂದನೆ ಪ್ರಕರಣಗಳು ದಾಖಲಾಗುತ್ತಿರುತ್ತವೆ. -2)

ತುಮಕೂರು ಮಹಾನಗರಪಾಲಿಕೆಯ ಆಡಳಿತ ವ್ಯವಸ್ಥೆಯನ್ನು ಸುಗಮಗೊಳಿಸಲು, ಪಾಲಿಕೆ ಆಸ್ತಿಗಳ ರಕ್ಷಣೆಗಾಗಿ ಹಾಗೂ ಅಭಿವೃದ್ಧಿ ಕೆಲಸಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಈ ಮೇಲ್ಕಂಡಂತೆ ಖಾಲಿ ಇರುವ ಹುದ್ದೆಗಳಿಗೆ ಶೀಘ್ರವಾಗಿ ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಿಂದ ನಿಯೋಜನೆ ಮೂಲಕ ಭರ್ತಿ ಮಾಡಲು ಈ ಮೂಲಕ ತಮ್ಮಲ್ಲಿ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಆಯುಕ್ತರು,
ತುಮಕೂರು ಮಹಾನಗರಪಾಲಿಕೆ,
ತುಮಕೂರು.

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:**

1) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2) ಮಾನ್ಯ ಆಯುಕ್ತರು, ಭೂ ಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಕೆ ಆರ್ ವೃತ್ತ, ಬೆಂಗಳೂರು
2) ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.
3) ಉಪ ನಿರ್ದೇಶಕರು, ಭೂ ದಾಖಲೆಗಳ ಇಲಾಖೆ, ತುಮಕೂರು.

ತುಮಕೂರು ಮಹಾನಗರಪಾಲಿಕೆ, ತುಮಕೂರು
ವೆಬ್‌ಸೈಟ್ : www.tumkurcity.mrc.gov.in ದೂರವಾಣಿ : 2278480, ಫ್ಯಾಕ್ಸ್ 2275106
ಇಮೇಲ್ : itstaff_ulb_tumkur@yahoo.com ಸಾರ್ವಜನಿಕ : 0816-2271200, 2272200

ಸಂಖ್ಯೆ:ತುಮಪಾ/ಸಿಬ್ಬಂದಿ/ಸಿಆರ್-01/2019-20 ದಿನಾಂಕ14.08.2019

RPAD

ಇವರಿಗೆ
ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಹುಮಹಡಿಗಳ ಕಟ್ಟಡ, ಬೆಂಗಳೂರು-01

ಮಾನ್ಯರೆ,

ವಿಷಯ: ತುಮಕೂರು ಮಹಾನಗರಪಾಲಿಕೆಯ ಇಂಜಿನಿಯರಿಂಗ್ ಶಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 154 ಎಂ.ಎಲ್.ಆರ್ 2013 ದಿನಾಂಕ:28.12.2013
2) ಸರ್ಕಾರದ ಸುತ್ತೋಲೆ ಸಂಖ್ಯೆ:ಯುಡಿಡಿ 100 ಎಮ್‌ಎನ್‌ಇ 2016 ದಿನಾಂಕ:17.04.2017
3) ಹಿರಿಯ ಲೆಕ್ಕ ಪರಿಶೋಧನಾಧಿಕಾರಿಗಳು ಮಹಾಲೇಖಪಾಲರ ಕಚೇರಿ, ಬೆಂಗಳೂರು ಇವರ ಆಡಿಟ್ ಆಕ್ಷೇಪಣೆ ಸಂಖ್ಯೆ: 40 ದಿ:01.06.2019
4) ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ತುಮಕೂರು ಇವರ ಸಭಾ ನಡವಳಿ ದಿನಾಂಕ:13.08.2019

****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅಧಿಸೂಚನೆಯಂತೆ ತುಮಕೂರು ನಗರಸಭೆಯನ್ನು ಮಹಾನಗರಪಾಲಿಕೆಯಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ. ಉಲ್ಲೇಖ(2)ರ ಅಧಿಸೂಚನೆಯಂತೆ ಮಹಾನಗರಪಾಲಿಕೆಯ ವೃಂದ ಮತ್ತು ನೇಮಕಾತಿ (ಸಿ & ಆರ್)ಅನ್ನು ರಚಿಸಿ ರಾಜ್ಯದ ಮಹಾನಗರಪಾಲಿಕೆಗಳಿಗೆ ಅವಶ್ಯಕವಾಗಿರುವ ಹುದ್ದೆಗಳನ್ನು ಸೃಜಿಸಿ ಆದೇಶಿಸಲಾಗಿದೆ. ಈ ಆದೇಶದಂತೆ **G-4** ಶ್ರೇಣಿಯ ತುಮಕೂರು ಮಹಾನಗರಪಾಲಿಕೆಗೆ ವಿವಿಧ ವೃಂದದ ಅಧಿಕಾರಿ / ನೌಕರರ ಹುದ್ದೆಗಳನ್ನು ಮಂಜೂರು ಮಾಡಿದ್ದು, ಈ ಹುದ್ದೆಗಳಲ್ಲಿ ಇಂಜಿನಿಯರಿಂಗ್ ಶಾಖೆಯ ಹಲವು ಹುದ್ದೆಗಳು ಖಾಲಿ ಇರುತ್ತವೆ.

ಈ ಬಗ್ಗೆ ಉಲ್ಲೇಖ(3)ರಂತೆ ಆಡಿಟ್ ಆಕ್ಷೇಪಣೆ ಸಹ ವ್ಯಕ್ತವಾಗಿರುತ್ತದೆ. ಕರ್ನಾಟಕ ಮಹಾನಗರಪಾಲಿಕೆಗಳ (ಅಧಿಕಾರಿ ಮತ್ತು ನೌಕರರ ಏಕರೂಪ ನೇಮಕಾತಿ) ನಿಯಮ 2010ರಂತೆ ಈ ಕಛೇರಿಗೆ ಅವಶ್ಯವಿರುವ ಹುದ್ದೆಗಳನ್ನು ಸರ್ಕಾರದ ವತಿಯಿಂದ ಭರ್ತಿ ಮಾಡಬೇಕಾಗಿರುತ್ತದೆ. ಸಾರ್ವಜನಿಕ ಮತ್ತು ಆಡಳಿತ ಹಿತದೃಷ್ಟಿಯಿಂದ ಮುಂದಿನ ಪಟ್ಟಿಯಲ್ಲಿ ವಿವರಿಸಿರುವ ಹುದ್ದೆಗಳು ಅತ್ಯಾವಶ್ಯಕವಾಗಿದ್ದು, ಈ ಹುದ್ದೆಗಳು ಖಾಲಿ ಇರುವುದರಿಂದ ಕಚೇರಿಯ ಕೆಲಸ ಕಾರ್ಯಗಳಿಗೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ತೊಂದರೆ ಮತ್ತು ವಿಳಂಬ ಉಂಟಾಗುತ್ತಿರುತ್ತದೆ.

| ಕ್ರಸಂ | ಹುದ್ದೆಯ ಹೆಸರು | ವೃಂದ | ಮಂಜೂರಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1. | ಅಧೀಕ್ಷಕ ಅಭಿಯಂತರರು(Civil) | ಎ | 01 | **01** |
| 2. | ಕಾರ್ಯಪಾಲಕ ಅಭಿಯಂತರರು(Electrical) | ಎ | 01 | **01** |
| 3. | ಸಹಾಯಕ ಕಾರ್ಯಪಾಲಕ ಅಭಿಯಂತರರು (Civil/UGD/Water Supply) | ಎ | 07 | **03** |
| 4. | ಸಹಾಯಕ ಕಾರ್ಯಪಾಲಕ ಅಭಿಯಂತರರು (Environmental) | ಎ | 01 | **01** |

-2)

ತುಮಕೂರು ಮಹಾನಗರಪಾಲಿಕೆಯ ಆಡಳಿತ ವ್ಯವಸ್ಥೆಯನ್ನು ಸುಗಮಗೊಳಿಸಲು ಹಾಗೂ ಅಭಿವೃದ್ಧಿ ಕೆಲಸಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಈ ಮೇಲ್ಕಂಡಂತೆ ಖಾಲಿ ಇರುವ ಹುದ್ದೆಗಳಿಗೆ ಶೀಘ್ರವಾಗಿ **PWD** ಮತ್ತು ಇತರೆ ಇಲಾಖೆಗಳಿಂದ ನಿಯೋಜನೆ / ನೇಮಕಾತಿ ಮೂಲಕ ಭರ್ತಿ ಮಾಡಲು ಈ ಮೂಲಕ ತಮ್ಮಲ್ಲಿ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಆಯುಕ್ತರು,
ತುಮಕೂರು ಮಹಾನಗರಪಾಲಿಕೆ,
ತುಮಕೂರು.

**ಪ್ರತಿಯನ್ನು ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ:**

1) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು-01
2) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.


Shot on OnePlus

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 701, 7ನೇ ಮಹಡಿ
3ನೇ ಹಂತ, ಬಹುಮಹಡಿಗಳ ಕಟ್ಟಡ
ಬೆಂಗಳೂರು – 560 001
ದೂ : 080–22252352, 22032726
ಇ–ಮೇಲ್: prsplanning@gmail.com

ಸಂಖ್ಯೆ: ಯೋ:ಇ/296/ಪ್ರಕಾ/2019

ದಿನಾಂಕ: 17.08.2019

ಮಾನ್ಯರೇ,

ತುಮಕೂರು ಜಿಲ್ಲೆಯಲ್ಲಿ ದಿನಾಂಕ: 13.08.2019 ರಂದು ಪ್ರವಾಸ ಮಾಡಿದಾಗ (ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವುದನ್ನು ಹಾಗೂ ಆಯುಕ್ತರು, ತುಮಕೂರು ಮಹಾನಗರಪಾಲಿಕೆರವರ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ). ಸರ್ವೇ ಸೂಪರ್‌ವೈಸರ್ ಹಾಗೂ ಸರ್ವೇಯರ್ ಕೊರತೆಯಿಂದ ಕೆಲಸಗಳು ಆಗುತ್ತಿಲ್ಲವೆಂದು ಸ್ಥಳೀಯ ಜನಪ್ರತಿನಿಧಿಗಳು ದೂರುತ್ತಿದ್ದಾರೆ. ಆದುದರಿಂದ, ಆಯುಕ್ತರ ಪ್ರಸ್ತಾವನೆಯಂತೆ ತಕ್ಷಣದಿಂದ ಖಾಲಿ ಹುದ್ದೆಗಳನ್ನು ತುಂಬಲು ಕೋರಿದೆ.

ಗೌರವಗಳೊಂದಿಗೆ,

ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಆಯುಕ್ತರ ಕಛೇರಿ
19 AUG 2019
ಕರ್ನಾಟಕ ಸರ್ಕಾರ, ಬೆಂಗಳೂರು.

ತಮ್ಮ ವಿಶ್ವಾಸಿ,
ಸಹಿ/–

ಡಾ: ರಾಜಕುಮಾರ್ ಖತ್ರಿ, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಕಂದಾಯ ಇಲಾಖೆ

19/08/19

**ಪ್ರತಿಯನ್ನು:** (1) ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು ಇವರಿಗೆ ಅಗತ್ಯ ಕ್ರಮಕ್ಕಾಗಿ ಕೋರಿದೆ.
(2) ಆಯುಕ್ತರು, ತುಮಕೂರು ಮಹಾನಗರಪಾಲಿಕೆ, ತುಮಕೂರು ಇವರಿಗೆ ಮಾಹಿತಿಗಾಗಿ.

(ಡಾ: ಶಾಲಿನಿ ರಜನೀಶ್)

o/c

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ದಿನಾಂಕ:21-08-2019 ಮತ್ತು 22-08-2019 ರಂದು
ಬಾಗಲಕೋಟೆ ಜಿಲ್ಲೆಯ ಪ್ರವಾಹ ಪೀಡಿತ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದ ನಡವಳಿಗಳು
[ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ]

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1. | ಜಿಲ್ಲೆ ಹೆಸರು | ಬಾಗಲಕೋಟೆ |
| 2. | ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಶ್ರೀ ತುಷಾರ್ ಗಿರಿ ನಾಥ್ ಭಾ.ಆ.ಸೇ |
| 3. | ಭೇಟಿಯಾದ / ಪ್ರವಾಸದ ದಿನಾಂಕ | 21-08-2019 ಮತ್ತು 22-08-2019 |
| 4. | | |

ಮುಖ್ಯವಾಗಿ ಗಮನಿಸಿದ ಅಂಶಗಳು

ದಿನಾಂಕ: 21-08-2019 ಹಾಗೂ 22-08-2019 ರಂದು ಸ್ಥಳ ಪರಿಶೀಲನಾ ವಿವರ ಹಾಗೂ ನೀಡಿದ ಸೂಚನೆಗಳು.

- ಬಾದಾಮಿ ತಾಲೂಕಿನಲ್ಲಿ ಪ್ರವಾಹ ಪೀಡಿತ ಬೀರನೂರ ಗ್ರಾಮಕ್ಕೆ ಶ್ರೀ ಕೆ.ಎಸ್. ಈಶ್ವರಪ್ಪ ಮಾನ್ಯ ಸಚಿವರು ಕರ್ನಾಟಕ ಸರಕಾರ ಬೆಂಗಳೂರು ಹಾಗೂ ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ಸಚಿವರು ಕರ್ನಾಟಕ ಸರಕಾರ ಬೆಂಗಳೂರು ಇವರ ನೇತೃತ್ವದಲ್ಲಿ ಸಂತ್ರಸ್ತ ಅರ್ಹ ಫಲಾನುಭವಿಗಳಿಗೆ ಆಹಾರ ಕಿಟ್‌ಗಳ ವಿತರಣಾ ಸಂದರ್ಭಧಲ್ಲಿ ಹಾಜರಿದ್ದು, ಈ ಸಂದರ್ಭದಲ್ಲಿ ಬೀರನೂರ ಗ್ರಾಮದ ಎಲ್ಲಾ ರೈತರ ಬೆಳೆ ಹಾನಿಯಾಗಿದ್ದು ಪರಿಹಾರ ಒದಗಿಸಲು ಅಳಲು ತೋಡಿಕೊಂಡರು. ಈ ಕುರಿತು ಬದಾಮಿ ತಾಲೂಕಿನ ತಹಶೀಲದಾರರಿಗೆ ಸಂತ್ರಸ್ತರ ಸಮಸ್ಯೆಗಳನ್ನು ಕೂಡಲೇ ಪರಿಹರಿಸಲು ಸೂಚಿಸಲಾಯಿತು.

- ಸರ್ಕಾರದ ಆದೇಶದಂತೆ ನಿರಾಶ್ರಿತ ಕುಟುಂಬಗಳಿಗೆ ಪ್ರತಿ ಕುಟುಂಬಕ್ಕೆ 10,000/- ರೂ ರಂತೆ ಬೇಗನೆ ಕೂಡಲು ಸೂಚಿಸಲಾಯಿತು.

- ಸರಕಾರದ ಆದೇಶದಂತೆ ಸಂತ್ರಸ್ತ ಕುಟುಂಬಗಳ ಮನೆ ಸಮೀಕ್ಷೆ ಮಾಡಿ ಕೂಡಲೇ ವರದಿ ಸಲ್ಲಿಸಲು ಸೂಚಿಸಲಾಯಿತು.

- ಪ್ರವಾಹದ ನೀರಿನಿಂದ ಬೆಳೆ ಸಂಪೂರ್ಣ ಹಾನಿಯಾಗಿದ್ದು ದನಕರುಗಳಿಗೆ ಮೇವು ಇಲ್ಲದಂತೆ ಆಗಿದೆ. ಕಾರಣ ದನಕರುಗಳಿಗೆ ಮೇವು ವಿತರಿಸುವಂತೆ ಸಂತ್ರಸ್ತರು ಕೋರಿಕೊಂಡರು. ಉಪ ನಿರ್ದೇಶಕರು. ಪಶು ಸಂಗೋಪನೆ ಇಲಾಖೆ ಇವರಿಗೆ ಈ ಕುರಿತು ಕ್ರಮ ಕೈಗೊಂಡು ದನಕರುಗಳಿಗೆ ಬೇಗನೆ ಮೇವಿನ ವ್ಯವಸ್ಥೆ ಮಾಡಲು ತಿಳಿಸಲಾಯಿತು.

- ಬಾದಾಮಿ ತಾಲೂಕಿನ ಪ್ರವಾಹ ಪೀಡಿತ ಗ್ರಾಮಗಳಲ್ಲಿಯ ಸಂತ್ರಸ್ಥರಿಗೆ ಯಾವುದೇ ರೀತಿ ಆರೋಗ್ಯ ಸಮಸ್ಯೆ ಆಗದಂತೆ ತಾಲುಕಾ ಮಟ್ಟದ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

- ಸಂತ್ರಸ್ತರಿಗೆ ವೈದ್ಯಕೀಯ ಉಪಚಾರಕ್ಕೆ ಸಂಬಂಧಿಸಿದಂತೆ ಎಲ್ಲಾ ಔಷಧಿಗಳು ಹಾಗೂ ಲಸಿಕೆಗಳು ತ್ವರಿತಗತಿಯಲ್ಲಿ ಆರೋಗ್ಯ ಕೇಂದ್ರಗಳಿಗೆ ಹಾಗೂ ಪರಿಹಾರ ಕೇಂದ್ರಗಳಿಗೆ ತಲುಪಿಸುವ ವ್ಯವಸ್ಥೆ ಮಾಡಲು ತಾಲುಕಾ ಮಟ್ಟದ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

- ಬಾದಾಮಿ ತಾಲೂಕಿನ ಪ್ರವಾಹ ಪೀಡಿತ ಗ್ರಾಮಗಳಿಗೆ ಸ್ವಚ್ಛತೆ ಕಾಪಾಡಲು ನೈರ್ಮಲ್ಯ ಆಗದಂತೆ ಹಾಗೂ ಪ್ರವಾಹದ ನೀರು ಕಡಿಮೆ ಆದ ನಂತರ ಗ್ರಾಮಗಳಲ್ಲಿ ಸ್ವಚ್ಛತೆ ಬಗ್ಗೆ ತ್ವರಿತವಾಗಿ

ಕಾರ್ಯವನ್ನು ಮಾಡಲು ಬಾದಾಮಿ ತಾಲೂಕಿನ ಗ್ರಾಮ ಪಂಚಾಯತಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಯಿತು.

- ಬಾದಾಮಿ ತಾಲೂಕಿನ ಪ್ರವಾಹ ಪೀಡಿತ ಗ್ರಾಮಗಳಲ್ಲಿ ವಿದ್ಯುತ್ ಜೋಡಣೆಯ ಸಮಸ್ಯೆಗಳನ್ನು ನೀರಿನ ಮಟ್ಟ ಕಡಿಮೆಯಾದ ನಂತರ ತ್ವರಿತವಾಗಿ ವಿದ್ಯುತ್ ಜೋಡಣೆಯ ಕಾರ್ಯವನ್ನು ಕ್ರಮವಹಿಸಲು ತಾಲೂಕಾ ಮಟ್ಟದ ಹೆಸ್ಕಾಂ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

- ತದ ನಂತರ ಬಾಗಲಕೋಟೆ ಜಿಲ್ಲೆಯ ಜಿಲ್ಲಾ ಪಂಚಾಯತ ಸಭಾ ಭವನದಲ್ಲಿ ಶ್ರೀ ಕೆ.ಎಸ್. ಈಶ್ವರಪ್ಪ ಮಾನ್ಯ ಸಚಿವರು ಕರ್ನಾಟಕ ಸರಕಾರ ಬೆಂಗಳೂರು ಹಾಗೂ ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ಸಚಿವರು ಕರ್ನಾಟಕ ಸರಕಾರ ಬೆಂಗಳೂರು ರವರು ಬಾಗಲಕೋಟೆ ಜಿಲ್ಲೆಯ ಪ್ರವಾಹದ ಪರಸ್ಥಿತಿಯ ಬಗ್ಗೆ ತೆಗೆದುಕೊಂಡ ಸಭೆಯಲ್ಲಿ ಭಾಗವಹಿಸಲಾಯಿತು.

- ಜಿಲ್ಲೆಯಲ್ಲಿರುವ ಮಳೆಯ ಹಾನಿಯಿಂದ ಸಂಪರ್ಕ ರಸ್ತೆಗಳು ಪ್ರವಾಹದಿಂದ ಹಾಳಾಗಿದ್ದು, ಅವುಗಳನ್ನು ಸಂಬಂಧಪಟ್ಟ ಪಿಆರ್‌ಇಡಿ ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಸಮೀಕ್ಷೆ ಮಾಡಿ ದುರಸ್ಥಿ ಕಾರ್ಯವನ್ನು ಕೈಗೊಳ್ಳಲು ಸೂಚಿಸಲಾಯಿತು.

- ಪರಿಹಾರ ಕೇಂದ್ರಗಳನ್ನು ಶಾಲೆಗಳಲ್ಲಿ ನಡೆಸುತ್ತಿದ್ದು ಕೂಡಲೇ ಶೆಡ್ಡುಗಳನ್ನು ನಿರ್ಮಿಸಿ ಶಾಲೆಗಳನ್ನು ಪ್ರಾರಂಭಿಸಲು ಹಾಗೂ ಪ್ರವಾಹದಲ್ಲಿ ಪಠ್ಯಪುಸ್ತಕಗಳನ್ನು ಕಳೆದುಕೊಂಡ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಕೊಡಿಸಲು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಚಿಸಲಾಯಿತು.

- ಈ ಸಭೆಯ ನಂತರ ಶ್ರೀ ಸಿದ್ದರಾಮಯ್ಯ ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಬಾದಾಮಿ ಮತಕ್ಷೇತ್ರ ಶಾಸಕರು ಪ್ರವಾಹದ ಪರಸ್ಥಿತಿಯ ಬಗ್ಗೆ ತೆಗೆದುಕೊಂಡ ಸಭೆಯಲ್ಲಿ ಭಾಗವಹಿಸಲಾಯಿತು.

- ಬದಾಮಿ ಮತಕ್ಷೇತ್ರದ ಪ್ರವಾಹದ ಪೀಡತ 43 ಹಳ್ಳಿಗಳಲ್ಲಿ ಪಟ್ಟದಕಲ್ಲ, ಲಾಯದಗುಂದಿ, ಇಂಜಗನೇರಿ,ಆಲೂರ ಎಸ್ ಪಿ,ನಂದಿಕೇಶ್ವರ, ಶಿರಬಡಗಿ, ಮಂಗಳೂರು, ಗ್ರಾಮಗಳು ತೀವ್ರ ಹಾನಿಗಳಾಗಿದ್ದು ಸದರಿ ಗ್ರಾಮಗಳ ಅರ್ಹ ಸಂತ್ರಸ್ತರಿಗೆ ಪರಿಹಾರ ಒದಗಿಸಲು ಸೂಚಿಸಲಾಯಿತು.

- ಹೆಸ್ಕಾಂ ಅಧಿಕಾರಿಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ನಿರಂತರ ಜ್ಯೋತಿ ಸಂಪರ್ಕ ಒದಿಗಸಲು ಸೂಚಿಸಲಾಯಿತು.

- ಗೋನಾಳ ಎಸ್ ಕೆ ದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಮಾನ್ಯ ಮಾಜಿ ಮುಖ್ಯಂತ್ರಿಗಳು ಹಾಗೂ ಬದಾಮಿ ಶಾಸಕರು ರವರು ಸೂಚಿಸಿದ ಹಿನ್ನೆಲೆಯಲ್ಲಿ ಕಾರ್ಯನಿವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆ ಅಧಿಕಾರಿಗಳಿಗೆ ನೀರಿನ ಸಮಸ್ಯೆಯನ್ನು ಕೂಡಲೇ ಬಗೆಹರಿಸಲು ಸೂಚಿಸಲಾಯಿತು.

- ಹುನಗುಂದ ತಾಲೂಕಿನ ಕೂಡಲಸಂಗಮ ದೇವಸ್ಥಾನವು ಪ್ರವಾಹಕ್ಕೆ ಒಳಗಾಗಿರುವ ಬಗ್ಗೆ ಪರಿಶೀಲಿಸಲಾಗಿ ನೀರಿನ ಮಟ್ಟ ಕಡಿಮೆ ಆದನಂತರ ಪ್ರವಾಸಿಗರಿಗೆ ಹಾಗೂ ಗ್ರಾಮಸ್ಥರಿಗೆ ರೋಗ-ರುಜಿನುಗಳು ಹರಡದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

- ಕೂಡಲಸಂಗಮ ಪರಿಹಾರ ಕೇಂದ್ರಗಳಾದ ಬಸವ ಇಂಟರ್ ನ್ಯಾಶನಲ್ ಸ್ಕೂಲ್ ಹಾಗೂ ಅನುಭವ ಮಂಟಪಕ್ಕೆ ಭೇಟಿ ನೀಡಿ ಆಹಾರ ಗುಣಮಟ್ಟ ಹಾಗೂ ಸ್ವಚ್ಛತೆ ಬಗ್ಗೆ ಪರಿಶೀಲನೆ ಮಾಡಿ ಪರಿಹಾರ ಕೇಂದ್ರದಲ್ಲಿ ಸ್ವಚ್ಛತೆ ಕಾಪಾಡಲು ಸೂಚಿಸಲಾಯಿತು.
- ಜಮಖಂಡಿ ತಾಲೂಕಿನ ಪ್ರವಾಹ ಪೀಡಿತ ಚಿಕ್ಕಪಡಸಲಗಿ ಗ್ರಾಮಕ್ಕೆ ಭೇಟಿ ನೀಡಿ ಪ್ರವಾಹದಿಂದ

| | | |
|---|---|---|
| | | ಚಿಕ್ಕಪಡಸಲಗಿ ಬ್ಯಾರೇಜ ಹತ್ತಿರ ಜಮಖಂಡಿ- ವಿಜಯಪುರ ಮುಖ್ಯ ರಸ್ತೆ ಸೇತುವೆ (ಬ್ರಿಜ್) ಪ್ರವಾಹದಿಂದ ಹಾಳಾಗಿದ್ದು ಸಂಬಂಧಿಸಿದ ಕಾರ್ಯನಿರ್ವಾಹಕ ಇಂಜನೀಯರ್ ಲೋಕೋಪಯೋಗಿ ಇಲಾಖೆ ಇವರಿಗೆ ಕೂಡಲೇ ದುರಸ್ತಿ ಮಾಡಲು ಕ್ರಮ ವಹಿಸಲು ಸೂಚಿಸಲಾಯಿತು.<br>• ಜಮಖಂಡಿ ತಾಲೂಕಿನ ಪ್ರವಾಹ ಪೀಡಿತ ಸನಾಳ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ನೆರೆ ಸಂತ್ರಸ್ತರ ಬಿದ್ದ ಮನೆಗಳ ಪರಿಶೀಲನೆ ಮಾಡಿ ಬಿದ್ದ ಮನೆಗಳ ಸರ್ವೇ ಮಾಡಿ ಬೇಗನೆ ಪರಿಹಾರ ವಿತರಿಸಲು ತಹಶೀಲದಾರ,ಜಮಖಂಡಿ ಇವರಿಗೆ ನಿರ್ದೇಶಿಸಲಾಯಿತು.<br>• ಸನಾಳ ಗ್ರಾಮದ ಗ್ರಾಮಸ್ಥರು ಪ್ರವಾಹದಿಂದ ಬಾಧಿತವಾದ ಮನೆಗಳ ದುರಸ್ಥಿ ಮಾಡಲು ಅಳಲು ತೋಡಿಕೊಂಡರು ಈ ಕುರಿತು ಸಂಬಂಧಿಸಿದ ಲೋಕೋಪಯೋಗಿ ಇಲಾಖೆಯ ಹಾಗೂ ಗ್ರಾಮ ಪಂಚಾಯತಿ ಅಭಿವೃದ್ದಿ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಂಡು ಕೂಡಲೇ ಪರಿಹಾರ ಒದಗಿಸಲು ತಹಶೀಲದಾರ ಇವರಿಗೆ ನಿರ್ದೇಶಿಸಲಾಯಿತು.<br>• ಜಮಖಂಡಿ ತಾಲೂಕಿನ ಪ್ರವಾಹ ಪೀಡಿತ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಜೋಡಣೆಯ ಸಮಸ್ಯೆಯನ್ನು ಕೂಡಲೇ ದುರಸ್ಥಿ ಮಾಡಲು ಸಂಬಂಧಿಸಿದ ಹೆಸ್ಕಾಂ ತಾಲೂಕು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ನಿರ್ದೇಶಿಸಲಾಯಿತು.<br>• ಪ್ರವಾಹ ಪೀಡಿತ ಗ್ರಾಮಗಳಲ್ಲಿ ಸ್ವಚ್ಛತೆ ತ್ವರಿತಗತಿಯಲ್ಲಿ ಕಾರ್ಯವನ್ನು ಮಾಡಲು ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಜಮಖಂಡಿ ಇವರಿಗೆ ಸೂಚಿಸಲಾಯಿತು.<br>• ಪ್ರವಾಹ ಪೀಡಿತ ಗ್ರಾಮಗಳಲ್ಲಿಯ ಸಂತ್ರಸ್ಥರಿಗೆ ಯಾವುದೇ ರೀತಿ ಆರೋಗ್ಯದ ಸಮಸ್ಯೆ ಆಗದಂತೆ ತಾಲೂಕಾ ಮಟ್ಟದ ಹಾಗೂ ಜಿಲ್ಲಾಮಟ್ಟದ ವೈದ್ಯಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಯಿತು.<br>• ಜಮಖಂಡಿ ತಾಲೂಕಿನ ನೆರೆ ಹಾವಳಿಯಿಂದ ಭಾದಿತವಾದ ಗ್ರಾಮಗಳಲ್ಲಿಯ ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಹಾಗೂ ಜಾನುವಾರುಗಳಿಗೆ ಯಾವುದೇ ರೀತಿ ರೋಗ-ರುಜಿನುಗಳು ಹರಡದಂತೆ ನೋಡಿಕೊಳ್ಳಲು ಉಪನಿರ್ದೇಶಕರು, ಪಶು ಸಂಗೋಪನೆ ಇಲಾಖೆ ಹಾಗೂ ಸಹಾಯಕ ನಿರ್ದೇಶಕರು ಪಶು ಸಂಗೋಪನೆ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. |

(ತುಷಾರ್ ಗಿರಿ ನಾಥ್)

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ದಿನಾಂಕ:-**25-08-2019** ಹಾಗೂ **26-08-2019** ರಂದು ಬಾಗಲಕೋಟೆ ಜಿಲ್ಲೆಯ ಪ್ರವಾಹ ಭಾದಿತ ಸ್ಥಳಗಳಿಗೆ ಕೇಂದ್ರ ತಂಡದ ಜೊತೆ ಭೇಟಿ ನೀಡಿ ಪರಿಶೀಲನೆ ಮಾಡಿದ ನಡವಳಿಗಳು

[ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ]

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1. | ಜಿಲ್ಲೆ ಹೆಸರು | ಬಾಗಲಕೋಟೆ |
| 2. | ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಶ್ರೀ ತುಷಾರ್ ಗಿರಿ ನಾಥ್ ಭಾ.ಆ.ಸೇ |
| 3. | ಭೇಟಿಯಾದ / ಪ್ರವಾಸದ ದಿನಾಂಕ | **25-08-2019** ಮತ್ತು **26-08-2019** |
| 4. | ಮುಖ್ಯವಾಗಿ ಗಮನಿಸಿದ ಅಂಶಗಳು | |

ದಿನಾಂಕ: **25-08-2019** ಹಾಗೂ **26-08-2019** ರಂದು ಸ್ಥಳ ಪರಿಶೀಲನಾ ವಿವರ ಹಾಗೂ ನೀಡಿದ ಸೂಚನೆಗಳು.

1) ಬಾಗಲಕೋಟೆ ಜಿಲ್ಲೆಯ ಕಳೆದ ಒಂದು ತಿಂಗಳಿಂದ ಸಂಭವಿಸಿದ ನೆರೆ ಹಾವಳಿಯ ಬಗ್ಗೆ ಛಾಯಾಚಿತ್ರ ಪ್ರದರ್ಶನ ಮಾಡಿದ್ದುದರ ಕುರಿತು ಪ್ರವಾಹ ಸ್ಥಿತಿಗತಿಗಳ ಚಿತ್ರಣ, ಪರಿಹಾರ ಕೇಂದ್ರಗಳು, ಪಶುಗಳ ಕೇಂದ್ರ, ದವಾಖಾನೆ, ಬೆಳೆನಾಶದ ಕುರಿತು ಚಿತ್ರಣ ಮುಖಾಂತರ ಕೇಂದ್ರದ IMT ತಂಡದ ಎಲ್ಲ ಸದಸ್ಯರುಗಳಿಗೆ ಮನವರಿಕೆಯಾಗುವಂತೆ ಮಾನ್ಯ ಜಿಲ್ಲಾಧಿಕಾರಿಗಳ ಜೊತೆಗೂಡಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ವಿವರಿಸಲಾಯಿತು. ಪ್ರದರ್ಶನ ಮಾಡಿದಂತೆ ಛಾಯಾಚಿತ್ರಗಳಿಗೆ ಸ್ಥಳ ಹಾಗೂ ದಿನಾಂಕವನ್ನು ನಮೂದಿಸುವಂತೆ ವಾರ್ತಾ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು.

2) ದಿನಾಂಕ:-26.08.2019 ರಂದು ಬೆಳಗ್ಗೆ 7-15 ಗಂಟೆಗೆ ಕೇಂದ್ರ ತಂಡಕ್ಕೆ ಜಿಲ್ಲಾ ಮಟ್ಟದಲ್ಲಿ ತಯಾರಿಸಿದ ಪಾವರ್ ಪಾಯಿಂಟ್ ಪ್ರೆಸೆಂಟೇಶನ್ (PPT) ನ್ನು ಮಾನ್ಯ ಜಿಲ್ಲಾಧಿಕಾರಿಗಳು ವಿವರಿಸುತ್ತಿದ್ದರು ಮಧ್ಯದಲ್ಲಿ ವಿವಿಧ ಸ್ಲೈಡ್‌ಗಳ ಕುರಿತು ಕೇಂದ್ರ ತಂಡದ ಮುಖ್ಯಸ್ಥರಿಗೂ ಹಾಗೂ ಸದಸ್ಯರಿಗೆ ವಿವಿಧ ತಾಲೂಕುಗಳಲ್ಲಿ ಸಂಭವಿಸಿದ ಪ್ರವಾಹ ಪರಿಸ್ಥಿತಿ ಪರಿಹಾರ ಕೇಂದ್ರಗಳ ಸ್ಥಾಪನೆ, ಜನ ಮತ್ತು ಜಾನುವಾರುಗಳನ್ನು ರಕ್ಷಿಸಿದ ಕುರಿತು, ಜನರಿಗೆ ಆರೋಗ್ಯದ ಕುರಿತು ತಿಳುವಳಿಕೆ ಹಾಗೂ ದನಕರುಗಳಿಗೆ ರೋಗ-ರುಜಿನು ಬರದಂತೆ ಜನರಲ್ಲಿ ತಿಳುವಳಿಕೆ ಹಾಗೂ ರೈತರ ಜಮೀನಿನಲ್ಲಿ ನಾಶವಾದ ಕಬ್ಬು ಹಾಗೂ ಇತರೆ ಬೆಳೆಗಳ ಬಗ್ಗೆ IMT ತಂಡದವರಿಗೆ ಈ ಕುರಿತು ಚರ್ಚಿಸಲಾಯಿತು.

3) ಜಮಖಂಡಿ ಪ್ರವಾಸ ಮಂದಿರದಿಂದ ಚಿಕ್ಕಪಡಸಲಗಿ ಸೇತುವೆ ಹಾನಿಯ ಕುರಿತು ಚರ್ಚಿಸಲು ತಂಡದೊಂದಿಗೆ ಹೋಗಲಾಯಿತು. ಸೇತುವೆ ದುರಸ್ತಿಯಾಗಲು ಕನಿಷ್ಠ 2-3 ತಿಂಗಳು ಬೇಕಾಗುವುದರಿಂದ ಬೇಗನೆ ಮುಕ್ತಾಯಗೊಳಿಸಲು ಕಾರ್ಯನಿರ್ವಾಹಕ ಇಂಜಿನೀಯರರಿಗೆ ನಿರ್ದೇಶನ ನೀಡಲಾಯಿತು. 460 m ಸೇತುವೆ ಅಗಲವಿದ್ದು ಇದರ ಹಾನಿ ಮೊತ್ತ ರೂ 1.6 ಕೋಟಿ ಆಗುತ್ತದೆ ಎಂದು ಕಾರ್ಯ ನಿರ್ವಾಹಕ ಅಭಿಯಂತರರು ತಿಳಿಸಿದರು.

4) ರಬಕವಿ-ಬನಹಟ್ಟಿ ತಾಲೂಕಿನ ಅಸ್ಕಿ ಗ್ರಾಮದ ರೈತರ ಪರಿಹಾರ ಕೇಂದ್ರ, ದನಗಳ ಶೆಡ್, ಹೊರ-ರೋಗಿಗಳ ವಿಭಾಗ, ದನಕರುಗಳಿಗೆ ಬೇಕಾಗುವ ಪೋಷಕಾಂಶ ಹಾಗೂ ಔಷಧಿಗಳ ವಿತರಣೆಯನ್ನು ಜಿಲ್ಲಾ ಮಟ್ಟದಿಂದ ವ್ಯವಸ್ಥೆ ಮಾಡಿದ ಕುರಿತು ಪ್ರವಾಸ ತಂಡಕ್ಕೆ ಮನವರಿಕೆ ಮಾಡಿದರು ಹಾಗೂ ಸ್ಥಳೀಯ ಶಾಸಕರಾದ ಮಾನ್ಯ ಶ್ರೀ ಸಿದ್ದು ಸವದಿಯವರ ಜೊತೆ ಚರ್ಚಿಸಲಾಯಿತು.

ನಂತರ ಪರಿಹಾರ ಕೇಂದ್ರದಲ್ಲಿ ಇರುವ ಸಿಬ್ಬಂದಿ ಹಾಗೂ ಜನರ ಜೊತೆ ಕೇಂದ್ರ ತಂಡದವರು ವಿಚಾರ ವಿನಿಮಯ ಮಾಡುವಾಗ ಜನರು ಕನ್ನಡದಲ್ಲಿ ಹೇಳಿದ ವಾಕ್ಯಗಳನ್ನು ಕೇಂದ್ರ ತಂಡಕ್ಕೆ ಹಿಂದಿ ಮತ್ತು ಇಂಗ್ಲೀಷನಲ್ಲಿ ಮಾನ್ಯ ಕಾರ್ಯದರ್ಶಿಗಳು ವಿವರಿಸಿದರು.

5) ಅಸ್ಕಿ ಗ್ರಾಮದ ಜನರನ್ನು ಸಂಪೂರ್ಣವಾಗಿ ಸ್ಥಳಾಂತರ ಮಾಡುವ ಕುರಿತು ಕೇಂದ್ರ ತಂಡದೊಂದಿಗೆ ಸ್ಥಳೀಯ ತಹಶೀಲ್ದಾರರು ಹಾಗೂ ಉಪ ವಿಭಾಗಾಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲು ತಿಳಿಸಲಾಯಿತು.

6) ಮುಧೋಳಕ್ಕೆ ಬಂದು ಮುಧೋಳದಿಂದ ಯಾದವಾಡಕ್ಕೆ ಹೋಗುವ ರಸ್ತೆಯಲ್ಲಿ ಮುಧೋಳಕ್ಕೆ ಸೇರಿಕೊಂಡ ಸೇತುವೆಯನ್ನು ಪರಿಶೀಲಿಸಿ ಸೇತುವೆ ಮೇಲೆ ನೀರಿನ ಹರಿವಿನ ಪ್ರಮಾಣ, ಟ್ರಾನ್ಸ್‌ಫಾರ್ಮರ್‌ಗಳ ನಾಶ, ವಿದ್ಯುತ್ ಕಂಬಗಳು ಬಿದ್ದಿರುವ ಹಾಗೂ ಕಬ್ಬು ಬೆಳೆ ನಾಶದ ಕುರಿತು ಕೇಂದ್ರ ತಂಡಕ್ಕೆ ಮನವರಿಕೆ ಮಾಡಿದರು.

ನಂತರ ಹೆಸ್ಕಾಂ ಇಂಜಿನೀಯರಗೆ ನದಿ ದಂಡೆಯಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಬೇಗನೆ ಅಳವಡಿಸಲು ಸೂಚಿಸಿದರು. ಇರದಿದ್ದರೆ ಇನ್ನೂ ಸ್ವಲ್ಪ ಬೆಳೆ ಇರುವ ಪ್ರದೇಶದಲ್ಲಿ ನೀರು ಇರದೇ ಹಾಳಾಗುವ ಸಂಭವವಿರುವುದು. ಆದ ಕಾರಣ ಬೇಗ ಕಾರ್ಯವನ್ನು ಪೂರ್ಣಗೊಳಿಸಲು ತಿಳಿಸಲಾಯಿತು.

ಅದೇ ರೀತಿ SH-15 ರಸ್ತೆ (ಯಾದವಾಡ) 1.1 ಕಿ.ಮೀ ಸಂಪೂರ್ಣ ಕೊಚ್ಚಿ ಹೋಗಿದ್ದು, ಅದು ರಿಪೇರಿಯಾಗಲು 6 ತಿಂಗಳು ಬೇಕಾಗುವುದು. ಇದರ ಅಂದಾಜು ಪತ್ರಿಕೆ ತಯಾರಿಸಲು ಕಾರ್ಯನಿರ್ವಾಹಕ ಅಭಿಯಂತರರು (EE,PWD) ರವರಿಗೆ ಸೂಚಿಸಲಾಯಿತು. ಅದೇ ರೀತಿಯಾಗಿ ಕಾರ್ಯನಿರ್ವಾಹಕ ಅಭಿಯಂತರರು (EE,Hescom) (ವಿದ್ಯುತ್) ರವರಿಗೆ ವಿದ್ಯುತ್ ಕಂಬಗಳಿಗೆ ಹೊಸ ವೈಯರ್‌ನ್ನು ಜೋಡಿಸಿ ಹಳೆಯ ವೈಯರನ್ನು ಮರು ಬಳಕೆಗಾಗಿ ಹಾಕಲು ಸೂಚಿಸಲಾಯಿತು.

7) ಮುಧೋಳ ತಾಲೂಕಿನ ಚಿಂಚಖಂಡಿ ಸೇತುವೆಯನ್ನು ಪರಿಶೀಲಿಸಿ, ಅಲ್ಲಿ ನೆರೆದಿದ್ದ ರೈತರಾದ ಸದಾಶಿವ ತೇಲಿ, ಭೀಮಪ್ಪ ಬುದ್ನಿ ಇವರು ಕೇಂದ್ರ ತಂಡದ ಮುಂದೆ ನಮ್ಮದು ಫಲವತ್ತಾದ ಮಣ್ಣು, ಎಕರೆಗೆ 70 ಟನ್ ಕಬ್ಬು ಇಳುವರಿ ಬರುತ್ತಿತ್ತು ಈಗ ಸಂಪೂರ್ಣ ಹಾಳಾಗಿ ಕೇವಲ 2 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ಕೊಡುವುದು ಸರಿಯಲ್ಲ. ಮುಳುಗಡೆಯಾಗಿ ನಾಶವಾದ ಎಲ್ಲ ಬೆಳೆಗಳಿಗೆ ಎಕರೆವಾರು ಕೊಡಲು ವಿನಂತಿಸಿದರು. ಹೊಲದಲ್ಲಿ ನಾಶವಾದ ಬೆಳೆ ತೆಗೆದು ಹಾಕಲು ಎಕರೆಗೆ ರೂ. 25000/- ಖರ್ಚು ಬರುವುದು. ನಂತರ ಅದರಲ್ಲಿ ಬೆಳೆ ಬೆಳೆದು ಇಳುವರಿ ಪಡೆಯಲು ಕನಿಷ್ಠ 1 ರಿಂದ 2 ವರ್ಷ ಬೇಕಾಗುವುದು ಎಂದು ವಿವರಿಸಲಾಯಿತು.

ಕೆಲವು ರೈತರು ನದಿ ದಡದಲ್ಲಿ ಇರುವ ನಮ್ಮ ಎಲ್ಲ ಬೆಳೆ ನಾಶವಾಗಿವೆ. ಆದರೆ ನದಿಯಿಂದ 4-5 ಕಿ.ಮೀ ಮೇಲೆ ನದಿಯಿಂದ ಪೈಪ್‌ಲೈನ್ ಮಾಡಿ 4-5 ಎಕರೆ ಜಮೀನು ಸಾಗುವಳಿ ಮಾಡುತ್ತಿದ್ದು, ಅವುಗಳಿಗೆ ವಿದ್ಯುತ್ ಒದಗಿಸಲು ಹೆಸ್ಕಾಂ ಇಂಜಿನೀಯರ್‌ಗಳಿಗೆ ನಿರ್ದೇಶನ ನೀಡಲಾಯಿತು.

8) ಚಿಂಚಖಂಡಿ ಸೇತುವೆ ಹತ್ತಿರದಲ್ಲಿರುವ ಅಂದಾಜು ರೂ. 20-00 ಲಕ್ಷಗಳ ಪಾಲಿಹೌಸ್ ಹಾಳಾಗಿದ್ದನ್ನು ಪರಿಶೀಲಿಸಿ, ಅದರ ಜೊತೆಗೆ ನದಿಯಲ್ಲಿ ಪ್ರವಾಹ ಇಳಿದರೂ ಸಹಿತ ಸತ್ತ ದನ-ಕರುಗಳು ತೇಲಿ ಬರುತ್ತಿರುವುದನ್ನು ವೀಕ್ಷಿಸಿ ಕೇಂದ್ರ ತಂಡದವರಿಗೆ ಪ್ರವಾಹ ಪೀಡಿತ ಜನರಿಗೆ ಬಹಳ ಹಾನಿಯಾಗಿರುವುದನ್ನು ಮನವರಿಕೆ ಮಾಡಿಕೊಡಲಾಯಿತು.

9) ಕಲಾದಗಿಯಲ್ಲಿ ಮಾನ್ಯ ಕೇಂದ್ರ ತಂಡ ಹಾಗೂ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಎಸ್. ಆರ್. ಪಾಟೀಲರು, ಬಾಗಲಕೋಟ ಸಂಸದರಾದ ಮಾನ್ಯ ಶ್ರೀ ಪಿ.ಸಿ. ಗದ್ದಿಗೌಡರು ಆಗಮಿಸಿದ್ದರು. ಅಲ್ಲಿ ಅವರು ಕೇಂದ್ರ ತಂಡದೊಂದಿಗೆ ಬಾಗಲಕೋಟ ಜಿಲ್ಲೆಯಲ್ಲಿ 1200 ಹೆಕ್ಟೇರ್ ದಾಳಿಂಬೆ ಬೆಳೆ ನಾಶವಾಗಿದ್ದು, ಪ್ರತಿ ಎಕರೆಗೆ ರೂ.3.00 ರಿಂದ 4.00 ಲಕ್ಷ ಆದಾಯ ಪಡೆಯುತ್ತಿದ್ದರು. ಈಗ ಎಕರೆಗೆ ರೂ. 1.50 ಲಕ್ಷಗಳು ಖರ್ಚು ಬಂದಿದ್ದು, ಇಳುವರಿ ಪಡೆಯಲು ಕನಿಷ್ಠ 2-3 ವರ್ಷ ಬೇಕಾಗುವುದು ಎಂದು ಇತರರು ಜನಪ್ರತಿನಿಧಿಗಳು ಕೇಂದ್ರ ತಂಡದೊಂದಿಗೆ ಚರ್ಚಿಸಿದರು. ಅದರ ಜೊತೆಗೆ ನಾನು ಸಹ ತಂಡಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಲು ಕೇಂದ್ರ ತಂಡಕ್ಕೆ ಕೋರಲಾಯಿತು.

10) ಬಾದಾಮಿ ತಾಲೂಕಿನ ಪಟ್ಟದಕಲ್ಲು ಗ್ರಾಮಕ್ಕೆ ಭೇಟಿ ನೀಡಿ ಹಾನಿಗೊಳಗಾದ ಮನೆಗಳಿಗೆ ಭೇಟಿ

| | | |
|---|---|---|
| | | ನೀಡಿದರು ಹಾಗೂ ಕಾಂಕ್ರೀಟ್ ರಸ್ತೆ ಹಾಳಾಗಿರುವುದನ್ನು ಸಹಿತ ವೀಕ್ಷಿಸಿ ಹಾನಿಯಾದ ಬಗ್ಗೆ ತಂಡದವರಿಗೆ ತಿಳಿಸಲಾಯಿತು. ನಂತರ ಗ್ರಾಮದ ಜನರ ಜೊತೆ ತಂಡದವರು ಚರ್ಚಿಸಲಾಗಿ, ಸಂಪೂರ್ಣ ಗ್ರಾಮವನ್ನು ಸ್ಥಳಾಂತರ ಮಾಡಲು ಜನರು ಒತ್ತಾಯ ಮಾಡಿದರು. ಅದಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು ಹಾಗೂ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |

(ತುಷಾರ್ ಗಿರಿ ನಾಥ್)

ಡಾ॥ ಎನ್.ನಾಗಾಂಭಿಕಾದೇವಿ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 17.08.2019 ರಂದು ಅಪರಾಹ್ನ 2.00 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ಇಲ್ಲಿ ನಡೆಸಲಾದ ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳು.

********

<u>ಅಧ್ಯಕ್ಷತೆ</u>: ಡಾ॥ ಎನ್.ನಾಗಾಂಭಿಕಾದೇವಿ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

<u>ಸಭೆಯಲ್ಲಿ ಹಾಜರಿದ್ದವರು</u> :

1) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
2) ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
3) ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
4) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
5) ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
6) ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
7) ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
8) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಇಲಾಖೆ, ಚಿಕ್ಕಬಳ್ಳಾಪುರ.
9) ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ.
10) ಉಪನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
11) ಉಪನಿರ್ದೇಶಕರು, ಪಶು ಪಾಲನಾ ಇಲಾಖೆ, ಚಿಕ್ಕಬಳ್ಳಾಪುರ.
12) ಉಪನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಚಿಕ್ಕಬಳ್ಳಾಪುರ.
13) ರೇಷ್ಮೇ ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ.
14) ಜಿಲ್ಲೆಯ ಎಲ್ಲಾ ತಹಶೀಲ್ದಾರ್ ಗಳು ಚಿಕ್ಕಬಳ್ಳಾಪುರ ಜಿಲ್ಲೆ.
15) ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳು, ಚಿಕ್ಕಬಳ್ಳಾಪುರ.
16) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಚಿಕ್ಕಬಳ್ಳಾಪುರ.
17) ಕಾರ್ಯಪಾಲಕ ಅಭಿಯಂತರರು, ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕಬಳ್ಳಾಪುರ.
18) ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ.
19) ಇತರೆ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರಾದ ಡಾ॥ ಎನ್.ನಾಗಾಂಭಿಕಾದೇವಿ, ಭಾ.ಆ.ಸೇ., ರವರಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರು ಸ್ವಾಗತ ಕೋರಿ ಜಿಲ್ಲೆಯ ಎಲ್ಲಾ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಕಾರ್ಯ ಕಲಾಪಗಳನ್ನು ನಡೆಸಿಕೊಡಲು ಕೋರಿದರು. ನಂತರ ಸಭೆಯನ್ನು ಪ್ರಾರಂಭಿಸಿ ಈ ಕೆಳಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು.

ಇಲಾಖಾವಾರು ಪ್ರಗತಿ ಪರಿಶೀಲನೆ:-

1) ಕೃಷಿ ಇಲಾಖೆ :-

ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಆಗಸ್ಟ್ 16ಕ್ಕೆ 49 ಎಂ.ಎಂ ಮಳೆ ಆಗಿದ್ದು ಶೇ. 51 ರಷ್ಟು ಮಳೆಯ ಕೊರತೆ ಇರುತ್ತದೆ. ಜನವರಿಯಿಂದ ಆಗಸ್ಟ್ ವರೆಗು ಶೇ.-12 ರಷ್ಟು ಮಳೆಯ ಕೊರತೆ ಉಂಟಾಗಿರುತ್ತದೆ. ಮುಂಗಾರುನಲ್ಲಿ ಒಟ್ಟು 154000 ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಬಿತ್ತನೆ ಗುರಿಯನ್ನು ಹೊಂದಲಾಗಿ 100025 ಹೆಕ್ಟರ್‌ನಷ್ಟು ಪ್ರದೇಶದಲ್ಲಿ ಮಾತ್ರ ಜಿಲ್ಲೆಯಲ್ಲಿ ಬಿತ್ತನೆ ಮಾಡಲಾಗಿರುತ್ತದೆ ಎಂದು ತಿಳಿಸಿದರು.

ಈ ಜಿಲ್ಲೆಯಲ್ಲಿ ಪೂರ್ವ ಮುಂಗಾರು ಇಲ್ಲದೇ ಇರುವುದರಿಂದ ಈಗ ಜಿಲ್ಲೆಯಲ್ಲಿ ಅಲ್ಪ ಪ್ರಮಾಣದ ಮಳೆಯಾಗುತ್ತಿರುವುದರಿಂದ ಆಗಸ್ಟ್ & ಸೆಪ್ಟಂಬರ್ ತಿಂಗಳಲ್ಲಿ ರಾಗಿ ಹುರಳಿ ಬೆಳೆ ಬಿತ್ತನೆಯಾಗುತ್ತದೆ ಎಂದು ತಿಳಿಸಿದರು.

- ಜೂನ್ ಮಾಹೆಯಲ್ಲಿ ಮಳೆಯ ಕೊರತೆಯಿಂದ ನೆಲಗಡಲೆ ಮತ್ತು ತೊಗರಿ ಬೆಳೆಗಳು 66.69 ರಷ್ಟು ಮಾತ್ರ ಬಿತ್ತನೆಯಾಗಿದೆ. ಈ ಬೆಳೆಗಳ ಬದಲು ಪರ್ಯಾಯ ಬೆಳೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.
- ಪಿಎಂ ಕಿಸಾನ್ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 90% ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿದರು.
- ಈ ಜಿಲ್ಲೆಯಲ್ಲಿ ಒಟ್ಟು 63503 ಮೃತ ಪಟ್ಟ ರೈತರಾಗಿದ್ದು, ಈ ಬಗ್ಗೆ ತಾಲ್ಲೂಕಿನಲ್ಲಿ ತಹಶೀಲ್ದಾರ್ ರವರು ಫವತಿವಾರಸು ಖಾತೆ ಮಾಡಿ ಈ ಯೋಜನೆಯನ್ನು 100% ರಷ್ಟು ಪ್ರಗತಿ ಸಾಧಿಸಲು ಸೂಚಿಸಲಾಯಿತು. ಒಂದುವೇಳೆ ಮಾಡದಿದ್ದರೆ ಎಲ್ಲಾ ತಹಶಿಲ್ದಾರ್ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
- ಜಿಲ್ಲೆಯ ಪ್ರತಿಯೊಬ್ಬ ಅರ್ಹ ರೈತರಿಗೆ ಪಿಎಂ ಕಿಸಾನ್ ಯೋಜನೆಯಡಿಯಲ್ಲಿ ಸೌಲಭ್ಯ ಕಲ್ಪಿಸಿಕೊಡಬೇಕು. ಬಾಕಿ ಇರುವ ಫಲಾನುಭವಿಗಳ ಆಧಾರ್, ಬ್ಯಾಂಕ್ ಸರ್ವೇ ನಂಬರಗಳ ವಿವರವನ್ನು ತಂತ್ರಾಂಶದಲ್ಲಿ ಈ ವಾರದ ಅಂತ್ಯದೊಳಗಾಗಿ ನಮೂದಿಸಲು ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ)**

2) ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ:-

ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ರೈತರ ಬಳಿ ಲಭ್ಯವಿರುವ ಮೇವು ಮುಂದಿನ 8 ವಾರಗಳ ಅವಧಿಗೆ ಸಾಕಾಗುತ್ತದೆ ಎಂದು ತಿಳಿಸಿದರು.

- ಈಗಾಗಲೇ ಜಿಲ್ಲೆಯ 6 ತಾಲ್ಲೂಕುಗಳಲ್ಲಿ ಹೋಬಳಿವಾರು ಮೇವು ನಿಧಿಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು 238.60 ಮೆ.ಟನ್ ಮೇವನ್ನು ಖರೀದಿಸಿ ಫಲಾನುಭವಿಗಳಿಗೆ ನೀಡಿರುತ್ತಾರೆ.
- ಹೈಕೋರ್ಟು ಆದೇಶದಂತೆ ಜಿಲ್ಲೆಯಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲು ಸೂಚಿಸಲಾಗಿದೆ, ಜಿಲ್ಲೆಯಲ್ಲಿ ಹೆಚ್ಚಾಗಿ ಗುಡಿಬಂಡೆ ತಾಲ್ಲೂಕಿನ ಸೋಮೇನಹಳ್ಳಿಯಲಿ ಮೇವಿನ ಕೊರತೆ ಕಂಡುಬಂದಿರುವುದರಿಂದ ಸೋಮೇನಹಳ್ಳಿಯಲ್ಲಿ ಗೋಶಾಲೆಯನ್ನು ಪ್ರಾರಂಭಿಸಲಾಗಿರುವುದಾಗಿ ತಿಳಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಮಾನ್ಯ ಉಚ್ಛನ್ಯಾಯಾಲಯದ ಆದೇಶದಂತೆ ಅವಶ್ಯಕವಿರುವ ಎಲ್ಲಾ ತಾಲ್ಲೂಕುಗಳಲ್ಲಿ ಕನಿಷ್ಟ 1 ಗೋಶಾಲೆಯನ್ನು ತೆರೆದು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲು ಸೂಚಿಸಿದರು.

(ಕ್ರಮ: ಜಿಲ್ಲಾಧಿಕಾರಿಗಳು ಮತ್ತು ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ)

3) ಕುಡಿಯುವ ನೀರಿನ ಸರಬರಾಜು ಮತ್ತು ಜಿಲ್ಲಾಧಿಕಾರಿಗಳ ಸಿ.ಆರ್.ಎಫ್ ಅನುದಾನದ ಬಗ್ಗೆ:-

ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 359 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು,

147 ಗ್ರಾಮಗಳಲ್ಲಿ ಟ್ಯಾಂಕರ್‌ಗಳ ಮೂಲಕ ಮತ್ತು 212 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.

- ನಗರ ಪ್ರದೇಶದ ವ್ಯಾಪ್ತಿಯಲ್ಲಿ 02 ತಾಲ್ಲೂಕಿನಲ್ಲಿ ಒಟ್ಟು 32 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 32 ಟ್ಯಾಂಕರ್‌ಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಈ ಜಿಲ್ಲೆಯಲ್ಲಿ ಮಳೆಯಾಗದೇ ಇರುವುದರಿಂದ ಕುಡಿಯುವ ನೀರಿನ ಕೊರತೆ ಕಡಿಮೆಯಾಗುತ್ತಿಲ್ಲ ಎಂದು ತಿಳಿಸಿದರು.
- ಜಿಲ್ಲೆಯಲ್ಲಿ ಯಾವುದೇ ರೀತಿಯಲ್ಲೂ ಕುಡಿಯುವ ನೀರಿಗೆ ತೊಂದರೆಯಾಗದಂತೆ ಎಚ್ಚರವಹಿಸಿ ಕ್ರಮ ಕೈಗೊಳ್ಳಲು ಸೂಚಿಸಿಲಾಯಿತು.
- ಮಳೆಯಾಗದ ಪ್ರದೇಶದಲ್ಲಿ ಮೋಡ ಬಿತ್ತನೆ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
- 2018-19 ಹಾಗೂ 2019-20ನೇ ಸಾಲಿನ ಕುಡಿಯುವ ನೀರಿನ ಪುನಶ್ಚೇತನ ಕಾಮಗಾರಿಗಳು ಸರಿಯಾದ ರೀತಿಯಲ್ಲಿ ಹಣವನ್ನು ಸದ್ಬಳಿಕೆ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಪರಿಶೀಲನೆ ಮಾಡಲು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲು ಸೂಚಸಲಾಯಿತು.
- ಚೆಕ್ ಡ್ಯಾಂ ನಿರ್ಮಾಣ ಮಾಡುವಾಗ ಎಲ್ಲಂದರಲ್ಲಿ ನಿರ್ಮಾಣ ಮಾಡಿ ಅನಾವಶ್ಯಕವಾಗಿ ಹಣವನ್ನು ಖರ್ಚು ಮಾಡುವುದು ಸರಿಯಲ್ಲ. ಜಿಲ್ಲೆಗೊಂದು ಮಾಸ್ಟರ್ ಪ್ಲಾನ್ ಮಾಡಿ ಸಿದ್ಧಪಡಿಸಿ ಯಾವ ಸ್ಥಳದಲ್ಲಿ ಚೆಕ್ ಡ್ಯಾಂ ನಿರ್ಮಾಣ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬುದರ ಬಗ್ಗೆ ಆಲೋಚಿಸಿ ಮಾಸ್ಟರ್ ಪ್ಲಾನ್ ಮಾಡಲು ಸೂಚಿಸಲಾಯಿತು.
- ಯಾವುದೇ ಕಾಮಗಾರಿಗಳಿಗೆ ಅನುಮೋದನೆ ಮಾಡುವ ಮುಂಚೆ ಸದರಿ ಕಾಮಗಾರಿಯ ಬಗ್ಗೆ ನುರಿತ ತಜ್ಞರಿಂದ ಪರಿಶೀಲನೆ ಮಾಡಿಸಿ ಅನುಮೋದನೆ ನೀಡಲು ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ/ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ/ ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ/ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ)**

4) **ಜಿಲ್ಲಾ ಪಂಚಾಯತ್ ಇಲಾಖೆ:-**

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮಾತನಾಡಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಶೇ. 103.26% ರಷ್ಟು ಸಾಧನೆಯಾಗಿದೆ. ಮತ್ತು ಮಾರ್ಚ್ ತಿಂಗಳಿಂದ ನರೇಗಾ ಯೋಜನೆಯಡಿಲ್ಲಿನ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಆಗದಿರುವುದರಿಂದ ಹಣ ಸಂದಾಯವಾಗಿರುವುದಿಲ್ಲ. ಎಂದು ತಿಳಿಸಿದರು.

- ಈ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಮಾತನಾಡಿ ಅನುದಾನ ಬಿಡುಗಡೆ ಬಗ್ಗೆ ಮಈ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶೀಗಳ ಮಾತನಾಡಿ ಅನುದಾನ ಬಿಡುಗಡೆ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ)**

5) **ತೋಟಗಾರಿಕಾ ಇಲಾಖೆ:-**

ಉಪನಿರ್ದೇಶಕರು, ತೋಟಾಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ತೋಟಾಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ, ಯೋಜನೆಗಳಾದ ಪಿ.ಎಮ್.ಕೆ.ಎಸ್.ವೈ (ಸೂಕ್ಷ್ಮ ನೀರಾವರಿ), ರಾಷ್ಟೀಯ ತೋಟಾಗಾರಿಕೆ ಮಿಷನ್, ರಾಷ್ಟೀಯ ಕೃಷಿ ವಿಕಾಸ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ, ಕೃಷಿ ಭಾಗ್ಯ ಯೋಜನೆಯಡಿಯಲಿ ಶೇ84.21 ರಷ್ಟು ಪ್ರಗತಿ ಸಾಧಿಸಿದ್ದು, ಸಿಗದಿ ಪಡೆದಿರುವ ಗುರಿಯನ್ನು ಸಾಧಿಸುವುದರೊಂದಿಗೆ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮ ವಹಿಸಲು ಸೂಚಿಸಲಾಯಿತು.

(ಕ್ರಮ: ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಚಿಕ್ಕಬಳ್ಳಾಪುರ)

6) **ರೇಷ್ಮೆ ಇಲಾಖೆ : –**

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರೇಷ್ಮೆ ಉತ್ಪಾದನೆ ಉತ್ಪಾದನೆ ಹೆಚ್ಚಾಗಿರುತ್ತದೆ ಎಂದು ಉಪನಿರ್ದೇಶಕರು ತಿಳಿಸಿದರು. ರೇಷ್ಮೆ ಬೆಳೆಯುವ ಬಗ್ಗೆ ರೈತರಿಗೆ ಹರಿವು ಮೂಡಿಸಿ. ಹೆಚ್ಚು ಉತ್ಪಾದನೆ ಮಾಡುವ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

(ಕ್ರಮ : ರೇಷ್ಮೆ ಉಪನಿರ್ದೇಶಕರು. ಚಿಕ್ಕಬಳ್ಳಾಪುರ)

7) **ಅನಧಿಕೃತ ಸಾಗುವಳಿ ಸಕ್ರಮೀಕರಣ (ಬಗರ್ ಹುಕ್ಕುಂ ಅರ್ಜಿಗಳ ವಿಲೇವಾರಿ) :**

ಜಿಲ್ಲಾಧಿಕಾರಿಗಳು ಮಾತನಾಡಿ. ಜಿಲ್ಲೆಯಲ್ಲಿ ಅನಧಿಕೃತ ಸಾಗುವಳಿ ಸಕ್ರಮೀಕರಣಕ್ಕಾಗಿ ಒಟ್ಟು 40390 ನಮೂನೆ–53 ಅರ್ಜಿಗಳು ಸ್ವೀಕೃತವಾಗಿದ್ದು. ಈ ಪೈಕಿ ಡಿಸೆಂಬರ್ ಮಾಹೆಯ ಅಂತ್ಯದವರೆಗೆ ಒಟ್ಟು 31063 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು. ಬಾಕಿ 9327 ಅರ್ಜಿಗಳು ಇರುತ್ತವೆ. ಎಂದು ತಿಳಿಸಿದರು.

ಅನಧಿಕೃತ ಸಾಗುವಳಿ ಸಕ್ರಮೀಕರಣಕ್ಕಾಗಿ ಬಾಕಿ ಇರುವ ಅರ್ಜಿಗಳನ್ನು ಬಗರ್ ಹುಕ್ಕಂ ಸಾಗುವಳಿ ಕಮಿಟಿ ರಚನೆಯಾದಲ್ಲಿ ತುರ್ತಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

(ಕ್ರಮ: ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು. ಚಿಕ್ಕಬಳ್ಳಾಪುರ ಜಿಲ್ಲೆ)

8) **94 ಸಿ ಮತ್ತು 94 ಸಿಸಿ ಅರ್ಜಿಗಳ ವಿಲೇವಾರಿ:–**

ಜಿಲ್ಲಾಧಿಕಾರಿಗಳು ಮಾತನಾಡಿ. ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶ ಮತ್ತು ನಗರ ಪ್ರದೇಶದ ಸರ್ಕಾರಿ ಜಮೀನಿನಲ್ಲಿ ಕಟ್ಟಡವನ್ನು ನಿರ್ಮಿಸಿಕೊಂಡು ಕಟ್ಟಡವನ್ನು ಸಕ್ರಮಗೊಳಿಸುವ ಕಾರ್ಯ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿದರು.

(ಕ್ರಮ: ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು. ಚಿಕ್ಕಬಳ್ಳಾಪುರ ಜಿಲ್ಲೆ)

9) **ರುದ್ರ ಭೂಮಿಗಾಗಿ ಜಮೀನು ಮಂಜೂರಿ:–**

ಜಿಲ್ಲಾಧಿಕಾರಿಗಳು ಮಾತನಾಡಿ. ರುದ್ರಭೂಮಿ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಸ್ತುತ 26 ಗ್ರಾಮಗಳಿಗೆ ಜಮೀನು ಮಂಜೂರಿ ಮಾಡುವ ಅವಶ್ಯಕತೆ ಇದ್ದು ಸರ್ಕಾರಿ ಜಮೀನನ್ನು ಗುರುತಿಸಲಾಗುತ್ತಿರುವುದಾಗಿ ತಿಳಿಸಿರುತ್ತಾರೆ.

- ಸರ್ಕಾರಿ ಜಮೀನು ಲಭ್ಯವಿಲ್ಲದ ಗ್ರಾಮಗಳಲ್ಲಿ ಸಮಾಜ ಕಲ್ಯಾಣ ಇಲಾಖೆವತಿಯಿಂದ ಜಮೀನನ್ನು ಖರೀದಿಸಿ ಸ್ಮಶಾನವನ್ನು ಕಲ್ಪಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಜಿಲ್ಲೆಯಲ್ಲಿ ಒಟ್ಟು 26 ಗ್ರಾಮಗಳಿಗೆ ಸ್ಮಶಾನವನ್ನು ಕಲ್ಪಿಸಿದರೆ 100% ಪ್ರಗತಿ ಸಾಧಿಸಿದಂತಾಗುತ್ತದೆ. ಆದ್ದರಿಂದ ತುರ್ತಾಗಿ ಜಮೀನನ್ನು ಗುರ್ತಿಸಿ ಮಂಜೂರಿ ಮಾಡಲು ಕ್ರಮವಹಿಸಲು ಸೂಚಿಸಲಾಯಿತು.

(ಕ್ರಮ: ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಹಶೀಲ್ದಾರ್ ರವರು)

10) **ಸರ್ಕಾರಿ ಜಮೀನುಗಳ ಅಕ್ರಮ ಒತ್ತುವರಿ ತೆರವುಗೊಳಿಸುವ ವಿಚಾರ:–**

ಜಿಲ್ಲಾಧಿಕಾರಿಗಳು ಮಾತನಾಡಿ. ಜಿಲ್ಲೆಯಲ್ಲಿ ಒತ್ತುವರಿ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಎಂದು ತಿಳಿಸಿರುತ್ತಾರೆ.

ಕಂದಾಯ ಅದಾಲತ್ ಮಾಡುವ ವೇಳೆಯಲ್ಲಿ ಒತ್ತುವರಿ ತೆರವುಗೊಳಿಸುವ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಂಡು ಅದಾಲತ್ ದಿನದಲ್ಲಿ ತೆರವುಗೊಳಿಸುವ ಕಾರ್ಯವನ್ನು ಮಾಡಬೇಕು ಎಂದು ಸೂಚಿಸಿದರು.

11) **ಪಹಣಿ ಕಾಲಂ 3&9 ರಲ್ಲಿನ ಲೋಪದೋಷಗಳನ್ನು ತಿದ್ದುಪಡಿ ಮಾಡುವ ವಿಚಾರ:–**

ಜಿಲ್ಲಾಧಿಕಾರಿಗಳು ಮಾತನಾಡಿ. ಜಿಲ್ಲೆಯಲ್ಲಿ ಒಟ್ಟು 4990 ಪ್ರಕರಣಗಳು ತಿದ್ದುಪಡಿ ಮಾಡಲು ಬಾಕಿ ಇರುತ್ತದೆ.

- ಕಂದಾಯ/ಪಿಂಚಣಿ ಅದಾಲತ್ ಮಾಡುವ ಮೂಲಕ ಬಾಕಿ ಇರುವ ಪಹಣಿ ಕಾಲಂ 3&9 ರಲ್ಲಿನ ಲೋಪದೋಷಗಳನ್ನು ತುರ್ತಾಗಿ ತಿದ್ದುಪಡಿ ಮಾಡಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.

- ಪಿಂಚಣಿ ಪಡೆಯುವ ಫಲಾನುಭವಿಗಳಿಗೆ ಆಧಾರ್ ಜೋಡಣೆ ಮಾಡುವಲ್ಲಿ 87% ರಷ್ಟು ಇರುತ್ತದೆ. ಬಾಕಿ ಇರುವ ಫಲಾನುಭವಿಗಳಿಗೆ ತಿಳಿಸಿ ಆಧಾರ್ ನೀಡಲು ಸೂಚಿಸಿ, ನೀಡದಿದ್ದಲ್ಲಿ ವಜಾಗೊಳಿಸಲು ಸೂಚಿಸಲಾಯಿತು.

(ಕ್ರಮ: ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಹಶೀಲ್ದಾರ್ ರವರು)

12) <u>ಭೂ ಮಾಪನ ಇಲಾಖೆ (ಪೋಡಿ ಪ್ರಕರಣಗಳ ವಿಲೇವಾರಿ) :-</u>

ಭೂ ದಾಖಲೆಗಳ ಉಪನಿರ್ದೇಶಕರು, ಚಿಕ್ಕಬಳ್ಳಾಪುರ ರವರು ಮಾತನಾಡಿ, ಜಿಲ್ಲೆಯಲ್ಲಿ ಸರ್ಕಾರಿ ಭೂ ಮಾಪಕರಿಂದ ಸರಾಸರಿ ವಿಲೇವಾರಿ 27% ರಷ್ಟು, ಪರವಾನಿಗೆ ಭೂ ಮಾಪಕರಿಂದ ಸರಾಸರಿ ವಿಲೇವಾರಿ 21%ರಷ್ಟು ಇದೆ ಎಂದು ತಿಳಿಸಿದರು.

- ಪೋಡಿ ಮುಕ್ತ ಗ್ರಾಮ ಅಭಿಯಾನ ಜಿಲ್ಲೆಯಲ್ಲಿ ಪಗ್ರತಿಯಲ್ಲಿರುತ್ತದೆ. ಜಿಲ್ಲೆಯಲ್ಲಿ 864 ಗ್ರಾಮಗಳ ಗುರಿ ನಿಗದಿಪಡಿಸಿದ್ದು, ಈ ಪೈಕಿ 801 ಗ್ರಾಮಗಳನ್ನು ಮುಕ್ತಾಯಗೊಳಿಸಿದ್ದು, ಬಾಕಿ 63 ಗ್ರಾಮಗಳು ಇರುತ್ತವೆ. ಎಂದು ತಿಳಿಸಿದರು.
- ಬಾಕಿ ಇರುವ ಗ್ರಾಮಗಳನ್ನು ತುರ್ತಾಗಿ ಮುಕ್ತಾಯಗೊಳಿಸಲು ಸೂಚಿಸಲಾಯಿತು.

(ಕ್ರಮ: ಭೂ ದಾಖಲೆಗಳ ಉಪನಿರ್ದೇಶಕರು, ಭೂ ಮಾಪನ ಇಲಾಖೆ, ಮತ್ತು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ)

13) <u>ಅಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ:-</u>

ಉಪನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ಪಡಿತರ ಚೀಟಿ ನೀಡಲು ಕೋರಿ ಆನ್‌ಲೈನ್ ನಲ್ಲಿ ಒಟ್ಟು 13132 ಅರ್ಜಿಗಳುಸ್ವೀಕೃತವಾಗಿದ್ದು, ಈ ಪೈಕಿ 11420 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಬಾಕಿ ಇರುವ 1712 ಅರ್ಜಿಗಳ ವಿಲೇವಾರಿ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿರುತ್ತಾರೆ.

(ಕ್ರಮ: ಉಪನಿರ್ದೇಶಕರು, ಅಹಾರ ಇಲಾಖೆ ಮತ್ತು ಜಿಲ್ಲಾಧಿಕಾರಿಗಳು)

14) <u>ವಕ್ಫ್ ಸ್ವತ್ತುಗಳ ಖಾತೆ ಬದಲಾವಣೆ :-</u>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಕ್ಫ್ ಸ್ವತ್ತುಗಳನ್ನು ಕಂದಾಯ ದಾಖಲೆಗಳಲ್ಲಿ ಇಂಡೀಕರಿಸಲು 399 ಪ್ರಕರಣಗಳು ಬಾಕಿ ಇರುವುದಾಗಿ ತಿಳಿದು ಬಂದಿರುತ್ತದೆ ಆದ್ದರಿಂದ ಈ ಸ್ವತ್ತುಗಳ ಬಗ್ಗೆ ಪರಿಶಿಲಿಸಿ ತನಿಖೆ ನಡೆಸಿ ಕಂದಾಯ ದಾಖಲೆಗಳಲ್ಲಿ ಇಂಡೀಕರಿಸಲು ನಿಯಮಾನುಸಾರ ಕ್ರಮವಹಿಸಲು ಉಪವಿಭಾಗಾಧಿಕಾರಿಗಳು, ಹಾಗೂ ಜಿಲ್ಲೆಯ ಎಲ್ಲಾ ತಹಸೀಲ್ದಾರ್‌ಗಳಿಗೆ ಸೂಚಿಸಲಾಯಿತು.

(ಕ್ರಮ : ಜಿಲ್ಲೆಯ ಎಲ್ಲಾ ತಹಶಿಲ್ದಾರ್‌ಗಳು ಮತ್ತು ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ

15) <u>ವಿವಿಧ ನಿಗಮಗಳ ಮಂಡಳಿ ಬಗ್ಗೆ :-</u>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಾಲ್ಕು ನಿಗಮಗಳಲ್ಲಿ 2016-17 ನೇ ಸಾಲಿನಿಂದ 2018-19ನೇ ಸಾಲಿನ ವರೆಗೂ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಯಲು ಟೆಂಡರ್ ಪ್ರಕ್ರಿಯೆ ಪೂರ್ಣವಾಗಿರುವುದಿಲ್ಲ. ಈ ಬಗ್ಗೆ ಹೊಸ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಸೂಚಿಸಲಾಯಿತು.

(ಕ್ರಮ: ವ್ಯವಸ್ಥಾಪಕರು, ಅಂಬೇಡ್ಕರ್ ಅಭಿವೃದ್ದಿ ನಿಗಮ, ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ)

16) <u>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ :-</u>

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಅಂಗನವಾಡಿ ಮಕ್ಕಳಿಗೆ ಬಿಸಿಯೂಟ ಯೋಜನೆ ವ್ಯವಸ್ಥಿತವಾಗಿ ನಡೆಯುತ್ತಿದೆ. ಎಂದು ತಿಳಿಸಿದರು.

ನಗರ ವ್ಯಾಪ್ತಿಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸಲು 161 ಸೈಟ್‌ಗಳು ಬಾಕಾಗಿರುತ್ತವೆ ಎಂದು ತಿಳಿಸಿದರು ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕರೊಂದಿಗೆ ಸಮಾಲೋಚನೆ ನಡೆಸಿ ಪ್ರಗತಿ ಸಾಧಿಸಲು ಸೂಚಿಸಲಾಯಿತು.

- ಜಿಲ್ಲೆಯಲ್ಲಿನ ಅಂಗನವಾಡಿ ಕಟ್ಟಡ ನಿರ್ಮಾಣ ಪ್ರಗತಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯಿಂದ 'ನರೇಗಾ" ಯೋಜನೆಯಡಿ ಅನುದಾನ ಒದಗಿಸಿ ನಿರ್ಮಾಣ ಮಾಡಲು ಕ್ರಮವಹಿಸಲು ಸೂಚಿಸಲಾಯಿತು.
- ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಬಿಡುಗಡೆ ಮಾಡಲು ಕ್ರಮವಹಿಸಲು ಸೂಚಿಸಲಾಯಿತು.

(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಯೋಜನಾ ನಿರ್ದೇಶಕರು ನಗರಾಭಿವೃದ್ಧಿ ಇಲಾಖೆ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ)

- ಜಿಲ್ಲೆಯಲ್ಲಿ ಎಲ್ಲಾ ಅಧಿಕಾರಿಗಳು ಹಳ್ಳಿಗಳಿಗೆ ಬೇಟಿ ನೀಡಿ ಸ್ಥಳೀಯ ಸಾರ್ವಜಿಕರೊಂದಿಗೆ ಚರ್ಚೆ ಮಾಡಿ ಸ್ಥಳದಲ್ಲಿಯೇ ಸಮಸ್ಯೆಗಳ ಬಗ್ಗೆ ಪರಿಹಾರ ಕೈಗೊಂಡರೆ ನಿಮ್ಮಹಂತದಲ್ಲಿಯೇ ಬಗೆಹರಿಯುತ್ತಿದೆ ಇಲ್ಲವಾದರೆ ಜಿಲ್ಲಾದಿಕಾರಿಗಳು ಅಥವಾ ಮುಖ್ಯಮಂತ್ರಿಗಳ ಗಮನಕ್ಕೆ ಬರುವುದಿಲ್ಲ ಆದ್ದರಿಂದ ಎಲ್ಲಾ ಅಧಿಕಾರಿಗಳು ತಿಂಗಳ ಅಂತ್ಯಕ್ಕೆ ಎಷ್ಟು ಹಳ್ಳಿಗಳಿಗೆ ಭೇಟಿ ನೀಡಿ ಸಮಸ್ಯಗಳನ್ನು ಪರಿಹರಿಸಲಾಗಿದೆ ಎಂಬುದರ ಬಗ್ಗೆ ವರದಿ ನೀಡಲು ಸೂಚಿಸಲಾಯಿತು.

(ಕ್ರಮ: ಜಿಲ್ಲೆಯ ಎಲ್ಲಾ ಅಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ)

ಈ ಮೇಲ್ಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಿ ನೀಡಿದ ನಿರ್ದೇಶನಗಳಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೂ ಅನುಪಾಲನಾ ವರದಿಗಳನ್ನು ಸಲ್ಲಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು ನಂತರ ಇತರೆ ವಿಷಯ ಇಲ್ಲದೇ ಇರುವುದರಿಂದ ಜಿಲ್ಲಾಧಿಕಾರಿಗಳು ಚಿಕ್ಕಬಳ್ಳಾಪುರ ರವರು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

(ಡಾ॥ ಎನ್.ನಾಗಾಂಭಿಕಾದೇವಿ, ಭಾ.ಆ.ಸೇ.)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ ಮತ್ತು
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ, ಬೆಂಗಳೂರು.

<u>ಪ್ರತಿಯನ್ನು:</u>

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
5. ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ರವಾನಿಸುತ್ತಾ ಸಭಾ ನಡಾವಳಿಗೆ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.

6. ಜಿಲ್ಲೆಯ ಎಲ್ಲಾ ಆಯುಕ್ತರು.  ನಗರ ಸಭೆ / ಪೌರಾಯುಕ್ತರು ಪುರಸಭೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
7. ಹೆಚ್ಚುವರಿ ಪ್ರತಿ.

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಪ್ರತಿ ತಿಂಗಳು ಸರ್ಕಾರದ ಮುಖ್ಯಕಾರ್ಯದರ್ಶಿಯವರಿಗೆ ಸಲ್ಲಿಸಬೇಕಾದ ವರದಿಯ ನಮೂನೆ

| ಕ್ರ ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಬಳ್ಳಾರಿ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಹೆಸರು | ಗೌರವ ಗುಪ್ತ, ಭಾ.ಆ.ಸೇ |
| 3 | ಭೇಟಿಯಾದ / ಪ್ರವಾಸದ ದಿನಾಂಕ | 16.08.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಇದರೊಂದಿಗೆ ಲಗತ್ತಿಸಿದೆ. |

(ಗೌರವ ಗುಪ್ತ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
ಹಾಗೂ
ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿಆಸು ಇಲಾಖೆ – (ಆಸು),
ಬಹುಮಹಡಿ ಕಟ್ಟಡ.

**ದಿ:-16-08-2019 ರಂದು ಬೆಳಗ್ಗೆ 09.00 ಗಂಟೆಗೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕ ಇಲಾಖೆ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಹದ ಕುರಿತು ನಡೆದ ವಿಡಿಯೋ ಸಂವಾದದ ನಡವಳಿಗಳು**

********

ಹಾಜರಿದ್ದ ಅಧಿಕಾರಿಗಳು:-

1) ಜಿಲ್ಲಾಧಿಕಾರಿಗಳು, ಬಳ್ಳಾರಿ.
2) ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಬಳ್ಳಾರಿ.
3) ಅಪರ ಜಿಲ್ಲಾಧಿಕಾರಿಗಳು, ಬಳ್ಳಾರಿ.
4) ಸಹಾಯಕ ಆಯುಕ್ತರು, ಬಳ್ಳಾರಿ, ಹೊಸಪೇಟೆ ಮತ್ತು ಹರಪನಹಳ್ಳಿ.
5) ಜಂಟಿ ನಿವೇಶಕರು, ಕೃಷಿ ಇಲಾಖೆ, ಬಳ್ಳಾರಿ.
6) ಆಯುಕ್ತರು, ಮಹಾನಗರ ಪಾಲಿಕೆ, ಬಳ್ಳಾರಿ.
7) ಉಪ ನಿರ್ದೇಶಕರು, ತೋಟಗಾರಿಕೆ ಇಲಖೆ, ಬಳ್ಳಾರಿ.
8) ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಬಳ್ಳಾರಿ.
9) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.
10) ಕಾರ್ಯನಿರ್ವಾಹಕ ಅಭಿಯಂತರರು, RDWS & D , ಬಳ್ಳಾರಿ.
11) ಕಾರ್ಯನಿರ್ವಾಹಕ ಅಭಿಯಂತರರು, PWD , ಬಳ್ಳಾರಿ ಮತ್ತು ಹಡಗಲಿ.
12) ಕಾರ್ಯನಿರ್ವಾಹಕ ಅಭಿಯಂತರರು, PRED, ಬಳ್ಳಾರಿ ಮತ್ತು ಹಡಗಲಿ.
13) ಕಾರ್ಯನಿರ್ವಾಹಕ ಅಭಿಯಂತರರು, GESCOM, ಬಳ್ಳಾರಿ ಮತ್ತು ಹೊಸಪೇಟೆ.
14) ತಹಶೀಲ್ದಾರರು, ಬಳ್ಳಾರಿ, ಸಿರುಗುಪ್ಪ, ಸಂಡೂರು, ಕುರುಗೋಡು, ಹೊಸಪೇಟೆ, ಕಂಪ್ಲಿ, ಹ.ಬೊ.ಹಳ್ಳಿ, ಕೂಡ್ಲಿಗಿ, ಹಡಗಲಿ ಮತ್ತು ಹರಪನಹಳ್ಳಿ.
15) ಕಾರ್ಯನಿರ್ವಾಹಕ ಅಭಿಯಂತರರು, ಕೆ.ಯು.ಡಬ್ಲ್ಯು.ಎಸ್.ಡಿ. ಬಳ್ಳಾರಿ.

******

ಮಾನ್ಯ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ವಿಡಿಯೋ ಸಂವಾದದಲ್ಲಿ ಇದ್ದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸ್ವಾಗತಿಸಿದರು ಮತ್ತು ಆಗಸ್ಟ್ 2019ರ ತಿಂಗಳಲ್ಲಿ ರಾಜ್ಯಾದ್ಯಂತ ಧಾರಾಕಾರ ಮಳೆಯಿಂದ ಹಲವು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಸಂಭವಿಸಿದ್ದು, ತುಂಗಭದ್ರ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬಂದ ಕಾರಣ ಜಿಲ್ಲೆಯಲ್ಲಿ ಸಂಭವಿಸಿದ ಪ್ರವಾಹ ಪರಿಸ್ಥಿತಿ ಕುರಿತು ಮತ್ತು ಜಿಲ್ಲಾಡಳಿತ ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಲು ಜಿಲ್ಲಾಧಿಕಾರಿಗಳನ್ನು ಕೋರಿದರು.

ಜಿಲ್ಲಾಧಿಕಾರಿಗಳು ಬಳ್ಳಾರಿ ಇವರು ವಿವರಿಸುತ್ತಾ ಆಗಸ್ಟ್ 2019ರ ತಿಂಗಳಲ್ಲಿ ಮಲೆನಾಡು ಪ್ರದೇಶದಲ್ಲಿ ಹೆಚ್ಚಿನ ಮಳೆಯಿಂದ ತುಂಗ ಮತ್ತು ಭದ್ರ ಜಲಾಶಯ ಹಾಗೂ ವರದಾ ನದಿ ಉಕ್ಕಿ ಹರಿದ ಕಾರಣ ತುಂಗಭದ್ರ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬಂದು ಬಳ್ಳಾರಿ ಜಿಲ್ಲೆಯ ಹಿನ್ನೀರಿನ ತಾಲ್ಲೂಕುಗಳಾದ ಹರಪನಹಳ್ಳಿ ಮತ್ತು ಹಡಗಲಿ ಮತ್ತು ಸದರಿ ಜಲಾಶಯದಿಂದ ತುಂಗಭದ್ರ ನದಿಗೆ ಗರಿಷ್ಠ ಸುಮಾರು 2.50 ಲಕ್ಷ ಕ್ಯೂಸೆಕ್ಸ್ ನೀರು ಹರಿಸಿದ ಹಿನ್ನಲೆಯಲ್ಲಿ ನದಿ ತೀರದ ಬರುವ ಹೊಸಪೇಟೆ, ಕಂಪ್ಲಿ ಮತ್ತು ಸಿರುಗುಪ್ಪ

ತಾಲ್ಲೂಕುಗಳು ಭಾಗಶಃ ಪ್ರವಾಹಕ್ಕೆ ಒಳಗಾಗಿರುತ್ತವೆ ಎಂದು ತಿಳಿಸುತ್ತಾ ಈ ಕೆಳಕಂಡಂತೆ ತಾಲ್ಲೂಕುವಾರು ವಿವರವನ್ನು ನೀಡಿದರು.

## i) ಹಡಗಲಿ ತಾಲ್ಲೂಕು:-

1) ತುಂಗಭದ್ರ ಜಲಾಶಯದ ಹಿನ್ನೀರಿನ ಪ್ರವಾಹದಿಂದ ಹಡಗಲಿ ತಾಲ್ಲೂಕಿನ 20 ಗ್ರಾಮಗಳು ಭಾಗಶಃ ಪ್ರವಾಹಕ್ಕೆ ಒಳಗಾಗಿರುತ್ತವೆ.
2) 05 ಗ್ರಾಮಗಳಲ್ಲಿ (ಕರುವತ್ತಿ, ಬ್ಯಾಲಹುಣಸಿ, ಹರವಿ, ಅಂಗೂರು, ಕೋಂಬಳಿ ಗ್ರಾಮ) ಗಂಜೀ ಕೇಂದ್ರಗಳನ್ನು ತೆರೆದು ಅಂದಾಜು 784 ಜನರಿಗೆ ಆಶ್ರಯ ಮತ್ತು ಆಹಾರ ನೀಡಲಾಗಿದೆ.
3) ಸದರಿ ತಾಲ್ಲೂಕಿನಲ್ಲಿ ಸುಮಾರು 379 ಮನೆಗಳು ಹಾನಿಯಾಗಿದ್ದು ಈವರೆಗೆ ರೂ.7.07 ಲಕ್ಷ ಎಸ್.ಡಿ.ಆರ್.ಎಫ್. ನಿಧಿಯಡಿ ಪರಿಹಾರ ನೀಡಲಾಗಿದೆ. ಇನ್ನು ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ.
4) ಈವರೆಗೆ ಅಂದಾಜು 1567.25 ಹೆಕ್ಟರ್ ಮೆಕ್ಕೆಜೋಳ, ಕಬ್ಬು ಮತ್ತು ಭತ್ತ ಬೆಳೆಗಳು ನಷ್ಟಕ್ಕೊಳಗಾಗಿದ್ದು ಜಮೀನಿನಲ್ಲಿರುವ ನೀರಿನ ಪ್ರಮಾಣ ಇಳಿಮುಖವಾಗಿದ್ದು ಜಂಟಿ ಸಮೀಕ್ಷೆ ನಡೆಯುತ್ತಿದ್ದು ಪರಿಹಾರ ನೀಡಲು ಕ್ರಮಕೊಳ್ಳಲಾಗುವುದು.
5) ಸುಮಾರು 147 ಮನೆಗಳಲ್ಲಿ ನೀರು ನುಗ್ಗಿ ಬಟ್ಟೆ ಮತ್ತು ದಿನ ನಿತ್ಯದ ಸಾಮಾಗ್ರಿಗಳು ಹಾಳಾಗಿದ್ದು, ಎಸ್.ಡಿ.ಆರ್.ಎಫ್. ಕ್ರಮ.ಸಂಖ್ಯೆ 1(ಡಿ) ರಂತೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ.
6) 01 ಮೇಕೆ ಮತ್ತು 01 ಆಕಳು ಮೃತ ಪಟ್ಟಿದ್ದು, ಪರಿಹಾರ ನೀಡಲು ಕ್ರಮಕೈಳ್ಳಲಾಗಿದೆ.
7) ಜೆಸ್ಕಾಂ ಇಲಾಖೆಗೆ ಸಂಬಂಧ 250 ಎಲೆಕ್ಟ್ರಿಕ್ ಪೋಲ್, 58 ಟ್ರಾನ್ಸ್‌ಫಾರ್ಮರ್‌ಗಳು ಮತ್ತು 17 ಕಿ.ಮೀ. ಉದ್ದ ಕಂಡಕ್ಟರ್ ಹಾನಿಯಾಗಿದ್ದು, ಸದರಿ ಇಲಾಖೆಯಿಂದ ದುರಸ್ತಿ ಕಾರ್ಯ ಪ್ರಗತಿಯಲ್ಲಿರುತ್ತದೆ.

## ii) ಹರಪನಹಳ್ಳಿ ತಾಲ್ಲೂಕು:-

1) ತುಂಗಭದ್ರ ಜಲಾಶಯದ ಹಿನ್ನೀರಿನ ಪ್ರವಾಹದಿಂದ ಹರಪನಹಳ್ಳಿ ತಾಲ್ಲೂಕಿನ 08 ಗ್ರಾಮಗಳು ಭಾಗಶಃ ಪ್ರವಾಹಕ್ಕೆ ಒಳಗಾಗಿರುತ್ತವೆ.
2) 02 ಗ್ರಾಮಗಳಲ್ಲಿ (ನಿಟ್ಟೂರು ಮತ್ತು ಕಡತಿ ಗ್ರಾಮ) ಗಂಜೀ ಕೇಂದ್ರಗಳನ್ನು ತೆರೆದು ಅಂದಾಜು 210 ಜನರಿಗೆ ಆಶ್ರಯ ಮತ್ತು ಆಹಾರ ನೀಡಲಾಗಿದೆ.
3) ಸದರಿ ತಾಲ್ಲೂಕಿನಲ್ಲಿ ಸುಮಾರು 254 ಮನೆಗಳು ಹಾನಿಯಾಗಿದ್ದು ಈವರೆಗೆ ರೂ.11.29 ಲಕ್ಷ ಎಸ್.ಡಿ.ಆರ್.ಎಫ್. ನಿಧಿಯಡಿ ಪರಿಹಾರ ನೀಡಲಾಗಿದೆ. ಇನ್ನು ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ.
4) ಈವರೆಗೆ ಅಂದಾಜು 1480 ಹೆಕ್ಟರ್ ಮೆಕ್ಕೆಜೋಳ, ಭತ್ತ, ಹತ್ತಿ ಮತ್ತು ತೊಗರಿ ಬೆಳೆಗಳು ನಷ್ಟಕ್ಕೊಳಗಾಗಿದ್ದು ಜಮೀನಿನಲ್ಲಿರುವ ನೀರಿನ ಪ್ರಮಾಣ ಇಳಿಮುಖವಾಗಿದ್ದು ಜಂಟಿ ಸಮೀಕ್ಷೆ ನಡೆಯುತ್ತಿದ್ದು ಪರಿಹಾರ ನೀಡಲು ಕ್ರಮಕೊಳ್ಳಲಾಗುವುದು.
5) ಜೆಸ್ಕಾಂ ಇಲಾಖೆಗೆ ಸಂಬಂಧ 21 ಎಲೆಕ್ಟ್ರಿಕ್ ಪೋಲ್ ಹಾನಿಯಾಗಿದ್ದು, ಸದರಿ ಇಲಾಖೆಯಿಂದ ದುರಸ್ತಿ ಕಾರ್ಯ ಪ್ರಗತಿಯಲ್ಲಿರುತ್ತದೆ. 0.8 ಕಿ.ಮೀ. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಸಂಬಂಧ ರಸ್ತೆ ಹಾನಿಯಾಗಿರುತ್ತದೆ.

**iii) ಕಂಪ್ಲಿ ತಾಲ್ಲೂಕು:-**

1) ತುಂಗಭದ್ರ ಜಲಾಶಯದಿಂದ ನದಿಗೆ ಅಂದಾಜು 2.50 ಲಕ್ಷ ಕ್ಯೂಸೆಕ್ಸ್ ನೀರು ಹರಿಸಿದ ಕಾರಣ ಪ್ರವಾಹದಿಂದ ಕಂಪ್ಲಿ ತಾಲ್ಲೂಕಿನ 06 ಗ್ರಾಮಗಳು ಭಾಗಶಃ ಪ್ರವಾಹಕ್ಕೆ ಒಳಗಾಗಿರುತ್ತವೆ.
2) 01 ಗ್ರಾಮದಲ್ಲಿ (ಕಂಪ್ಲಿ ಗ್ರಾಮ ಕೋಟೆ ಪ್ರದೇಶ) ಗಂಜೀ ಕೇಂದ್ರವನ್ನು ತೆರೆದು ಅಂದಾಜು 277 ಜನರಿಗೆ ಆಶ್ರಯ ಮತ್ತು ಆಹಾರ ನೀಡಲಾಗಿದೆ.
3) ಈವರೆಗೆ ಅಂದಾಜು 271.06 ಹೆಕ್ಟರ್ ಬಾಳೆ, ಭತ್ತ, ಮತ್ತು ಕಬ್ಬು ಬೆಳೆಗಳು ನಷ್ಟಕ್ಕೊಳಗಾಗಿದ್ದು ಜಮೀನಿನಲ್ಲಿರುವ ನೀರಿನ ಪ್ರಮಾಣ ಇಳಿಮುಖವಾಗಿದ್ದು ಜಂಟಿ ಸಮೀಕ್ಷೆ ನಡೆಯುತ್ತಿದ್ದು ಪರಿಹಾರ ನೀಡಲು ಕ್ರಮಕೊಳ್ಳಲಾಗುವುದು.
4) ಕಂಪ್ಲಿ ಗ್ರಾಮದ ಕೋಟೆ ಪ್ರದೇಶದಲ್ಲಿ ಸುಮಾರು 52 ಮನೆಗಳಲ್ಲಿ ನೀರು ನುಗ್ಗಿ ಬಟ್ಟೆ ಮತ್ತು ದಿನ ನಿತ್ಯದ ಸಾಮಾಗ್ರಿಗಳು ಹಾಳಾಗಿದ್ದು, ಎಸ್.ಡಿ.ಆರ್.ಎಫ್. ಕ್ರಮ.ಸಂಖ್ಯೆ 1(ಡಿ) ರಂತೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ.
5) ಸದರಿ ತಾಲ್ಲೂಕಿನಲ್ಲಿ 01 ಮನೆ ಹಾನಿಯಾಗಿದೆ ಮತ್ತು ಜೆಸ್ಕಾಂ ಇಲಾಖೆಗೆ ಸಂಬಂಧ 99 ಎಲೆಕ್ಟ್ರಿಕ್ ಪೋಲ್ ಮತ್ತು 11 ಟ್ರಾನ್ಸ್‌ಫಾರ್ಮರ್‌ಗಳು ಹಾನಿಯಾಗಿದ್ದು, ಸದರಿ ಇಲಾಖೆಯಿಂದ ದುರಸ್ತಿ ಕಾರ್ಯ ಪ್ರಗತಿಯಲ್ಲಿರುತ್ತದೆ.

**iv) ಸಿರುಗುಪ್ಪ ತಾಲ್ಲೂಕು:-**

1) ತುಂಗಭದ್ರ ಜಲಾಶಯದಿಂದ ನದಿಗೆ ಅಂದಾಜು 2.50 ಲಕ್ಷ ಕ್ಯೂಸೆಕ್ಸ್ ನೀರು ಹರಿಸಿದ ಕಾರಣ ಪ್ರವಾಹದಿಂದ ಸಿರುಗುಪ್ಪ ತಾಲ್ಲೂಕಿನ 16 ಗ್ರಾಮಗಳು ಭಾಗಶಃ ಪ್ರವಾಹಕ್ಕೆ ಒಳಗಾಗಿರುತ್ತವೆ.
2) 03 ಗ್ರಾಮದಲ್ಲಿ (ಹಚ್ಚೊಳ್ಳಿ, ಬಾಗೇವಾಡಿ, ಚಿಕ್ಕಬಳ್ಳಾರಿ ಗ್ರಾಮ) ಗಂಜೀ ಕೇಂದ್ರವನ್ನು ತೆರೆದು ಅಂದಾಜು 2706 ಜನರಿಗೆ ಆಶ್ರಯ ಮತ್ತು ಆಹಾರ ನೀಡಲಾಗಿದೆ.
3) ಈವರೆಗೆ ಅಂದಾಜು 868 ಹೆಕ್ಟರ್ ಭತ್ತ, ಹತ್ತಿ, ಸಜ್ಜೆ ಮತ್ತು ಕಬ್ಬು ಬೆಳೆಗಳು ನಷ್ಟಕ್ಕೊಳಗಾಗಿದ್ದು ಜಮೀನಿನಲ್ಲಿರುವ ನೀರಿನ ಪ್ರಮಾಣ ಇಳಿಮುಖವಾಗಿದ್ದು ಜಂಟಿ ಸಮೀಕ್ಷೆ ನಡೆಯುತ್ತಿದ್ದು ಪರಿಹಾರ ನೀಡಲು ಕ್ರಮಕೊಳ್ಳಲಾಗುವುದು.
4) ಜೆಸ್ಕಾಂ ಇಲಾಖೆಗೆ ಸಂಬಂಧ 439 ಎಲೆಕ್ಟ್ರಿಕ್ ಪೋಲ್ ಮತ್ತು 88 ಟ್ರಾನ್ಸ್‌ಫಾರ್ಮರ್‌ಗಳು ಹಾನಿಯಾಗಿದ್ದು, ಸದರಿ ಇಲಾಖೆಯಿಂದ ದುರಸ್ತಿ ಕಾರ್ಯ ಪ್ರಗತಿಯಲ್ಲಿರುತ್ತದೆ.

**v) ಹೊಸಪೇಟೆ ತಾಲ್ಲೂಕು:-**

1) ತುಂಗಭದ್ರ ಜಲಾಶಯದ ಪ್ರವಾಹದಿಂದ ಹೊಸಪೇಟೆ ತಾಲ್ಲೂಕಿನ 08 ಗ್ರಾಮಗಳು ಭಾಗಶಃ ಪ್ರವಾಹಕ್ಕೆ ಒಳಗಾಗಿರುತ್ತವೆ.
2) ಈವರೆಗೆ ಅಂದಾಜು 80.42 ಹೆಕ್ಟರ್ ಭತ್ತ, ಹತ್ತಿ, ಸಜ್ಜೆ ಮತ್ತು ಕಬ್ಬು ಬೆಳೆಗಳು ನಷ್ಟಕ್ಕೊಳಗಾಗಿದ್ದು ಜಮೀನಿನಲ್ಲಿರುವ ನೀರಿನ ಪ್ರಮಾಣ ಇಳಿಮುಖವಾಗಿದ್ದು ಜಂಟಿ ಸಮೀಕ್ಷೆ ನಡೆಯುತ್ತಿದ್ದು ಪರಿಹಾರ ನೀಡಲು ಕ್ರಮಕೊಳ್ಳಲಾಗುವುದು.
3) ಜೆಸ್ಕಾಂ ಇಲಾಖೆಗೆ ಸಂಬಂಧ 37 ಎಲೆಕ್ಟ್ರಿಕ್ ಪೋಲ್ ಮತ್ತು 9 ಟ್ರಾನ್ಸ್‌ಫಾರ್ಮರ್‌ಗಳು ಹಾನಿಯಾಗಿದ್ದು, ಸದರಿ ಇಲಾಖೆಯಿಂದ ದುರಸ್ತಿ ಕಾರ್ಯ ಪ್ರಗತಿಯಲ್ಲಿರುತ್ತದೆ.

**ಜಿಲ್ಲಾಡಳಿತ ಕೈಗೊಂಡ ಕ್ರಮಗಳ ಬಗ್ಗೆ ಜಿಲ್ಲಾಧಿಕಾರಿಗಳು ಈ ಕೆಳಕಂಡತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳ ಗಮನಕ್ಕೆ ತಂದರು,**

1) ಸಿರುಗುಪ್ಪ, ಹಡಗಲಿ, ಹರಪನಹಳ್ಳಿ, ಹ.ಬೊ.ಹಳ್ಳಿ, ಕಂಪ್ಲಿ ಮತ್ತು ಹೊಸಪೇಟೆ ತಾಲ್ಲೂಕುಗಳಲ್ಲಿ ಪ್ರವಾಹಕ್ಕೆ ಸಿಲುಕುವ ಹಳ್ಳಿಗಳನ್ನು ಈಗಾಗಲೇ ಗುರುತಿಸಿ ಅಲ್ಲಿನ ಜನರಿಗೆ ಟಾಂ ಟಾಂ ಮೂಲಕ ಪ್ರವಾಹದ ಮುನ್ನೆಚ್ಚರಿಕೆ ಮತ್ತು ಅರಿವು ಮೂಡಿಸಲಾಗಿತ್ತು. ಪ್ರವಾಹಕ್ಕೀಡಾದ ಗ್ರಾಮಗಳ ಸಂಖ್ಯೆ ಈ ಕೆಳಕಂಡಂತೆ ಇದೆ ಎಂದು ತಿಳಿಸಿದರು.

| ಕ್ರ.ಸಂ | ತಾಲ್ಲೂಕು ಹೆಸರು | ಪ್ರವಾಹಕ್ಕೆ ತುತ್ತಾಗುವ ಗ್ರಾಮಗಳ ಸಂಖ್ಯೆ |
|---|---|---|
| 1 | ಬಳ್ಳಾರಿ | 00 |
| 2 | ಸಿರುಗುಪ್ಪ | 22 |
| 3 | ಸಂಡೂರು | 00 |
| 4 | ಹೊಸಪೇಟೆ | 06 |
| 5 | ಹ.ಬೊ.ಹಳ್ಳಿ | 00 |
| 6 | ಹಡಗಲಿ | 05 |
| 7 | ಕೂಡ್ಲಿಗಿ | 00 |
| 8 | ಹರಪನಹಳ್ಳಿ | 08 |
| ಒಟ್ಟು | | 41 |

2) 05 ಜನ ವುಳ್ಳ 02 Quick Response Team ಅನ್ನು ಒಂದು ಮೋಟರ್ ಬೋಟ್, ರಬ್ಬರ್ ಬೋಟ್, ಓ.ಬಿ.ಎಮ್., ಪೆಡಲ್, 30 ಲೈಫ್ ಜಾಕೆಟ್ ಮತ್ತು ಇತರೆ ಸಾಮಾಗ್ರಿಗಳನ್ನು ದೊಂದಿಗೆ ಒಂದು ತಂಡ ಹರಪನಹಳ್ಳಿ ತಾಲ್ಲೂಕಿನಲ್ಲಿ ಮತ್ತು ಇನ್ನೊಂದು ತಂಡ ಸಿರುಗುಪ್ಪ ತಾಲ್ಲೂಕಿನಲ್ಲಿ ಸಿದ್ಧ ಇರಿಸಿ ಪ್ರವಾಹ ಪರಿಸ್ಥಿಯಿಯನ್ನು ಸಮರ್ಪಕವಾಗಿ ನಿರ್ವಹಿಸಲಾಗಿರುತ್ತದೆ ಎಂದು ತಿಳಿಸಿದರು.

3) ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕಂಟ್ರೋಲ್ ರೂಂ (08392-277209) ತೆರೆದು ದಿನದ 24 ಗಂಟೆಗಳ ಕಾಲ ಸಿಬ್ಬಂದಿಯನ್ನು ನಿಯೋಜಿಸಿ ದೂರುಗಳನ್ನು ಸ್ವೀಕರಿಸಲಾಗುತ್ತಿದೆ. ತಾಲ್ಲೂಕುಗಳಲ್ಲಿ ತೆರೆಯಲಾದ ಕಂಟ್ರೋಲ್ ರೂಂ ಸಂಖ್ಯೆ ಈ ಕೆಳಕಂಡಂತೆ ಇದೆ ಎಂದು ತಿಳಿಸಿದರು.

| ಕ್ರ.ಸಂ | ತಾಲ್ಲೂಕು ಹೆಸರು | ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ |
|---|---|---|
| 1 | ಸಿರುಗುಪ್ಪ | 08396-220238 |
| 2 | ಹೊಸಪೇಟೆ | 08394-232209 |
| 3 | ಹ.ಬೊ.ಹಳ್ಳಿ | 08397-238255 |
| 4 | ಹಡಗಲಿ | 08399-240238/240338 |
| 5 | ಹರಪನಹಳ್ಳಿ | 08398-280262 |

4) ದಿ:-08-08-2019 ರಂದು ಜಿಲ್ಲಾಧಿಕಾರಿಗಳು ಪ್ರವಾಹಕ್ಕೆ ಸಂಬಂಧಿಸಿದ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರವಾಹದ ಕುರಿತು ಕೈಗೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿತ್ತು. ಅದರಂತೆ ಎಲ್ಲಾ ಪ್ರವಾಹ ಪೀಡಿತ ತಾಲ್ಲೂಕುಗಳಲ್ಲಿ ಕ್ರಮ ವಹಿಸಲಾಗಿರುತ್ತದೆ ಎಂದು ತಿಳಿಸಿದರು.

5) ದಿ:10-08-19 ರಂದು ಜಿಲ್ಲಾಧಿಕಾರಿಗಳೂ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಂಟಿಯಾಗಿ ಹಡಗಲಿ ಮತ್ತು ಹರಪನಹಳ್ಳಿ ತಾಲ್ಲೂಕು ಮತ್ತು ದಿ:11-8-2019 ರಂದು ಸಿರುಗುಪ್ಪ ಮತ್ತು ಕಂಪ್ಲಿ ತಾಲ್ಲೂಕು ಮತ್ತು ದಿ:12-8-2019 ರಂದು ಹೊಸಪೇಟೆ ತಾಲ್ಲೂಕು ನದಿ ತೀರದ ಗ್ರಾಮಗಳಿಗೆ ಭೇಟಿ ನೀಡಿ ಪ್ರವಾಹದ ಕುರಿತು ಕೈಗೊಂಡಿರುವ ಮುಂಜಾಗ್ರತ ಕ್ರಮಗಳ ಬಗ್ಗೆ ಪರಿಶೀಲಿಸಿದರು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ

ನಡೆಸಿದರು. ಅಧಿಕಾರಿಗಳು ತಮ್ಮ ತಮ್ಮ ಕೇಂದ್ರ ಸ್ಥಾನದಲ್ಲಿದ್ದು, ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

6) ಆರೋಗ್ಯ ಇಲಾಖೆಯ ಔಷಧಗಳಿಗೆ ಸಂಬಂಧಿಸಿದಂತೆ ಮತ್ತು ಆಹಾರ ಇಲಾಖೆಯ ಆಹಾರ ಸಾಮಾಗ್ರಿಗಳನ್ನು ಗಂಜೀ ಕೇಂದ್ರ ತೆರೆಯಲು ಗುರುತಿಸಿದ ಸ್ಥಳಗಳಲ್ಲಿ ಸಾಕಷ್ಟು ದಾಸ್ತಾನು ಮಾಡಿ ಇಟ್ಟುಕೊಳ್ಳಲಾಗಿದೆ ಎಂದು ತಿಳಿಸಿದರು.

**ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳ ಮಾತನಾಡುತ್ತಾ ಈ ಕೆಳಕಂಡ ಸೂಚನೆಗಳನ್ನು ನೀಡಿದರು,**

1) ಹಡಗಲಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಮಳೆಯಿಂದ/ಪ್ರವಾಹದಿಂದ ಸಂಭವಿಸಿದ ಎಲ್ಲಾ ಮನೆ ಹಾನಿಗಳಿಗೆ ಒಂದು ವಾರದೊಳಗೆ ಎಸ್.ಡಿ.ಆರ್.ಎಫ್. ಮಾರ್ಗಸೂಚಿಯ ಪ್ರಕಾರ ಪರಿಹಾರ ವಿತರಣೆ ಮಾಡಲು ಸೂಚಿಸಿದರು.
2) ಜಿಲ್ಲೆಯಲ್ಲಿ ಪ್ರವಾಹದಿಂದ ಸಂಭವಿಸಿರುವ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಹಾನಿಯ ಕುರಿತು ಕಂದಾಯ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯವರು ಜಂಟಿಯಾಗಿ ಸಮೀಕ್ಷೆ ಈ ಕೂಡಲೇ ಕೈಗೊಂಡು ಒಂದು ವಾರದೊಳಗೆ ಸಮೀಕ್ಷೆ ಪೂರ್ಣಗೊಳಿಸಿ, ಸಂಬಂಧಪಟ್ಟ ತಹಶೀಲ್ದಾರರು ನಿಯಮಾನುಸಾರ ಪರಿಹಾರ ನೀಡಲು ಸೂಚಿಸಿದರು.
3) ಜೆಸ್ಕಾಂ ಇಲಾಖೆಯವರು ಕೂಡಲೇ ತಮ್ಮ ಇಲಾಖೆಗೆ ಸಂಬಂಧ ಆದ ಹಾನಿಯ ಕುರಿತು ಪರಿಶೀಲಿಸಿ, ಇಲಾಖಾ ವತಿಯಿಂದ ದುರಸ್ತಿ ಕಾರ್ಯ ಕೈಗೊಳ್ಳಲು ಜೆಸ್ಕಾಂ ಇಲಾಖೆಯವರಿಗೆ ಸೂಚಿಸಿದರು.
4) ಕಾರ್ಯನಿರ್ವಾಹಕ ಅಭಿಯಂತರರು, PWD & PRED, ಇಲಾಖೆಯವರಿಗೆ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವ ರೋಡ್ ಮತ್ತು ಬ್ರಿಡ್ಜಸ್‌ಗಳು ಹಾನಿಯಾದ ಕುರಿತು ಪರಿಶೀಲಿಸಿ ಒಂದು ವಾರದೊಳಗೆ ತಹಶೀಲ್ದಾರರಿಗೆ ಮಾಹಿತಿಯನ್ನು ನೀಡಲು ಸೂಚಿಸಿದರು.
5) ಪ್ರವಾಹಕ್ಕೆ ಒಳಗಾಗುವ ತಾಲ್ಲೂಕುಗಳ ತಾಲ್ಲೂಕು ಕಛೇರಿಗಳಲ್ಲಿ 24 ಗಂಟೆಗಳ ಕಾಲ ಕಂಟ್ರೋಲ್ ರೂಂ ತೆರೆದು ಸಿಬ್ಬಂದಿಯನ್ನು ನಿಯೋಜಿಸಿ ಕಾರ್ಯನಿರ್ವಹಿಸಲು ಸೂಚಿಸಿದರು.
6) ಪೋಲೀಸ್ ಇಲಾಖೆ, ಅಗ್ನಿ ಶಾಮಕ ಇಲಾಖೆ ಮತ್ತು ಗೃಹ ರಕ್ಷಕ ಇಲಾಖೆಗಳ ಅಧಿಕಾರಿಗಳಿಗೆ ಪ್ರವಾಹಕ್ಕೆ ಒಳಗಾಗುವ ತಾಲ್ಲೂಕುಗಳಲ್ಲಿ ಎಲ್ಲಾ ಮುಂಜಾಗೃತ ಕ್ರಮ ಕೈಗೊಂಡು ತಮ್ಮ ಇಲಾಖೆಯ ಸಿಬ್ಬಂದಿಯನ್ನು ಸಿದ್ಧ ಇಡಲು ಸೂಚಿಸಿದರು.

ಧನ್ಯವಾದಗಳೊಂದಿಗೆ ವಿಡಿಯೋ ಸಂವಾದ ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ವಾಣಿಜ್ಯ ಮತು ಕೈಗಾರಿಕ ಇಲಾಖೆ,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಳ್ಳಾರಿ ಜಿಲ್ಲೆ,
ಬಳ್ಳಾರಿ.

ಕರ್ನಾಟಕ ಸರ್ಕಾರ

ಸಂ:ಮುಮಇ ಪ್ರಕಾ ಆಶಾ 08 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 22-8-2019

ಟಿಪ್ಪಣಿ

ಶ್ರೀಮತಿ ಉಮಾ ಮಹಾದೇವನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ದಿನಾಂಕ: 10-8-2019ರಂದು ಕೋಲಾರ ಜಿಲ್ಲಾ ಅಸ್ಪತ್ರೆಗೆ ಬೇಟಿ ನೀಡಿ, ಪರಿಶೀಲನೆಯನ್ನು ನಡೆಸಿದ್ದು, ಅದರ ಪರಿವೀಕ್ಷಣಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ

22/8/19

for ಆಪ್ತ ಕಾರ್ಯದರ್ಶಿ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಶಾಖೆ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ,
ಸಿಆಸುಇ(ಆಡಳಿತ ಸುಧಾರಣೆ)
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

23/8/19

**ಶ್ರೀಮತಿ ಉಮಾ ಮಹಾದೇವನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ದಿನಾಂಕ:10-08-2019 ರಂದು ಕೋಲಾರ ಜಿಲ್ಲೆಯ ಪರಿವೀಕ್ಷಣೆ ಮಾಡಿದ ಬಗ್ಗೆ ವರದಿ.**

===

ಕೋಲಾರ ಜಿಲ್ಲೆಯ ಪ್ರಸ್ತುತ ಬರ ಪರಿಸ್ಥಿತಿಯ ಬಗ್ಗೆ ಪರಿವೀಕ್ಷಣೆಗಾಗಿ ಪ್ರವಾಸ ಕೈಗೊಳ್ಳಲಾಯಿತು. ಪ್ರಸ್ತುತ, ಕೋಲಾರ ಜಿಲ್ಲೆಯಲ್ಲಿ 1ನೇ ಜೂನ್‌ರಿಂದ ಆಗಷ್ಟ್, 2019ರ ವರೆಗಿನ ಪಶ್ಚಿಮ ನೈರುತ್ಯ ಋತುಮಾನದಲ್ಲಿ ಶೇಕಡ 27% ಮಳೆಯ ಕೊರತೆಯಾಗಿದೆ. 11 ಹೋಬಳಿಗಳಲ್ಲಿ ಶೇಕಡ 50% ಕ್ಕಿಂತ ಹೆಚ್ಚು ಮಳೆಯ ಕೊರತೆಯಾಗಿರುತ್ತದೆ. ಬಿತ್ತನೆ ಕಾರ್ಯವು ಶೇಕಡ 36% ರಷ್ಟು ಆಗಿರುತ್ತದೆ. ಜಿಲ್ಲೆಯಲ್ಲಿ 12 ವಾರಗಳಿಗೆ ಸಾಕಾಗುವಷ್ಟು ಮೇವಿನ ಲಭ್ಯತೆಯಿರುತ್ತದೆ.

ಜಿಲ್ಲೆಯ 80 ವಾರ್ಡುಗಳಿಗೆ 28 ಖಾಸಗಿ ಟ್ಯಾಂಕರ್‌ಗಳ ಮೂಲಕ ಹಾಗೂ 14 ಟ್ಯಾಂಕರ್‌ಗಳ ಮೂಲಕ 105 ಟ್ರಿಪ್‌ಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಕುಡಿಯುವ ನೀರಿನ ತೀವ್ರ ಸಮಸ್ಯೆಯಿರುವ 163 ಹಳ್ಳಿಗಳಿಗೆ 90 ಖಾಸಗಿ ಟ್ಯಾಂಕರ್‌ಗಳ ಮೂಲಕ ದಿನಕ್ಕೆ 43 ಟ್ಯಾಂಕರ್‌ಗಳಂತೆ 230 ಟ್ರಿಪ್ ಮೂಲಕ ಹಾಗೂ 73 ಹಳ್ಳಿಗಳಿಗೆ ಖಾಸಗಿ ಬೋರ್‌ವೆಲ್‌ನಿಂದಲೂ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ.

ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆಯನ್ನು ಪರಿವೀಕ್ಷಣೆ ಮಾಡಲಾಯಿತು. ಇದರಲ್ಲಿ ಎಂ.ಸಿ.ಹೆಚ್. ಬ್ಲಾಕ್, ಕ್ಯಾಜುಯಾಲಿಟಿ, ರೇಡಿಯಾಲಜಿ, ಸಿಟಿ ಸ್ಕಾನಿಂಗ್, ಎಂ.ಆರ್.ಐ. ಡಯಾಲಿಸಿಸ್ ಯೂನಿಟ್, ಲೇಬರ್ ರೂಮ್, ಕಾಂಗರೂ ಮದರ್ ಕೇರ್, ವಿಶೇಷ ನವಜಾತ ಶಿಶುಗಳ ಯೂನಿಟ್ ಮತ್ತು ಒ.ಪಿ.ಡಿ ಯನ್ನು ಪರಿವೀಕ್ಷಣೆ ಮಾಡಲಾಯಿತು.

ಕೋಲಾರ ಜಿಲ್ಲೆಯ ಎಸ್.ಎನ್.ಆರ್. ಆಸ್ಪತ್ರೆ 1932ರಲ್ಲಿ ಪ್ರಾರಂಭವಾಗಿದ್ದು, ಮೊದಲಿಗೆ 265 ಹಾಸಿಗೆಗಳ ಆಸ್ಪತ್ರೆಯಾಗಿದ್ದು, ಪ್ರಸ್ತುತ 450 ಹಾಸಿಗೆಗಳ ಆಸ್ಪತ್ರೆಯಾಗಿದೆ. ಇದರ ಜೊತೆಗೆ ಇನ್ನೂ 100 ಹಾಸಿಗೆಗಳ ಹೊಸ M.C.H. ಬ್ಲಾಕ್ ತೆರೆಯಲು ಸಜ್ಜಾಗುತ್ತಿದೆ. ಇದು ತೆರೆದ ನಂತರ, ಜಿಲ್ಲೆಗೆ ಇನ್ನೂ ಹೆಚ್ಚಿಗೆ 100 ಹಾಸಿಗೆಗಳ ಆಸ್ಪತ್ರೆ ಆಗಲಿದೆ. ಹೆರಿಗೆ ಕೊಠಡಿ ಎಂ.ಸಿ.ಹೆಚ್ ಬ್ಲಾಕ್‌ಗೆ ಸ್ಥಳಾಂತರಗೊಳ್ಳುತ್ತವೆ. ಹೆರಿಗೆ ಕೊಠಡಿ, ಆಪರೇಷನ್ ಥಿಯೇಟರ್‌ಗಳನ್ನು ವೀಕ್ಷಣೆ ಮಾಡಲಾಯಿತು. ಆಸ್ಪತ್ರೆಯಲ್ಲಿನ ಒಟ್ಟು ಸಿಬ್ಬಂದಿಗಳ ಕೊರತೆ, ಬ್ಲಡ್ ಬ್ಯಾಂಕ್, ಅಂಬುಲೆನ್ಸ್, ಆಸ್ಪತ್ರೆ ತ್ಯಾಜ್ಯ ವಿಲೇವಾರಿ ಇವುಗಳ ಬಗ್ಗೆ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಇತರೆ ವೈದ್ಯಾಧಿಕಾರಿಗಳ ಜೊತೆಯಲ್ಲಿ ಚರ್ಚಿಸಲಾಯಿತು.

ಜಿಲ್ಲಾ ಶಸ್ತ್ರಚಿಕಿತ್ಸಕರು ತಿಳಿಸಿದಂತೆ, ಆಸ್ಪತ್ರೆಯಲ್ಲಿ ಅಂದಾಜು 30 ಸಿಟಿ ಸ್ಕಾನ್, 15 ಎಂ.ಆರ್.ಐ. 50 ರಿಂದ 60 ಅಲ್ಟ್ರಾ ಸೌಂಡ್ ಪ್ರತಿ ದಿನ ನಡೆಯುತ್ತಿದೆ. ಡಯಾಲಿಸಿಸ್‌ಗಾಗಿ 10 ಹಾಸಿಗೆಗಳು ಇವೆ, ಇದರಲ್ಲಿ 8 ರೇನಿಯಲ್ ಮತ್ತು 2 ಇನ್‌ಫೆಕ್ಟೆಡ್ ಕೇಸ್‌ಗಳಿಗೆ 3 ಪಾಳಿ(ಶಿಫ್ಟ್)ಗಳಲ್ಲಿ ಡಯಾಲಿಸಿಸ್ ಮಾಡಲಾಗುತ್ತಿದೆ. ತುರ್ತು ಸೇವಾ ವಿಭಾಗದಲ್ಲಿ ಪ್ರತಿ ದಿನ (OPD) 100 ರಿಂದ 200 ಜನ ಸಾಮಾನ್ಯ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಹೊರ ರೋಗಿಗಳಾಗಿ 1500-2000 ಜನ ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಒಟ್ಟು 40,000 ರೋಗಿಗಳು(ಹೊರ ರೋಗಿಗಳು ಸೇರಿ) ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ ಅಸ್ಪತ್ರೆಯಲ್ಲಿ ಮುಖ್ಯವಾಗಿ ಸಿಬ್ಬಂದಿಗಳ ಕೊರತೆಯನ್ನು ಎದುರಿಸುತ್ತಿದ್ದು, ಕ್ಯಾಜುಯಾಲಿಟಿ ಮೆಡಿಕಲ್ ಆಫೀಸರ್, ಪ್ರಯೋಗಾಲಯ ತಂತ್ರಜ್ಞರು, ಶುಶ್ರೂಷಕಿಯರು ಮತ್ತು ಗ್ರೂಪ್ ಡಿ ಸಿಬ್ಬಂದಿಗಳ ಕೊರತೆ ಇರುತ್ತದೆ ಯೂರಾಲಜಿ ವಿಭಾಗಕ್ಕೆ ವೈದ್ಯಕೀಯ ಉಪಕರಣಗಳ ಅವಶ್ಯಕತೆ ಇರುತ್ತದೆ. ಈ ವಿಷಯಗಳ ಬಗ್ಗೆ ಪ್ರಸ್ತಾವನೆಯನ್ನು ರಾಜ್ಯ ನಿರ್ದೇಶಕರಿಗೆ ಸಲ್ಲಿಸಲಾಗಿರುತ್ತದೆ. ಬ್ಲಡ್ ಬ್ಯಾಂಕ್, ಆಂಬುಲೆನ್ಸ್ ಬೇಕಾಗಿರುತ್ತದೆ. ತೀವ್ರ ನಿಗಾ ಘಟಕ(ಐ.ಸಿ.ಯು)ಗೆ ಪ್ಯಾರಾ ಮೆಡಿಕಲ್ ಸಿಬ್ಬಂದಿ ಹಾಗೂ ಪರಿಣಿತ ತಜ್ಞರು ಬೇಕಾಗಿರುತ್ತಾರೆ. ಎ.ಬಿ.ಎ.ಆರ್.ಕೆ ಇದರಲ್ಲಿ 1400 ಕ್ಲೇಮ್‌ಗಳು ಬಂದಿರುತ್ತವೆ.

ಟಾಟಾ ಟ್ರಸ್ಟ್‌ರವರೊಂದಿಗೆ ಒಡಂಬಡಿಕೆ(ಎಂ.ಒ.ಯು) ಮೂಲಕ ನರರೋಗ ವಿಭಾಗಕ್ಕಾಗಿ ಯೋಜನೆ ಇದ್ದು, ಯಶಸ್ವಿಯಾಗಿ ನಡೆಯುತ್ತಿತ್ತು. ಇದನ್ನು ಮುಂದುವರಿಸುವ ಅವಶ್ಯಕತೆ ಇರುತ್ತದೆ.

ರಾಷ್ಟ್ರೀಯ ಉಚಿತ ಔಷಧಿ ಯೋಜನೆಯ ಒಟ್ಟು ಅವಶ್ಯಕ ಅಂದಾಜು 300 ಔಷಧಿಗಳಲ್ಲಿ 140 ಔಷಧಿಗಳು ದೊರೆಯುತ್ತಿದ್ದು, ಎಸ್.ಎನ್.ಆರ್. ಹಾಸ್ಪಿಟಲ್‌ಗೆ ಇನ್ನು ಹೆಚ್ಚಿನ ಔಷಧಿಗಳ ಬೇಡಿಕೆ ಇರುತ್ತದೆ.

ಬೆಂಗಳೂರಿನಿಂದ ಕೋಲಾರಕ್ಕೆ ಕೆ.ಸಿ.ವ್ಯಾಲಿ ನೀರನ್ನು ಸಂಸ್ಕರಿಸಿ ಸರಬರಾಜು ಮಾಡಲಾಗುತ್ತಿದೆ. ಇದರ ಪಂಪಿಂಗ್ ಸ್ಟೇಷನ್ ಕಾರ್ಯನಿರ್ವಹಣೆಯನ್ನು ಪರಿವೀಕ್ಷಿಸಲು ಭೇಟಿ ಮಾಡಲಾಯಿತು. ಮೊದಲ ಹಂತದಲ್ಲಿ 136 ಕೆರೆಗಳನ್ನು ತುಂಬಿಸುವ ಯೋಜನೆಯಲ್ಲಿ, ಈಗಾಗಲೇ 20 ಕೆರೆಗಳು ತುಂಬಿರುತ್ತವೆ. ಇದರಿಂದ ಫಲಾನುಭವಿಗಳಾದ ರೈತರನ್ನು ಭೇಟಿ ಮಾಡಿ ಚರ್ಚಿಸಲಾಯಿತು. ಕೆಲವು ರೈತರುಗಳು ನೀಲಗಿರಿ ತೋಪನ್ನು ತೆರವುಗೊಳಿಸಿ ಭತ್ತದ ಬೆಳೆಯನ್ನು ಬಿತ್ತನೆ ಮಾಡಿರುತ್ತಾರೆ. ಕೆ.ಸಿ.ವ್ಯಾಲಿಯಿಂದ ಸಂಸ್ಕರಿಸಿದ ನೀರಿನಿಂದಾಗಿ ಕೊಲಾರ ಜಿಲ್ಲೆಗೆ ಅನುಕೂಲವಾಗುತ್ತಿದೆ ಎಂಬ ಅಭಿಪ್ರಾಯವನ್ನು ಅಲ್ಲಿಯ ಜನರು ವ್ಯಕ್ತಪಡಿಸಿದರು. ಈ ಯೋಜನೆಯ ಮುಂದಿನ ಹಂತದ ಬಗ್ಗೆ ಹಾಗೂ ನೀರಿನ ಗುಣಮಟ್ಟವನ್ನು ಪರಿಶೀಲಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

22/8/19.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,

**ಶ್ರೀ ಎಸ್.ಆರ್. ಉಮಾಶಂಕರ್, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ದಾವಣಗೆರೆ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ, ಬರ ನಿರ್ವಹಣೆ ಮತ್ತು ಪ್ರಗತಿ ಪರಿಶೀಲನೆ ಕುರಿತು ದಿ:5.8.2019ರಂದು ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿ ಜರುಗಿದ ಸಭೆಯ ನಡಾವಳಿ.**

ಸಭೆಯಲ್ಲಿ ಉಪಸ್ಥಿತರು: ಜಿಲ್ಲಾಧಿಕಾರಿಗಳು ದಾವಣಗೆರೆ ಜಿಲ್ಲೆ, ಅಪರ ಜಿಲ್ಲಾಧಿಕಾರಿಗಳು ದಾವಣಗೆರೆ ಜಿಲ್ಲೆ, ಹಾಗೂ ದಾವಣಗೆರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲೆಯ ಎಲ್ಲಾ ತಹಶೀಲ್ದಾರರು.

ಮಾನ್ಯ ಅಧ್ಯಕ್ಷರು ಸಭೆಗೆ ಆಗಮಿಸಿದ ಎಲ್ಲ ಅಧಿಕಾರಿಗಳನ್ನು ಸಭೆಯ ಪ್ರಾರಂಭದಲ್ಲಿ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

1) **ಋತುಮಾನ ಪರಿಸ್ಥಿತಿ :** ದಾವಣಗೆರೆ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ವಾಡಿಕೆಯಂತೆ 202 ಎಂ.ಎಂ ಮಳೆ ಆಗಬೇಕಾಗಿದ್ದು, ಆದರೆ, ವಾಸ್ತವಿಕವಾಗಿ ಜೂನ್-1 ರಿಂದ ಆಗಸ್ಟ್-3ರವರೆಗೆ 149 ಎಂ.ಎಂ. ಮಳೆಯಾಗಿದೆ. ಇದರಿಂದ ಅನಾವೃಷ್ಟಿ ಈ ಬಾರಿಯು ತಲೆದೋರಿದ್ದು, ಶೇ27ರಷ್ಟು ಮಳೆ ಕೊರತೆಯುಂಟಾಗಿರುತ್ತದೆ. ಈ ಅನಾವೃಷ್ಟಿ ಕಾರಣದಿಂದ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಬಿತ್ತನೆಯ ವಿಸ್ತೀರ್ಣ ಕಡಿಮೆಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ದಾವಣಗೆರೆ ಇವರು ಸಭೆಯ ಗಮನಕ್ಕೆ ತಂದರು. ತಹಶೀಲ್ದಾರ್, ಚನ್ನಗಿರಿ ಇವರು ಮಾತನಾಡಿ ಬಸವಾಪಟ್ಟಣ 1 ಮತ್ತು 2ನೇ ಹೋಬಳಿ ಪೂರ್ಣ ನೀರಾವರಿ ಪ್ರದೇಶವಾಗಿದ್ದರೂ ಸಹ ಹಿಂದಿನ 3, 4 ಅವಧಿಯಲ್ಲಿ ಭತ್ತದ ಬೆಳೆಯನ್ನು ಬೆಳೆಯಲಾಗಿಲ್ಲವೆಂದು ಸಭೆಗೆ ತಿಳಿಸಿರುತ್ತಾರೆ. ಆದ್ದರಿಂದ ನೀರಾವರಿ ಪ್ರದೇಶದಲ್ಲಿ ಅತೀ ಕಡಿಮೆ ನೀರಿನಿಂದ ಬೆಳೆಯುವ ಬೆಳೆಗಳನ್ನು ಬೆಳೆಯಲು ರೈತರಿಗೆ ಅರಿವು ಮೂಡಿಸುವಂತೆ ಸೂಚಿಸಲಾಯಿತು ಅಥವಾ ಸದರಿ ಜಮೀನುಗಳಲ್ಲಿ ಮೇವು ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಿಸುವಂತೆ ಸೂಚಿಸಲಾಯಿತು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ & ಪಶುಸಂಗೋಪನೆ ಇಲಾಖೆ, ತಹಶೀಲ್ದಾರರು)**

2) **ಕುಡಿಯುವ ನೀರು :** ಗ್ರಾಮೀಣ ಪ್ರದೇಶದಲ್ಲಿ ಟ್ಯಾಂಕರ್ ಮೂಲಕ ಹಾಗೂ ಖಾಸಗಿ ಬೋರ್‌ವೆಲ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಹಶೀಲ್ದಾರ್ ದಾವಣಗೆರೆ ಮತ್ತು ಜಗಳೂರು ಇವರು ಸಭೆಯ ಗಮನಕ್ಕೆ ತಂದರು. ಜಗಳೂರು ತಾಲ್ಲೂಕಿನ 57 ಗ್ರಾಮಗಳಿಗೆ ಲಭ್ಯವಿರುವ ನೀರನ್ನು ಉಪಯೋಗಿಸಿಕೊಂಡು ಟ್ಯಾಂಕರ್ ಮೂಲಕ 362 ಟ್ರಿಪ್ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಹಶೀಲ್ದಾರ್, ಜಗಳೂರು ಇವರು ತಿಳಿಸಿದರು. ದಾವಣಗೆರೆ ತಾಲ್ಲೂಕಿನಲ್ಲಿ 18 ಗ್ರಾಮಗಳಿಗೆ ಟ್ಯಾಂಕರ್ ಮೂಲಕ 105 ಟ್ರಿಪ್ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಹಶೀಲ್ದಾರ್, ದಾವಣಗೆರೆ ಇವರ ಸಭೆಗೆ ತಿಳಿಸಿದರು.

ದಾವಣಗೆರೆ ನಗರ ಪ್ರದೇಶದಲ್ಲಿ ಒಟ್ಟು 41 ವಾರ್ಡ್‌ಗಳಿಗೆ 548 ಬೋರ್‌ವೆಲ್‌ಗಳಿಂದ 5 ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ ಇವರು ತಿಳಿಸಿದರು.

ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ದಾವಣಗೆರೆ ಇವರು ಮಾತನಾಡಿ ಜಿಲ್ಲೆಯಲ್ಲಿ ಒಟ್ಟು 154 ವಾರ್ಡ್‌ಗಳಿದ್ದು ಕುಡಿಯುವ ನೀರಿನ ಸಮಸ್ಯೆ ಕಂಡುಬಾರದ ಕಾರಣ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿಲ್ಲವೆಂದು ತಿಳಿಸಿದರು.

3) **<u>ಮೇವಿನ ಲಭ್ಯತೆ :</u>** ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 404933 ಜಾನುವಾರುಗಳಿದ್ದು, ಒಂದು ವಾರಕ್ಕೆ 14173 ಮೆಟ್ರಿಕ್ ಟನ್ ಮೇವು ಬೇಕಾಗುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ 303645ಮೆ.ಟನ್ ಮೇವು ಲಭ್ಯವಿದ್ದು, 21 ವಾರ ನಿಭಾಯಿಸಬಹುದೆಂದು ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದನ್ವಯ ಬರಪೀಡಿತ ಎಲ್ಲಾ ತಾಲ್ಲೂಕುಗಳಲ್ಲಿ ಗೋಶಾಲೆಗಳನ್ನು 2 ದಿನಗಳೊಳಗಾಗಿ ತೆರೆಯಲು ಎಲ್ಲಾ ತಹಶೀಲ್ದಾರರಿಗೆ ಸೂಚಿಸಿದರು ಹಾಗೂ ಸಿ.ಆರ್.ಎಫ್ ನಿಧಿಯಿಂದ ಮಿನಿ ಕಿಟ್ ಖರೀದಿಸಿ, ಹಸಿಮೇವು ಬೆಳೆಯಲು ಅನುಕೂಲವಾಗುವಂತೆ ಕಾರ್ಯದರ್ಶಿ, ವಿಪತ್ತು ನಿರ್ವಹಣೆ ಕೋಶ ಇವರಿಂದ ಅನುಮೋದನೆ ಪಡೆದು ಕ್ರಮ ವಹಿಸುವಂತೆ ತಿಳಿಸಿದರು. ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು, ಸದರಿ ಮಿನಿ ಕಿಟ್‌ಗಳ ಖರೀದಿಗಾಗಿ ಅಗತ್ಯ ಪ್ರಸ್ತಾವನೆ ಸಿದ್ಧಪಡಿಸುವಂತೆ ಪಶು ಸಂಗೋಪನಾ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು ಹಾಗೂ ಗೋಶಾಲೆಗಳಿಗೆ ಕೂಡಲೇ ಅನುದಾನ ಬಿಡುಗಡೆ ಮಾಡುವಂತೆ ಕಛೇರಿ ಸಿಬ್ಬಂದಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.
ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕಿನಲ್ಲಿ 3 ಕಡೆಗಳಲ್ಲಿ ಗೋಶಾಲೆಗಳನ್ನು ತೆರೆಯಲಾಗಿದೆ ಹಾಗೂ ಇದೇ ತಾಲ್ಲೂಕಿನ ಕಲ್ಲೇದೇವರಪುರ ಮತ್ತು ಹನುಮಂತಾಪುರ ಗ್ರಾಮಗಳಲ್ಲಿ 2 ಮೇವು ನಿಧಿ ಸ್ಥಾಪಿಸಲಾಗಿದ್ದು ಸುತ್ತಮುತ್ತಲಿನ ಗ್ರಾಮಗಳಿಗೆ ಮೇವು ಸರಬರಾಜು ಮಾಡಲಾಗುತ್ತಿದೆ ಎಂದು ತಹಶೀಲ್ದಾರ್, ಜಗಳೂರು ಇವರು ತಿಳಿಸಿದರು.

**(ಕ್ರಮ: ಉಪನಿರ್ದೇಶಕರು ಪಶುಸಂಗೋಪನೆ ಇಲಾಖೆ, ಆಯುಕ್ತರು ಮಹಾನಗರ ಪಾಲಿಕೆ, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ & ತಹಶೀಲ್ದಾರರು)**

4) **<u>ಸಾಮಾಜಿಕ ಭದ್ರತಾ ಯೋಜನೆ :</u>** ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಬಾಕಿ ಇರುವ ಅರ್ಜಿಗಳನ್ನು ಕೂಡಲೇ ಇತ್ಯರ್ಥಪಡಿಸಲು ಎಲ್ಲಾ ತಹಶೀಲ್ದಾರರಿಗೆ ಸೂಚಿಸಲಾಯಿತು. ಎಲ್ಲಾ ಫಲಾನುಭವಿಗಳಿಗೆ ಕೆ-2(ಖಜಾನೆ-2)ರ ಮುಖಾಂತರ ಹಣ ಸಂದಾಯವಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವಂತೆ ಮತ್ತು ಹಣ ಸಂದಾಯವಾಗದ ಫಲಾನುಭವಿಗಳಿಗೆ ಹಣ ಸಂದಾಯವಾಗುವಂತೆ ಮಾಡಲು ಕೂಡಲೇ ಕ್ರಮ ವಹಿಸುವಂತೆ ಎಲ್ಲಾ ತಹಶೀಲ್ದಾರರುಗಳಿಗೆ ಸೂಚಿಸಿದರು. ಕಾಲಮಿತಿಗಿಂತ ಹೆಚ್ಚಿಗೆ ಬಾಕಿ ಇರುವ ಅರ್ಜಿಗಳನ್ನು ಕೂಡಲೇ ಇತ್ಯರ್ಥ ಪಡಿಸುವಂತೆ ಸಂಬಂಧಿಸಿದ ತಹಶೀಲ್ದಾರ್‌ರವರಿಗೆ ಸೂಚಿಸಿದರು. ಜಿಲ್ಲಾಧಿಕಾರಿಗಳು ದಾವಣಗೆರೆ ಇವರು ಮಾತನಾಡಿ ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಲು ಸಹಾಯಕ ನಿರ್ದೇಶಕರು, ಸಾ.ಭ.ಯೋ. ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ ಇವರಿಗೆ ಸೂಚಿಸಿದರು ಹಾಗೂ ಪಿಂಚಣಿ ಅದಾಲತ್‌ಗಳನ್ನು ಹೆಚ್ಚು ಹೆಚ್ಚಾಗಿ ನಡೆಸಿ ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಲು ಸೂಚಿಸಿದರು.

**(ಕ್ರಮ: ಸಹಾಯಕ ನಿರ್ದೇಶಕರು, ಸಾ.ಭ.ಯೋ & ತಹಶೀಲ್ದಾರರು)**

5) **<u>ಆರ್.ಟಿ.ಸಿ ತಿದ್ದುಪಡಿ ಮತ್ತು ಪೈಕಿ ಪಹಣಿ, ಸಕಾಲ, ಬಗರ್ ಹುಕ್ಕುಂ ಸಾಗುವಳಿ :</u>** ಪಹಣಿ ತಿದ್ದುಪಡಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಒಟ್ಟು 935 ಪ್ರಕರಣಗಳು ಬಾಕಿ ಇದ್ದು, ಇವುಗಳನ್ನು ಕೂಡಲೇ ಇತ್ಯರ್ಥ ಪಡಿಸಲು ಸೂಚಿಸಲಾಯಿತು. ಪೈಕಿ ಪಹಣಿ ಒಟ್ಟು 86806 ಬಾಕಿ ಇದ್ದು ಇವುಗಳ ವಿಲೇವಾರಿಗಾಗಿ ಕ್ರಮ ವಹಿಸಲು ಡಿ.ಡಿ.ಎಲ್.ಆರ್ ಮತ್ತು ಎಲ್ಲಾ ತಹಶೀಲ್ದಾರರಿಗೆ ಅಗತ್ಯ ನಿರ್ದೇಶನ ನೀಡಲು ತಿಳಿಸಿದರು. 'ಸಕಾಲ' ಅಡಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 1300 ಪ್ರಕರಣಗಳು ಬಾಕಿ ಇದ್ದು ಇವುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ತಿಳಿಸಿದರು. ಬಗರ್ ಹುಕ್ಕುಂ ಸಾಗುವಳಿಗೆ ಸಂಬಂಧಿಸಿದಂತೆ ಈಗಾಗಲೇ ಬಗರ್ ಹುಕ್ಕುಂ ಸಮಿತಿಯಲ್ಲಿ ಅನುಮೋದನೆಗೊಂಡ ಪ್ರಕರಣಗಳಲ್ಲಿ ಫಲಾನುಭವಿಗಳಿಗೆ ಸಾಗುವಳಿ

ಹಾಗೂ ಫಸಲ್ ಬಿಮಾ ಯೋಜನೆಯಡಿಯಲ್ಲಿ ಕಳೆದ ಸಾಲಿನಲ್ಲಿ ಬಾಕಿ ಇರುವ ಬೆಳೆ ವಿಮೆ ಪ್ರಕರಣಗಳನ್ನು ಇತ್ಯರ್ಥ ಪಡಿಸುವಂತೆ ಸೂಚಿಸಲಾಯಿತು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ದಾವಣಗೆರೆ)**

10) **ಜಲಾಮೃತ ಯೋಜನೆ :** ಜಲಾಮೃತ ಯೋಜನೆಯಲ್ಲಿ ಮಕ್ಕಳಿಗೆ ಉಪಯೋಗವಾಗುವಂತಹ ಗಿಡಗಳನ್ನು ಜಿಲ್ಲೆಯ ಎಲ್ಲಾ ಶಾಲೆಗಳ ಆವರಣದಲ್ಲಿ ನೆಡೆಸಲು ಅಗತ್ಯ ಕ್ರಮ ವಹಿಸುವಂತೆ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ ಇವರಿಗೆ ಸೂಚಿಸಿದರು. ಇದಕ್ಕೆ ಬೇಕಾದ ಸಸಿಗಳನ್ನು ಅರಣ್ಯ ಇಲಾಖೆ ಮತ್ತು ಕೃಷಿ ಇಲಾಖೆಯಿಂದ ಪಡೆಯುವಂತೆ ತಿಳಿಸಲಾಯಿತು. ಶಾಲಾ ಮಕ್ಕಳಿಗೆ ಅರಿವು ಮೂಡಿಸಲು "ಗ್ರೀನ್ ಗ್ರೋ" ಕಾರ್ಯಕ್ರಮ ಹಮ್ಮಿಕೊಳ್ಳಲು ಸೂಚಿಸಲಾಯಿತು.

11) **ನಗರಾಭಿವೃದ್ಧಿ ಕೋಶ :** ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರ ಮತ್ತು ಯೋಜನಾವಾರು ಖರ್ಚಾದ ಅನುದಾನದ ವಿವರ ಮತ್ತು ಪ್ರಗತಿಯ ವಿವರವನ್ನು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ದಾವಣಗೆರೆ ಇವರು ಸಭೆಗೆ ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಸ್.ಆರ್. ಉಮಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಚೀಟಿಗಳನ್ನು ವಿತರಿಸದೇ ಇರುವುದನ್ನು ಕಂಡು ಕೂಡಲೇ ಎಲ್ಲಾ ಅರ್ಹ ಫಲಾನುಭವಿಗಳಿಗೆ ಸಾಗುವಳಿ ಚೀಟಿಗಳನ್ನು ವಿತರಿಸುವಂತೆ ಸೂಚಿಸಿದರು.

**(ಕ್ರಮ: ಉಪವಿಭಾಗಾಧಿಕಾರಿಗಳು, ದಾವಣಗೆರ & ಎಲ್ಲಾ ತಹಶೀಲ್ದಾರರು)**

6) **ಕಂದಾಯ ಅದಾಲತ್ :** ಪ್ರತಿ ತಿಂಗಳು ಆಯಾ ತಾಲ್ಲೂಕಿನ ಗ್ರಾಮಗಳಲ್ಲಿ ಕಂದಾಯ ಅದಾಲತ್ ನಡೆಸುವಂತೆ ಸೂಚಿಸಿ ಸದರಿ ಅದಾಲತ್‌ಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವಂತೆ ಸೂಚಿಸಲಾಯಿತು.

**(ಕ್ರಮ: ಉಪವಿಭಾಗಾಧಿಕಾರಿಗಳು, ದಾವಣಗೆರ & ಎಲ್ಲಾ ತಹಶೀಲ್ದಾರರು)**

7) **ಪೋಡಿ ಪ್ರಕರಣದ ವಿಲೇವಾರಿ :** ಹದ್ದುಬಸ್ತು, ದರಖಾಸ್ತು ಪ್ರಕರಣಗಳ ವಿವರವನ್ನು ದಾವಣಗೆರೆ ಜಿಲ್ಲೆಯಲ್ಲಿ 774 ಹದ್ದುಬಸ್ತು, 672 ಇತರೆ, 1205 ಇ-ಸ್ವತ್ತು ಒಟ್ಟು 9351 ಪ್ರಕರಣಗಳಲ್ಲಿ ಜುಲೈ-2019ರ ಅಂತ್ಯದವರೆಗೆ ಒಟ್ಟು 2630 ಪ್ರಕರಣವನ್ನು ವಿಲೇವಾರಿ ಮಾಡಲಾಗಿದೆ. ಒಟ್ಟ ಭೂ ಮಾಪಕನ ಸರಾಸರಿ ವಿಲೇವಾರಿ ಶೇ 28.27% ರಷ್ಟು ಪ್ರಗತಿಯಲ್ಲಿದೆ ಎಂದು ಭೂದಾಖಲೆಗಳ ಉಪನಿರ್ದೇಶಕರು ಸಭೆಗೆ ತಿಳಿಸಿದರು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡುತ್ತಾ ಪೋಡಿ ಪ್ರಕರಣಗಳ ವಿಲೇವಾರಿಗೆ ಕಂದಾಯ ಇಲಾಖೆಯ ಅಧಿಕಾರಿಗಳ ಸಹಕಾರ ಪಡೆದು ತ್ವರಿತ ವಿಲೇವಾರಿಗೆ ಕ್ರಮ ವಹಿಸುವಂತೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಭೂ ದಾಖಲೆಗಳ ಇಲಾಖೆ, ಉಪವಿಭಾಗಾಧಿಕಾರಿಗಳು, ದಾವಣಗೆರ & ಎಲ್ಲಾ ತಹಶೀಲ್ದಾರರು)**

8) **ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ :** ದಾವಣಗೆರೆ ಜಿಲ್ಲೆಯಲ್ಲಿ ಆಹಾರ ಇಲಾಖೆಯ ವ್ಯಾಪ್ತಿಯಲ್ಲಿ ದಾಸ್ತಾನು ಇರುವ ಆಹಾರ ಧಾನ್ಯಗಳ ವಿವರ ತಿಳಿಸುವಂತೆ ಉಪನಿರ್ದೇಶಕರು, ಆಹಾರ & ನಾಗರೀಕ ಸರಬರಾಜು & ಗ್ರಾಹಕರ ವ್ಯವಹಾರಗಳ, ಇಲಾಖೆ, ದಾವಣಗೆರೆ ಇವರಿಗೆ ತಿಳಿಸಿದಾಗ ಸದರಿಯವರು ಜಿಲ್ಲೆಯಲ್ಲಿ 81345 ಮೆ.ಟನ್ ಅಕ್ಕಿ, 1821.81 ಮೆ.ಟನ್. ಬೇಳೆ(ದಾಲ್), 920.27 ಮೆ.ಟನ್. ಗೋಧಿ ದಾಸ್ತಾನಿನಲ್ಲಿರುವುದಾಗಿ ಸಭೆಗೆ ತಿಳಿಸಿದರು. ಮುಂದುವರೆದು ಜಿಲ್ಲೆಯಲ್ಲಿನ ಎಲ್ಲಾ ಪಡಿತರ ಚೀಟಿಗಳಿಗೆ ಆಧಾರ ಜೋಡಣೆ ಮಾಡಲಾಗಿದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ದಾವಣಗೆರೆ ಜಿಲ್ಲೆಯಲ್ಲಿ ಎಷ್ಟು ಖಾಸಗಿ ಮತ್ತು ಸರ್ಕಾರಿ ಗೋದಾಮುಗಳು ಲಭ್ಯ ಇವೆ ಹಾಗೂ ಅವುಗಳ ಸ್ಥಿತಿಗತಿಗಳ ಬಗ್ಗೆ ಅಲ್ಲಿರುವ ಆಹಾರ ಧಾನ್ಯಗಳ ದಾಸ್ತಾನಿನ ಬಗ್ಗೆ ಸಮಗ್ರ ತಪಾಸಣೆ ನಡೆಸಿ ಒಂದು ವಾರದಲ್ಲಿ ಜಿಲ್ಲಾಧಿಕಾರಿಯವರಿಗೆ ವರದಿ ಸಲ್ಲಿಸುವಂತೆ ಉಪನಿರ್ದೇಶಕರು, ಆ&ನಾ.ಸ.ಇಲಾಖೆ, ದಾವಣಗೆರೆ ಇವರಿಗೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಆಹಾರ & ನಾಗರೀಕ ಸರಬರಾಜು & ಗ್ರಾಹಕರ ವ್ಯವಹಾರಗಳ, ಇಲಾಖೆ, ದಾವಣಗೆರೆ)**

9) **ಕೃಷಿ ಇಲಾಖೆ :** ಬೆಳೆ ವಿಮೆ, ಪಿ.ಎಂ. ಕಿಸಾನ್ ಸಮ್ಮಾನ ನಿಧಿ ಯೋಜನೆಗಳ ಪ್ರಗತಿ ವಿವರಣೆ ಪಡೆಯಲಾಯಿತು. ಪಿ.ಎಂ. ಕಿಸಾನ್ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಒಟ್ಟು 150602 ಫಲಾನುಭವಿಗಳು ಇದ್ದು ಈ ಪೈಕಿ ಡಬ್ಬಲ್ ಖಾತೆದಾರರು, ಗೈರು ಖಾತೆದಾರರು ಹಾಗೂ ಭೂಪರಿವರ್ತನೆ ಆದ ಒಟ್ಟು 69680 ಅನರ್ಹ ಪ್ರಕರಣಗಳ ಬಗ್ಗೆ ಸಂಬಂಧಪಟ್ಟವರಿಂದ ಸ್ಪಷ್ಟ ನಿರ್ದೇಶನ ಪಡೆದು ಕೂಡಲೇ ಕ್ರಮ ಕೈಗೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಲಾಯಿತು